ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

| VOLUME - 13 ಸಂಪುಟ-13 | ISSUE - 117 ಸಂಚಿಕೆ- 117 | PAGE-8 ಪುಟ-8 | ಭಾನುವಾರ 15.06.2025 | RS.2/- ಬೆಲೆ 2/- |
|---|---|---|---|---|

# ಕ ಕ ಭಾಗದಲ್ಲಿ ಆರೋಗ್ಯ ಸುಧಾರಣೆಗೆ ಬದ್ಧ

## ಗೋವಿಂದರಾವ ಸಮಿತಿ ವರದಿಯಂತೆ ವಿಶೇಷ ಅನುದಾನ ಮುಂದುವರಿಕೆ:ಸಿದ್ದರಾಮಯ್ಯ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ,ಜೂ.13: ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶ ಸಮಗ್ರ ಅಭಿವೃದ್ಧಿ ಜೊತೆಗೆ ಸಮಗ್ರ ಕರ್ನಾಟಕ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ. ಡಾ.ಡಿ.ಎಂ.ನಂಜುಂಡಪ್ಪ ಅವರ ವರದಿ ನೀಡಿ ಎರಡು ದಶಕ ಕಳೆದಿರುವುದರಿಂದ ಹಿಂದುಳಿದ ಪ್ರದೇಶದಲ್ಲಿ ಇದೂವರೆಗಿನ ಅಭಿವೃದ್ಧಿ ಹೊಂದಿರುವ ಆಧಾರದ ಮೇಲೆ ಹೊಸದಾಗಿ ಸೂಚ್ಯಂಕ ನಿಗದಿಪಡಿಸುವ ನಿಟ್ಟಿನಲ್ಲಿ ಆರ್ಥಿಕ ತಜ್ಞ ಗೋವಿಂದರಾವ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿ ರಚಿಸಿದ್ದು, ಸಮಿತಿ ವರದಿಯಂತೆ ಮುಂದಿನ ದಿನದಲ್ಲಿ ಈ ಭಾಗಕ್ಕೆ ವಿಶೇಷ ಅನುದಾನ ನೀಡುವುದನ್ನು ಮುಂದುವರೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಯಾದಗಿರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಶನಿವಾರ ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ "ಆರೋಗ್ಯ ಅವಿಷ್ಕಾರ" ಕಾರ್ಯಕ್ರಮದಡಿ ಪ್ರದೇಶದ 7 ಜಿಲ್ಲೆಗಳ 440.63 ಕೋಟಿ ರೂ.ಗಳ ವೆಚ್ಚದ ಆರೋಗ್ಯ ಇಲಾಖೆಯ ವಿವಿಧ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಜಿಲ್ಲಾ ಬಂಜಾರ ಭವನದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ತಾಯಿ-ಮಕ್ಕಳ ಮರಣ ಪ್ರಮಾಣ ಹೆಚ್ಚಿದಲ್ಲದೆ ಮಕ್ಕಳಲ್ಲಿ ರಕ್ತಹೀನತೆ ಹೆಚ್ಚಿರುವುದರಿಂದ ಇದನ್ನು ಹೋಗಲಾಡಿಸಲು ಮತ್ತು ಪ್ರದೇಶದಲ್ಲಿ ಅರೋಗ್ಯ ಸುಧಾರಣೆ ತರಲು ರಾಜ್ಯ ಸರ್ಕಾರ ಬದ್ಧವಾಗಿದೆ. ಕಳೆದ ಕಲಬುರಗಿ ಸಚಿವ ಸಂಪುಟ ಸಭೆಯಲ್ಲಿ 857 ಕೋಟಿ ರೂ. ವೆಚ್ಚದ ಆರೋಗ್ಯ ಆವಿಷ್ಕಾರ ಯೋಜನೆಗಳಿಗೆ ಅನುಮೋದನೆ ನೀಡಿದ್ದರಿಂದ ಇಂದಿಲ್ಲಿ ಚಾಲನೆ ನೀಡಲಾಗುತ್ತಿದೆ. ಇಲ್ಲಿ ಸಿ.ಟಿ.ಸ್ಕ್ಯಾನ್, ಎಂ.ಆರ್.ಐ ಸೇವೆ ಕಡಿಮೆ. ದುಬಾರಿ ವೆಚ್ಚ ಮಾಡುವ ಶಕ್ತಿ ನಮ್ಮ ಬಡ ಜನರಿಗಿಲ್ಲ. ಹೀಗಾಗಿ ಈ ಎಲ್ಲಾ ಸೇವೆಗಳನ್ನು ಮುಂದಿನ ದಿನದಲ್ಲಿ ಪೂರೈಕೆಗೆ ಆರೋಗ್ಯ ಇಲಾಖೆ

(2ನೇ ಪುಟ ನೋಡಿ)






ಒಂದನೇ ಪುಟದಿಂದ

## ಗೋವಿಂದರಾವ ಸಮಿತಿ ವರದಿಯಂತೆ ವಿಶೇಷ ಅನುದಾನ ಮುಂದುವರಿಕೆ:ಸಿದ್ದರಾಮಯ್ಯ

ಮುಂದಾಗಬೇಕು ಎಂದರು.ಆರೋಗ್ಯ, ಶಿಕ್ಷಣ, ಉದ್ಯೋಗ ಕ್ಷೇತ್ರದಲ್ಲಿ ಕಲ್ಯಾಣ ಪ್ರದೇಶವು ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದಿದೆ. ಇದನ್ನು ಸರಿದೂಗಿಸಬೇಕೆಂಬುದು ನಮ್ಮ ಮಹಾದಾಸೆಯಾಗಿದೆ. ಈ ನಿಟ್ಟಿನಲ್ಲಿ ಪ್ರಸಕ್ತ 2025-26ನೇ ಸಾಲಿಗೆ 5,000 ಕೋಟಿ ರೂ. ಅನುದಾನ ಕೆ.ಕೆ.ಆರ್.ಡಿ.ಬಿ. ಮಂಡಳಿಗೆ ನೀಡಿದ್ದು, ಅಷ್ಟು ಹಣ ಖರ್ಚು ಮಾಡಿ ಪ್ರದೇಶದ ಜನರ ಒಳಿತಿಗೆ ಶ್ರಮಿಸುವಂತೆ ಕೆ.ಕೆ.ಆರ್.ಡಿ.ಬಿ ಮಂಡಳಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರಿಗೆ ಸೂಚನೆ ನೀಡಿದ್ದೇನೆ ಎಂದರು.

ಕಳೆದ 3 ವರ್ಷದಲ್ಲಿ ನಮ್ಮ ಸರ್ಕಾರ ಮಂಡಳಿಗೆ 13,000 ಕೋಟಿ ರೂ. ನೀಡಿದೆ. ಕಳೆದ 2013-18ರ ಅವಧಿಯಲ್ಲಿ ಚುನಾವಣಾ ಪೂರ್ವ ಪ್ರಾಣಾಳಿಕೆಯಲ್ಲಿ ನೀಡಿದ 165 ರಲ್ಲಿ 158 ಹಾಗೂ 2023ರಲ್ಲಿ ನೀಡಿದ 593ರಲ್ಲಿ 242 ಭರವಸೆಗಳನ್ನು ಈಡೇರಿಸಿದ್ದೇವೆ. ನುಡಿದಂತೆ ನಡೆಯುವ ಸರ್ಕಾರ ನಮ್ಮದು. ಅಧಿಕಾರಕ್ಕೆ ಬಂದ 6 ತಿಂಗಳ ಅವಧಿಯಲ್ಲಿಯೇ ಐದು ಗ್ಯಾರಂಟಿ ಸಮರ್ಪಕ ಅನುಷ್ಠಾನಕ್ಕೆ ತಂದು, ಇದೂವರೆಗೆ 90 ಸಾವಿರ ಕೋಟಿ ರೂ. ಖರ್ಚು ಮಾಡಿದ್ದೇವೆ. ಕೇಂದ್ರ ಸರ್ಕಾರ ಡೀಸೆಲ್, ಪೆಟ್ರೋಲ್, ಜಿ.ಎಸ್.ಟಿ. ಸೇರಿದಂತೆ ಬೆಲೆ ಏರಿಕೆ ನೀತಿಯಿಂದ ತತ್ತರಿಸಿದ ಜನಕ್ಕೆ ಆರ್ಥಿಕ ನೆರವು ನೀಡಿದ್ದೇವೆ. ಗ್ಯಾರಂಟಿ ಅನುಷ್ಟಾನದಿಂದ ರಾಜ್ಯ ದಿವಾಳಿಯಾಗುತ್ತೆ ಎಂದು ವಿರೋಧ ಪಕ್ಷಗಳು ಅಪಪ್ರಚಾರ ಮಾಡಿದ್ರು, ಅದನ್ನು ಸುಳ್ಳಾಗಿಸಿ ಗ್ಯಾರಂಟಿ ಜೊತೆಗೆ ಶಿಕ್ಷಣ, ನೀರಾವರಿ, ಆರೋಗ್ಯ, ಮೂಲಸೌಕರ್ಯ, ರಸ್ತೆ, ಉದ್ಯೋಗ ಕಲ್ಪಿಸುವಂತಹ ಕೆಲಸಗಳು ನಮ್ಮ ಸರ್ಕಾರ ಪ್ರಮಾಣಿಕವಾಗಿ ಮಾಡುತ್ತಿದೆ ಎಂದು ತಮ್ಮ ಸರ್ಕಾರದ ಸಾಧನೆಯನ್ನು ಜನರ ಮುಂದಿಟ್ಟರು.

2013ರಲ್ಲಿ ಡಾ.ಮಲ್ಲಿಕಾರ್ಜುನ ಖರ್ಗೆ ಮತ್ತು ಮಾಜಿ ಮುಖ್ಯಮಂತ್ರಿ ದಿ.ಧರ್ಮಸಿಂಗ್ ಅವರ ವಿಶೇಷ ಪ್ರಯತ್ನದಿಂದ ಈ ಭಾಗಕ್ಕೆ 371ಜೆ ಕಾಯ್ದೆ ಜಾರಿಗೆ ಬಂತು. ಅಂದು ರಾಜ್ಯದಲ್ಲಿ ಆಗತಾನೇ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರ ಹೆಚ್.ಕೆ.ಪಾಟೀಲ ನೇತೃತ್ವದಲ್ಲಿ ಉಪ ಸಚಿವ ಸಂಪುಟ ಸಮಿತಿ ರಚಿಸಿ ವರದಿ ಪಡೆದು ಯಥಾವತ್ತಾಗಿ ಜಾರಿಗೆ ತಂದಿದ್ದೇವೆ ಎಂದು ತಮ್ಮ ಹಿಂದಿನ ಅವಧಿಯ ಕೆಲಸ ಕಾರ್ಯಗಳನ್ನು ನೆನೆಸಿಕೊಂಡರು.

ಯಾದಗಿರಿಗೆ 3 ವರ್ಷದಲ್ಲಿ ಒಳಚರಂಡಿ ವ್ಯವಸ್ಥೆ: ಸ್ಥಳೀಯ ಶಾಸಕ ಚೆನ್ನಾರೆಡ್ಡಿ ಪಾಟೀಲ ತುನ್ನೂರ ಅವರ ಕೋರಿಕೆಯಂತೆ ಯಾದಗಿರಿ ನಗರಕ್ಕೆ ಮುಂದಿನ ಮೂರು ವರ್ಷದಲ್ಲಿ ಹಂತ ಹಂತವಾಗಿ ಒಳಚರಂಡಿ ವ್ಯವಸ್ಥೆ ಜಾರಿಗೆ ತಂದು ನಗರ ನಿವಾಸಿಗಳಿಗೆ ಉತ್ತಮ ನಾಗರಿಕ ಮೂಲಸೌಕರ್ಯ ಕಲ್ಪಿಸಲಾಗುವುದು ಎಂದು ಸಿ.ಎಂ. ಸಿದ್ದರಾಮಯ್ಯ ವೇದಿಕೆಯಲ್ಲಿ ಘೋಷಣೆ ಮಾಡಿದರು.

ಉಚಿತ ನಿವೇಶನ ಮಂಜೂರಾತಿ ಪತ್ರ ಹಸ್ತಾಂತರ: ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದಿವಂಗತ ಕೊಲ್ಲೂರು ಮಲ್ಲಪ್ಪ ಅವರ ಸ್ಮಾರಕ ನಿರ್ಮಾಣಕ್ಕೆ ಸರ್ಕಾರದಿಂದ ಉಚಿತವಾಗಿ 2 ಎಕರೆ ಭೂಮಿ ಮಂಜೂರು ಮಾಡಿದ ಆದೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ವೇದಿಕೆ ಮೇಲಿದ್ದ ಗಣ್ಯರು ದಿ.ಕೊಲ್ಲೂರು ಮಲ್ಲಪ್ಪ ಸ್ಮಾರಕ ಟ್ರಸ್ಟಿನ ಪದಾಧಿಕಾರಿಗಳಾದ ಕೆ.ವಿಶ್ವನಾಥ ನೀಲಹಳ್ಳಿ, ಸಾಯಬಣ್ಣ ಕೆಂಗೇರಿ, ಮಲ್ಲಣ್ಣ ಐಕೂರು, ಸಿದ್ದಣ್ಣಗೌಡ ವಡಿಗೇರಿ ಅವರಿಗೆ ಹಸ್ತಾಂತರಿಸಿದರು. ಮುಂದಿನ ಒಂದು ವರ್ಷದಲ್ಲಿ ಸ್ಮಾರಕ ನಿರ್ಮಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪೂರ ಅವರಿಗೆ ಸಿ.ಎಂ. ಸೂಚನೆ ನೀಡಿದ್ದರು.

41 ಕಾಮಗಾರಿಗಳಿಗೆ 411.88 ಕೋಟಿ ರೂ. ವೆಚ್ಚ: ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಯಾದಗಿರಿ, ಬೀದರ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಒಟ್ಟಾರೆ 411.88 ಕೋಟಿ ರೂ. ವೆಚ್ಚದಲ್ಲಿ ಹೊಸದಾಗಿ 12 ಪ್ರಾಥಮಿಕ ಆರೋಗ್ಯ ಕೇಂದ್ರ, 1 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, 2 ತಾಲೂಕು ಆಸ್ಪತ್ರೆ ನಿರ್ಮಾಣಕ್ಕೆ, 6 ಪ್ರಾಥಮಿಕ ಅರೋಗ್ಯ ಕೇಂದ್ರದಿಂದ ಸಮುದಾಯ ಆರೋಗ್ಯ ಕೇಂದ್ರಕ್ಕೆ, 30 ಹಾಸಿಗೆಗಳಿಂದ 50 ಹಾಸಿಗೆಗೆ ಮೇಲ್ದರ್ಜೆಗೆ ಏರಿಸುವ 16 ಸಮುದಾಯ ಆರೋಗ್ಯ ಕೇಂದ್ರಗಳು, 1 ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 100 ಹಾಸಿಗೆಯ ತಾಲೂಕಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸುವುದು, 100 ಹಾಸಿಗೆ ಸಾಮರ್ಥ್ಯದ 3 ತಾಲೂಕಾ ಆಸ್ಪತ್ರೆ 150 ಹಾಸಿಗೆಗೆ ಮೇಲ್ದರ್ಜೆಗೇರಿಸುವ ಯೋಜನೆಗೆ ಇಂದಿಲ್ಲಿ ಚಾಲನೆ ದೊರೆತಿದೆ. ಒಟ್ಟಾರೆಯಾಗಿ 41 ಕಾಮಗಾರಿಗಳಿಗೆ 411.88 ಕೋಟಿ ರೂ. ವೆಚ್ಚ ಮಾಡಲಾಗುತ್ತಿದ್ದು, ಇದರಲ್ಲಿ ಕೆ.ಕೆ.ಆರ್.ಡಿ.ಬಿ ಮಂಡಳಿ 208.94 ಕೋಟಿ ರೂ. ಅನುದಾನ ನೀಡುವ ಮೂಲಕ ಪ್ರದೇಶದ ಅಭಿವೃದ್ಧಿಗೆ ಮುಂದಾಗಿದೆ.

ಗಿರಿ ಜಿಲ್ಲೆಗೆ 55.80 ಕೋಟಿ ರೂ.: ಆರೋಗ್ಯ ಆವಿಷ್ಕಾರ ಯೋಜನೆಯಡಿ ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ಮುದನುರು, ನಾರಾಯಣಪುರ, ಹೆಗ್ಗನದೊಡ್ಡಿ, ತಿಂಥಣಿಯಲ್ಲಿ ತಲಾ 4 ಕೋಟಿ ರೂ. ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, 14 ಕೋಟಿ ರೂ. ವೆಚ್ಚದಲ್ಲಿ ಶಹಾಪೂರ ಗೋಗಿ ಪ್ರಾ.ಆ.ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೆ, ತಲಾ 6.45 ಕೋಟಿ ರೂ. ವೆಚ್ಚದಲ್ಲಿ ಶಹಾಪುರ ತಾಲೂಕಿನ ಡೋರಣಹಳ್ಳಿ, ಗುರುಮಠಕಲ್, ಹುಣಸಗಿ, ಕೆಂಭಾವಿ 30 ಹಾಸಿಗೆಯ ಸಮುದಾಯ ಆರೋಗ್ಯ ಕೇಂದ್ರಗಳನ್ನು 50 ಹಾಸಿಗೆ ಸಾಮರ್ಥ್ಯಕ್ಕೆ ಹೆಚ್ಚಿಸುವುದಕ್ಕೆ ಇಂದಿಲ್ಲಿ ಅಡಿಗಲ್ಲು ನೆರವೇರಿಸಿದ್ದು, ಇದರಿಂದ ಗಿರಿ ಜಿಲ್ಲೆ ಯಾದಗಿರಿಯಲ್ಲಿ 9 ಕಾಮಗಾರಿಗಳಿಗೆ 55.80 ಕೋಟಿ ರೂ. ವಿನಿಯೋಗಿಸಲಾಗುತ್ತಿದೆ.

ಯಾದಗಿರಿ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಸಭೆ ವಿಪಕ್ಷ ನಾಯಕ ಡಾ.ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ್, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳು ಮತ್ತು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪೂರ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹಾದೇವಪ್ಪ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ.ಸುಧಾಕರ್, ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ ಬಿ. ಖಂಡ್ರೆ, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಆರ್. ಪಾಟೀಲ್, ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್, ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು, ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ ಉಪಾಧ್ಯಕ್ಷ ಬಿ.ಆರ್.ಪಾಟೀಲ್, ಸಂಸದರಾದ ಜಿ.ಕುಮಾರ ನಾಯಕ್, ರಾಧಾಕೃಷ್ಣ ದೊಡ್ಡಮನಿ, ರಾಜ್ಯ ಸಭೆ ಸದಸ್ಯ ಡಾ.ಸೈಯದ್ ನಾಸೀರ್ ಹುಸೇನ್ ಇದ್ದರು.

ಇದಲ್ಲದೆ ವಿಧಾನಸಭೆ ಶಾಸಕರಾದ ಎಂ.ವೈ ಪಾಟೀಲ, ಅಲ್ಲಮಪ್ರಭು ಪಾಟೀಲ್, ಶರಣಗೌಡ ಕಂದಕೂರ, ರಾಜಾ ವೇಣುಗೋಪಾಲ ನಾಯಕ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ್, ತಿಪ್ಪಣ್ಣಪ್ಪ ಕಮಕನೂರ, ಭೀಮರಾವ ಬಿ.ಪಾಟೀಲ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಬಸನಗೌಡ ದದ್ದಲ್, ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಅಧ್ಯಕ್ಷ ಬಾಬುರಾವ್ ಚಿಂಚನಸೂರ್, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ ಮತ್ತು ಯೋಜನಾ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಜೈನ್, ಕಲಬುರಗಿ ವಿಭಾಗ ಪ್ರಾದೇಶಿಕ ಆಯುಕ್ತ ಕೃಷ್ಣ ಭಾಜಪೇಯಿ, ಕೆ.ಕೆ.ಆರ್.ಡಿ.ಬಿ. ಮಂಡಳಿ ಕಾರ್ಯದರ್ಶಿ ಎಂ.ಸುಂದರೇಶ ಬಾಬು, ಯಾದಗಿರಿ ಡಿ.ಸಿ. ಡಾ.ಬಿ.ಸುಶೀಲಾ, ಜಿಲ್ಲಾ ಪಂಚಾಯತ್ ಸಿ.ಇ.ಓ ಲವೀಶ್ ಓರಡಿಯಾ, ಎಸ್.ಪಿ. ಪೃಥ್ವಿಕ್ ಶಂಕರ, ಅಪರ ಜಿಲ್ಲಾಧಿಕಾರಿ ಶರಣಪ್ಪ ಕೋಟೆಪ್ಪಗೋಳ ಸೇರಿದಂತೆ ಇತರೆ ಚುನಾಯಿತ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಹಾಗೂ ಸಾವಿರಾರು ಸಂಖ್ಯೆಯಲ್ಲಿ ಜನಸ್ತೋಮ ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾಯಿತು.

## ಸೋಯಾಬಿನ್ ಬಿತ್ತನೆ ಬೀಜಕ್ಕೆ ನಿಲ್ಲದ ಪರದಾಟ



ಬೀದರ. ಜೂ. 15 : ಔರಾದ್ ತಾಲ್ಲೂಕಿನಾದ್ಯಂತ ಉತ್ತಮ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳು ಚುರುಕು ಪಡೆದುಕೊಂಡಿವೆ.

ತಾಲ್ಲೂಕಿನ ಶೇ 80ರಷ್ಟು ರೈತರು ತಮ್ಮ ಹೊಲದಲ್ಲಿ ಸೋಯಾಬಿನ್ ಬಿತ್ತನೆಗೆ ಸಿದ್ಧತೆ ನಡೆಸಿದ್ದಾರೆ. ಹೀಗಾಗಿ ಸಹಜವಾಗಿಯೇ ಸೋಯಾ ಬಿತ್ತನೆ ಬೀಜಕ್ಕೆ ಬೇಡಿಕೆ ಜಾಸ್ತಿಯಾಗಿದೆ.

ಹೀಗಾಗಿ ಬಹುತೇಕ ಎಲ್ಲ ಬೀಜ ವಿತರಣೆ ಕೇಂದ್ರದ ಎದುರು ರೈತರು ಸಾಲುಗಟ್ಟಿ ನಿಲ್ಲುತ್ತಿದ್ದಾರೆ.

ಈಗಾಗಲೇ ಬಹುತೇಕ ಬಿತ್ತನೆ ಬೀಜ ವಿತರಣೆ ಮುಗಿದಿದ್ದರೂ ರೈತರು ವಿತರಣೆ ಕೇಂದ್ರಕ್ಕೆ ಬರುವುದು ನಿಂತಿಲ್ಲ. ಇನ್ನು ನಮಗೆ ಬೀಜ ಸಿಕ್ಕಿಲ್ಲ ಎಂದು ಅನೇಕ ಗ್ರಾಮಗಳ ರೈತರು ಗೋಳಾಡುತ್ತಿದ್ದಾರೆ.

'ಕಮಲನಗರ ಹಾಗೂ ಔರಾದ್

ತಾಲ್ಲೂಕು ಸೇರಿ ಒಟ್ಟು 35 ಸಾವಿರ ಕ್ವಿಂಟಲ್ ಸೋಯಾಬಿನ್ ಬೀಜಕ್ಕೆ ಬೇಡಿಕೆ ಸಲ್ಲಿಸಲಾಗಿದೆ. ಈ ಪೈಕಿ ಈಗಾಗಲೇ 30 ಸಾವಿರ ಕ್ವಿಂಟಲ್ ಬೀಜ ವಿತರಿಸಿದ್ದೇವೆ' ಎಂದು ಸಹಾಯಕ ಕೃಷಿ ನಿರ್ದೇಶಕ ಧೂಳಪ್ಪ ತಿಳಿಸಿದ್ದಾರೆ.

### ಕೌಠಾದಲ್ಲಿ ರೈತರ ಪ್ರತಿಭಟನೆ

ಔರಾದ್: ತಾಲ್ಲೂಕಿನ ಕೌಠಾ (ಬಿ) ಗ್ರಾಮದ ರೈತ ಸಂಪರ್ಕ ಕೇಂದ್ರದ ಬಳಿ ರೈತರು ಶುಕ್ರವಾರ ಕೆಲ ಹೊತ್ತು ಪ್ರತಿಭಟನೆ ನಡೆಸಿದರು. ಈಗಾಗಲೇ ಮಳೆಯಾಗಿ ಬಿತ್ತನೆ ಶುರುವಾಗಿದೆ. ಆದರೆ ನಮಗೆ ಇನ್ನೂ ಬೀಜ ಸಿಕ್ಕಿಲ್ಲ ಎಂದು ಬಲ್ಲೂರ್ ಕೌಡಗಾಂವ್ ಆಲೂರ್ ಗ್ರಾಮದ ರೈತರು ಆಕ್ರೋಶ ವ್ಯಕ್ತಪಡಿಸಿ ಕೆಲ ಕಾಲ ರಸ್ತೆಯಲ್ಲಿ ವಾಹನ ಸಂಚಾರ ತಡೆದರು. ಈಗಾಗಲೇ ಕೌಠಾ ಗ್ರಾಮಸ್ಥರಿಗೆ ಬೀಜ ವಿತರಿಸಲಾಗಿದೆ. ಆಲೂರ್ ಬೇಲೂರ ಕೌಡಗಾಂವ್ ಗ್ರಾಮಸ್ಥರಿಗೆ ನಾಳೆ ಬೀಜ ವಿತರಿಸುತ್ತೇವೆ ಎಂದು ಸಹಾಯಕ ಕೃಷಿ ನಿರ್ದೇಶಕ ಧೂಳಪ್ಪ ತಿಳಿಸಿದ್ದಾರೆ.

### ಹೆಚ್ಚುವರಿ ಬೀಜಕ್ಕೆ ಶಾಸಕ ಚವಾಣ್ ಬೇಡಿಕೆ



ಔರಾದ್: 'ಕ್ಷೇತ್ರದ ರೈತರು ಸೋಯಾಬಿನ್ ಬೀಜಕ್ಕಾಗಿ ಪರದಾಡುತ್ತಿದ್ದು ಸರ್ಕಾರ ಅಗತ್ಯ ಬಿತ್ತನೆ ಬೀಜದ ವ್ಯವಸ್ಥೆ ಮಾಡಬೇಕು' ಎಂದು ಶಾಸಕ ಪ್ರಭು ಚವಾಣ್ ಆಗ್ರಹಿಸಿದ್ದಾರೆ. 'ಕಮಲನಗರ ಔರಾದ್ ತಾಲ್ಲೂಕಿನ ರೈತರು ಸೋಯಾಬಿನ್ ಬೀಜದ ಮೇಲೆ ಅವಲಂಬಿತರಾಗಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಗೊತ್ತಿದ್ದರೂ ರೈತರಿಗೆ ಸಾಕಾಗುವಷ್ಟು ಬೀಜ ವಿತರಿಸಿಲ್ಲ. ಹೀಗಾಗಿ ಬೀಜದ ಕೊರತೆಯಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ಯಾವುದೇ ಕಾರಣಕ್ಕೂ ರೈತರಿಗೆ ಬೀಜದ ಕೊರತೆ ಆಗದಂತೆ ನೋಡಿಕೊಳ್ಳಬೇಕು' ಎಂದು ಅವರು ಕೃಷಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

## ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಅಧಿಕಾರ:ಭಾಂಡಗೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜೂ.14- ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಗೆದ್ದು ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.




ನಗರದ ಬಿ.ವಿ.ವಿ.ಸಂಘದ ಮಿನಿ ಸಭಾಂಗಣದಲ್ಲಿ ಶನಿವಾರ ವಿಕಸಿತ ಭಾರತ ಮೋದಿ ಸರಕಾರ 11 ವರ್ಷದ ಸಾಧನಾ ಅಭಿಯಾನದ ಕುರಿತು ನಡೆದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ಮೋದಿಯವರಿಂದಾಗಿ ಇಂದು ಇಡೀ ಜಗತ್ತು ಭಾರತದತ್ತ ತಿರುಗಿ ನೋಡುತ್ತಿದೆ, ಜಾಗತಿಕವಾಗಿ ಭಾರತ ಪ್ರಭಲವಾಗಿದೆ ಎಂದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಾಗಲಕೋಟೆ ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲ ಕ್ಷೇತ್ರಗಳಲ್ಲಿಯೂ ಭಾರತೀಯ ಜನತಾ ಪಾರ್ಟಿ ಗೆದ್ದು ಅಧಿಕಾರದ ಗದ್ದುಗೆ ಹಿಡಿಯಲಿದೆ. ಕಾರ್ಯಕರ್ತರು ಅಹಿರ್ನಿಸಿ ಶ್ರಮಿಸಿ ಪಕ್ಷವನ್ನು ಸಂಘವನ್ನು ಸಂಘಟಿಸಿ ಅಧಿಕಾರಕ್ಕೆ ತರುವ ಸಂಕಲ್ಪ ಮಾಡಬೇಕಿದೆ ಎಂದು ಭಾಂಡಗೆ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ಸದೃಢ ಹಾಗೂ ಸಮೃದ್ಧ ಭಾರತ ಕಟ್ಟುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ 11 ವರ್ಷಗಳ ಆಡಳಿತ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಮೈಲುಗಲ್ಲಾಗಿದೆ. ವಿಕಸಿತ ಭಾರತಕ್ಕೆ ಭದ್ರ ಬುನಾದಿ ಹಾಕುವ ನಿಟ್ಟಿನಲ್ಲಿ ಉದ್ಯೋಗಾವಕಾಶ ಸೃಷ್ಟಿಸಿ, ಹಲವು ಯೋಜನೆಗಳ ಮೂಲಕ ಸಂಕಲ್ಪಿತ ಗುರಿ ಸಾಧಿಸಿರುವ ಹೆಮ್ಮೆಯ ಪ್ರಧಾನಮಂತ್ರಿಯವರ ಕೇಂದ್ರದ ಯೋಜನೆಗಳು ಶತಮಾನದ ಶಾಶ್ವತ ಹೆಜ್ಜೆ ಗುರುತುಗಳಾಗಿವೆ ಎಂದರು.


ಸಾಧನಾ ಅಭಿಯಾನದ ಜಿಲ್ಲಾ ಸಹ ಸಂಚಾಲಕ ನಂದು ಗಾಯಕವಾಡ ಪ್ರಾಸ್ತಾವಿಕವಾಗಿ ಮಾತನಾಡಿ, ದೇಶದಲ್ಲಿ ಅಟಲ್ ಬಿಹಾರಿ ವಾಜಪಾಯಿ ಅವರಿಂದ ಈಗಿನ ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದಲ್ಲಿ ದೇಶ ಕಂಡ ಪ್ರಗತಿಯನ್ನು ವಿವರಿಸಿದರು. ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣೂರ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಅಭಿಯಾನದ ಜಿಲ್ಲಾ ಸಹ ಸಂಚಾಲಕ ಬಸವರಾಜ ಅವರಾದಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಮುಖಂಡರಾದ ಡಾ.ಎಂ. ಎಸ್.ದಡ್ಡೆನ್ನವರ, ಗುಂಡುರಾವ ಶಿಂಧೆ, ಬಸವರಾಜ ಯಂಕಂಚಿ, ಲಕ್ಷ್ಮೀನಾರಾಯಣ ಕಾಸಟ್, ಮುತ್ತಣ್ಣ ಬೆಣ್ಣೂರ ಸೇರಿದಂತೆ ನಗರಸಭೆ ಸದಸ್ಯರುಗಳು, ಪಕ್ಷದ ಮುಖಂಡರು, ನಗರ ಹಾಗೂ ಗ್ರಾಮೀಣ ಮಂಡಲಗಳ ಪದಾಧಿಕಾರಿಗಳು, ಜಿಲ್ಲಾ ಸಂಚಾಲಕರು, ವಿವಿಧ ಮೋರ್ಚಾ ಪದಾಧಿಕಾರಿಗಳು ಕಾರ್ಯಕರ್ತರು ಭಾಗವಹಿಸಿದ್ದರು.

ಅಹಮದಾಬಾದ್‌ನಲ್ಲಿ ನಡೆದ ವಿಮಾನ ದುರಂತದಲ್ಲಿ ಸಾವನ್ನಪ್ಪಿದವರಿಗೆ ಮೌನಾಚರಣೆ ಮೂಲಕ ಶೃದ್ಧಾಂಜಲಿ ಸಲ್ಲಿಸಲಾಯಿತು. ಮಲ್ಲೇಶ ವಿಜಾಪುರ ಸ್ವಾಗತಿಸಿದರು. ಕಲ್ಲಪ್ಪ ಭಗವತಿ ಪ್ರತಿಜ್ಞಾವಿಧಿ ಬೋಧಿಸಿದರು. ಮುತ್ತು ಸಿಮಿಕೇರಿ ವಂದಿಸಿದರು.

ಉಮೇಶ ಹಂಚಿನಾಳ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ವಿಕಸಿತ ಭಾರತ ಮೋದಿ ಸರಕಾರ 11ವರ್ಷದ ಸಾಧನಾ ಅಭಿಯಾನದ ನಗರ ಮಂಡಲದ ಸಂಚಾಲಕರನ್ನಾಗಿ ಚಂದ್ರಕಾಂತ ಪತ್ತಾರ, ಕಾಂತು ಖಾತೆದಾರ, ಸಿದ್ದೇಶ್ವರ ಜಿರಗಿ, ಗ್ರಾಮೀಣ ಮಂಡಲ ಸಂಚಾಲಕರನ್ನಾಗಿ ಕಲ್ಲಪ್ಪ ಭಗವತಿ, ಮುತ್ತು ಸೀಮಿಕೇರಿ, ಬಸವರಾಜ ಪಾಟೀಲ ಅವರನ್ನು ನೇಮಿಕ ಮಾಡಲಾಯಿತು.

## ನವೆಂಬರ್ ನಂತರ ಡಿಕೆಶಿ ಅಥವಾ ಖರ್ಗೆ ಸಿಎಂ: ಎಚ್ ವಿಶ್ವನಾಥ್



ಮೈಸೂರು:ಜೂ.14:ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಚ್ಚೆಂದರೆ ನವೆಂಬರ್ ವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ.ನಂತರ ಸಿಎಂ ಬದಲಾವಣೆ ಆಗುತ್ತದೆ. ಡಿ.ಕೆ ಶಿವಕುಮಾರ್ ಅಥವಾ ಮಲ್ಲಿಕಾರ್ಜುನ ಖರ್ಗೆ ಈ ಇಬ್ಬರಲ್ಲಿ ಒಬ್ಬರು ಸಿಎಂ ಆಗುತ್ತಾರೆ ಎಂದು ವಿಧಾನಪರಿಷತ್ ಸದಸ್ಯ ಎಚ್ ವಿಶ್ವನಾಥ್ ಅವರು ಶನಿವಾರ ಹೇಳಿದ್ದಾರೆ.

ಇಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ವಿಶ್ವನಾಥ್ ಅವರು, ಸಿಎಂ ಸಿದ್ದರಾಮಯ್ಯ ಅವರು ಹತ್ತು ವರ್ಷದ ಹಿಂದೆ-ಯೇ ಜಾತಿವಾರು ಜನಗಣತಿ ಮಾಡಿಸಿದ್ದರು. ಒಂದುವರೆ ಲಕ್ಷ ಶಿಕ್ಷಕರು 2 ವರ್ಷ ಗಣತಿ ಮಾಡಿದ್ದರು. ಅದಕ್ಕೆ 170 ಕೋಟಿಗೂ ಅಧಿಕ ಹಣ ಖರ್ಚಾಗಿತ್ತು. ಆಗಿನಿಂದಲೂ ವರದಿ ಬಹಿರಂಗ ಮಾಡದೇ ಹಾಗೆಯೇ ಇಟ್ಟುಕೊಂಡಿದ್ದರು. ಇದೀಗ ಹೈಕಮಾಂಡ್ ಗೆ ಹೆದರಿಕೊಂಡು ಮತ್ತೆ ಜಾತಿಗಣತಿ ಮಾಡುವುದಾಗಿ ಹೇಳಿದ್ದಾರೆ. ಇದು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಜಾತಿಗಣತಿ ಮಾಡಲು ಶಿಕ್ಷಕರು ಬೇಕು. ಆದರೆ ಈಗ ತಾನೇ ಶಾಲೆಗಳು ಆರಂಭವಾಗಿರುವುದರಿಂದ ಶಿಕ್ಷಕರು ಲಭ್ಯವಾಗೋದಿಲ್ಲ. ಸಿದ್ದರಾಮಯ್ಯ ಹಾವಾಡಿಗನ ರೀತಿ ಈಗ ಮತ್ತೆ ಜಾತಿಗಣತಿ ಮಾಡಿಸುವುದಾಗಿ ಹೇಳ್ತಿದ್ದಾರೆ. ಆದರೆ ಮುಂದಿನ ನವೆಂಬರ್ ಗೆ ಸಿದ್ದರಾಮಯ್ಯ ಚೇಂಜ್ ಆಗ್ತಾರೆ. ಅದು ಹೇಗೆ ಜಾತಿಗಣತಿ ಮಾಡಿಸುತ್ತೀರಿ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳ ವೋಟು ಪಡೆದು ಎರಡನೇ ಸಲ ಮುಖ್ಯಮಂತ್ರಿಯಾದವರು. ಅಹಿಂದ ವರ್ಗದವರಿಗೆ ಸುಳ್ಳು ಹೇಳುತ್ತಿದ್ದಾರೆ, ಜಾತಿ ಗಣತಿ ಮರುಸರ್ವೇಯನ್ನು ಅವರು ಮೂರು ತಿಂಗಳಲ್ಲಿ ಮಾಡಿಸೋದು ಹೇಗೆ ಸಾಧ್ಯ? ಮರು ಗಣತಿ ಮಾಡಿಸುವುದಿಲ್ಲ ಎಂದು ಹೈಕಮಾಂಡ್ ಗೆ ಹೇಳಿದ್ದರೇ ಸಿದ್ದರಾಮಯ್ಯ ಹೀರೋ ಆಗುತ್ತಿದ್ದರು. ಆದರೆ ಸಿದ್ದರಾಮಯ್ಯ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡಿದರು ಎಂದು ವಾಗ್ದಾಳಿ ನಡೆಸಿದರು.

ಮೂರು ತಿಂಗಳೊಳಗೆ ಜಾತಿಗಣತಿ ಮಾಡಲು ಸಾಧ್ಯವಿಲ್ಲ. ಸಿದ್ದರಾಮಯ್ಯ ಸುಮ್ಮನೇ ದೇವರಾಜ ಹೆಸರು ಹೇಳಬೇಡಿ. ಪ್ರಾಮಾಣಿಕತೆ ಇಲ್ಲದ ಸಿಎಂ ಸಿದ್ದರಾಮಯ್ಯ ಎಂದು ಚರಿತ್ರೆಯಲ್ಲಿ ದಾಖಲಾಗಿ ಹೋದರು. ಸುಳ್ಳು ಹೇಳಿಕೊಂಡು ಓಡಾಡುತ್ತಿರುವ ಸಿಎಂ ಸಿದ್ದರಾಮಯ್ಯ ಎಂದು ಚರಿತ್ರೆಯಲ್ಲಿ ದಾಖಲಾಗುತ್ತಾರೆ ಎಂದರು.

## ವಿವೇಚನೆಯಿಂದ ಗುರಿ ಆಯ್ಕೆ ಮಾಡಿಕೊಳ್ಳಿ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಜೂ.14:ವಿದ್ಯಾರ್ಥಿಗಳು ವಿವೇಚನೆಯಿಂದ ಜೀವನದ ಗುರಿ ಆಯ್ಕೆ ಮಾಡಿಕೊಳ್ಳಬೇಕು ಎಂದು ಚಿದಂಬರ ಶಿಕ್ಷಣ ಸಂಸ್ಥೆಯ ನಿರ್ದೇಶಕ ಸ್ವಾತ್ಮಾನಂದಗಿರಿ ಸ್ವಾಮೀಜಿ ಹೇಳಿದರು.

ನಗರದ ಶ್ರೀಮತಿ ಇಂದಿರಾಬಾಯಿ ಗುರುತಪ್ಪ ಶೆಟಕಾರ್ ಪ್ರೌಢಶಾಲೆಯಲ್ಲಿ ಶನಿವಾರ ನಡೆದ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಎಂಟನೇ ತರಗತಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಗುರಿ ದೊಡ್ಡದಾಗಿರಬೇಕು. ಆಸಕ್ತಿಯ ಕ್ಷೇತ್ರ ಆಯ್ಕೆ ಮಾಡಿಕೊಂಡರೆ ಸಾಧನೆ ಸುಲಭವಾಗುತ್ತದೆ ಎಂದು ತಿಳಿಸಿದರು. ಉದ್ಘಾಟನೆ ನೆರವೇರಿಸಿದ ಸಂಸ್ಥೆಯ ಆಡಳಿತಾಧಿಕಾರಿ ಡಾ. ಹಾವಗಿರಾವ್ ಮೈಲಾರೆ ಮಾತನಾಡಿ, ಇಂದು ಮಕ್ಕಳಿಗೆ ಸಂಸ್ಕಾರಯುಕ್ತ ಶಿಕ್ಷಣದ ಅವಶ್ಯಕತೆ ಇದೆ. ಸಂಸ್ಥೆ ಮಕ್ಕಳಿಗೆ ವಿದ್ಯೆ ಜತೆಗೆ ಜೀವನ ಹಾಗೂ ಮಾನವೀಯ ಮೌಲ್ಯಗಳನ್ನು ಕಲಿಸುತ್ತಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸದಸ್ಯ ದಾನಿ ಬಾಬುರಾವ್ ಮಾತನಾಡಿ, ವಿದ್ಯಾರ್ಥಿಗಳು ಅಂಕ ಗಳಿಕೆಗೆ ಸೀಮಿತರಾಗದೆ ವಿಶೇಷ ಕೌಶಲ ಹೊಂದಲು ಪ್ರಯತ್ನಿಸಬೇಕು ಎಂದು ಸಲಹೆ ಮಾಡಿದರು. ಚಂದ್ರಪ್ಪ ಗೌರಶೆಟ್ಟಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ. ಚಂದ್ರಪ್ಪ ಭತಮುರ್ಗೆ ಮಾತನಾಡಿ, ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಶಿಕ್ಷಕ ಹಾಗೂ ಪಾಲಕರ ಪಾತ್ರ ಮಹತ್ವದ್ದಾಗಿದೆ. ಪಾಲಕರು ಆದರ್ಶ ಹಾಗೂ ಶಿಕ್ಷಕರು ವಿದ್ಯೆ ಕಲಿಸಬೇಕು ಎಂದು ತಿಳಿಸಿದರು. ಮುಖ್ಯಶಿಕ್ಷಕ ಲಕ್ಷ್ಮಣ ಪೂಜಾರಿ ಮಾತನಾಡಿ, ಜಗತ್ತಿನಲ್ಲಿ ಜ್ಞಾನಕ್ಕೆ ಗೌರವವಿದೆ. ವಿದ್ಯಾರ್ಥಿಗಳು ಕಷ್ಟಪಟ್ಟು ಜ್ಞಾನ ಸಂಪಾದಿಸಬೇಕು ಎಂದು ಹೇಳಿದರು.

ಪ್ರಸಕ್ತ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಸಾಧನೆಗೈದ ಲತಾ ಸಂತೋಷ , ನಿಕಿತಾ ಮೊಗಲಪ್ಪ, ಮಮತಾ ಹಣಮಂತ, ಬಿಂದು ಮಹಾದೇವ , ನಾಗೇಶ್ವರ ಕಾಶಿನಾಥ, ಲಕ್ಷ್ಮಿ ಪಿ, ಮೇಘಾ ಪಿ, ನಂದಿನಿ ಎಸ್, ಅಂಕಿತ ಎಂ, ಅಂಬಿಕಾ ಆರ್, ಮೀನಾಕ್ಷಿ ಎಸ್, ಪ್ರೀತಂ ಅವರಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು.

ಶಿವಪ್ರಕಾಶಾನಂದಗಿರಿ ಸ್ವಾಮೀಜಿ, ಸಿದ್ಧಾರೂಢ ಪದವಿ ಕಾಲೇಜು ಪ್ರಾಚಾರ್ಯ ನಾಗಪ್ಪ ಜಾನಕನೋರ, ಬಸವರಾಜ ಮ್ಯಾಗೇರಿ ಉಪಸ್ಥಿತರಿದ್ದರು. ಶಿಕ್ಷಕ ನಾಗನಾಥ ಬಿರಾದಾರ ನಿರೂಪಿಸಿದರು.

ಅಭಿಯಾನ ಉದ್ಘಾಟನೆ ಕಾರ್ಯಕ್ರಮದಲ್ಲಿ ಶಿವಯ್ಯ ಸ್ವಾಮಿ ಹೇಳಿಕೆ

# 1.11 ಲಕ್ಷ ಸಸಿ ನೆಡುವಿಕೆ ಅಭಿಯಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಜೂ.15:-ಶಾಂತೀಶ್ವರಿ ಸ್ವಯಂ ಸೇವಾ ಸಂಸ್ಥೆ ಹಾಗೂ ಶ್ರೀ ಜಗದ್ಗುರು ಪಂಚಾಚಾರ್ಯ ಯುವಕ ಸಂಘದ ವತಿಯಿಂದ ಏಕ್ ಪೇಡ್ ಮಾ ಕೆ ನಾಮ್ ಅಭಿಯಾನದಡಿ 1,11,111 ಸಸಿಗಳನ್ನು ನೆಡುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಶಾಂತೀಶ್ವರಿ ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರೂ ಆದ ಕೇಂದ್ರ ಸರ್ಕಾರದ ರಾಜ್ಯ ಅಭಿವೃದ್ಧಿ, ಸಮನ್ವಯ ಹಾಗೂ ಮೇಲುಸ್ತುವಾರಿ ಸಮಿತಿಯ ಸದಸ್ಯ ಶಿವಯ್ಯ ಸ್ವಾಮಿ ಹೇಳಿದರು.

ತಾಲ್ಲೂಕಿನ ಹೊನ್ನಿಕೇರಿ ಸಿದ್ಧೇಶ್ವರ ದೇವಸ್ಥಾನ ಪರಿಸರದಲ್ಲಿ ಶನಿವಾರ ನಡೆದ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಏಕ್ ಪೇಡ್ ಮಾ ಕೇ ನಾಮ್ ಕರೆಯ ಹಿನ್ನೆಲೆಯಲ್ಲಿ ಮಾತೆ ಕರುಣಾದೇವಿ ಅವರ ಗೌರವಾರ್ಥ ಸಸಿ ನೆಡುವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣದ ಮಠ, ಮಂದಿರ, ಶಾಲಾ ಕಾಲೇಜು ಆವರಣ, ಸಾರ್ವಜನಿಕ ಸ್ಥಳಗಳಲ್ಲಿ ಸಸಿಗಳನ್ನು ನೆಡಲಾಗುವುದು. ಅಭಿಯಾನದಲ್ಲಿ ಬಿಲ್ವಪತ್ರಿ ಸಸಿಗಳನ್ನು ಅಧಿಕ ಪ್ರಮಾಣದಲ್ಲಿ ನೆಡಲಾಗುವುದು ಎಂದು ಹೇಳಿದರು.

ಅಭಿಯಾನಕ್ಕೆ ಚಾಲನೆ ನೀಡಿದ ಸಾಮಾಜಿಕ ಅರಣ್ಯ ವಿಭಾಗದ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಬಿ. ಪಾಟೀಲ ಮಾತನಾಡಿ, ಪರಿಸರ ಸಂರಕ್ಷಣೆಗಾಗಿ ದೊಡ್ಡ ಪ್ರಮಾಣದಲ್ಲಿ ಸಸಿ ನೆಡುವ ಅಭಿಯಾನ ಹಮ್ಮಿಕೊಂಡಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದರು.

ಅಭಿಯಾನಕ್ಕೆ ಅರಣ್ಯ ಇಲಾಖೆಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಬೇಮಳಖೇಡದ ಡಾ. ರಾಜಶೇಖರ ಶಿವಾಚಾರ್ಯರು ಮಾತನಾಡಿ, ಮಾತೆ ಕರುಣಾದೇವಿ ಅವರಿಗೆ ಸಸಿ ನೆಡುವ ಅಭಿಯಾನ ಮೂಲಕ ಗೌರವ ಸಮರ್ಪಿಸುತ್ತಿರುವುದು ಪ್ರಶಂಸನೀಯ ಎಂದು ಹೇಳಿದರು.

ಅಭಿಯಾನಕ್ಕೆ ಎಲ್ಲರೂ ಕೈಜೋಡಿಸಬೇಕು. ಸಸಿಗಳನ್ನು ನೆಟ್ಟು ಬೆಳೆಸಬೇಕು ಎಂದು ತಿಳಿಸಿದರು.

ರಾಯಚೂರು ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಉಪ ನಿರ್ದೇಶಕ ರಾಜಕುಮಾರ ಪಾಟೀಲ ಮಾತನಾಡಿದರು. ಶ್ರೀಶೈಲದ ಅಕ್ಕಮಹಾದೇವಿ ಚೈತನ್ಯ ಪೀಠದ ಅಧಿಪತಿ ಮಾತೆ ಕರುಣಾದೇವಿ ಸಾನಿಧ್ಯ, ಗ್ರಾಮ ಪಂಚಾಯಿತಿ ಅಧ್ಯಕ್ಷ ಸತೀಶ್ ಸಿಕೇನಪುರೆ ಅಧ್ಯಕ್ಷತೆ ವಹಿಸಿದ್ದರು. ಮೇರಾ ಯುವ ಭಾರತ ಜಿಲ್ಲಾ ಯುವ ಸಮನ್ವಯಾಧಿಕಾರಿ ಮಯೂರಕುಮಾರ ಗೋರಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ ಮಠ, ಪ್ರಮುಖರಾದ ಶಿವಶಂಕರ ಬೆಳಮಗಿ, ಮಹೇಶ ಪಾಟೀಲ, ಚೇತನ್ ಸೋರಳ್ಳಿ, ಕಾವೇರಿ ಸ್ವಾಮಿ, ಇಮ್ರಾನ್ ಖಾನ್, ಹಾವಪ್ಪ, ದೇವಸ್ಥಾನದ ಅರ್ಚಕರಾದ ಸಿದ್ದಯ್ಯ ಸ್ವಾಮಿ, ಶಿವಾನಂದ ಸ್ವಾಮಿ ಮತ್ತಿತರರು ಇದ್ದರು. ಪ್ರವೀಣ್ ಸ್ವಾಮಿ ಸ್ವಾಗತಿಸಿದರು. ಸಚ್ಚಿದಾನಂದ ಬಿರಾದಾರ ನಿರೂಪಿಸಿದರು. ಪ್ರಶಾಂತ ಸ್ವಾಮಿ ವಂದಿಸಿದರು.

# ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮ



ಬೀದರ.ಜೂ.15:-ಬೀದರ್ ದಕ್ಷಿಣ ರವರ ಆದೇಶದ ಮೇರೆಗೆ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಾದ ಗೃಹಲಕ್ಷ್ಮೀ, ಅನ್ನಭಾಗ್ಯ, ಗೃಹಜ್ಯೋತಿ, ಯುವನಿಧಿ, ಮತ್ತು ಶಕ್ತಿ ಯೋಜನೆಗಳ ಬಗ್ಗೆ ಬೀದರ ದಕ್ಷಿಣ ಕ್ಷೇತ್ರದ ಪ್ರತಿ ಹಳ್ಳಿಗಳಿಗೆ ತಲುಪಿ ಯೋಜನೆ ಬಗ್ಗೆ ಸಮಿತಿ ಗಮನಕ್ಕೆ ತರುಬೇಕು ಎಂದು ಆದೇಶ ಮಾಡಿದರು, ಬೀದರ್ ತಾಲೂಕಿನ ಪಂಚ್ ಗ್ಯಾರಂಟಿ ಕಮಿಟಿಯ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ಮಡಿಕಿ ರವರ ಹಾಗೂ ಸದಸ್ಯರ ನೇತೃತ್ವದಲ್ಲಿ, ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಸಿಂದೋಲ್ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಪಾತುರಪಳ್ಳಿ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ, ಅನ್ನಭಾಗ್ಯ, ಗೃಹಜ್ಯೋತಿ, ಯುವನಿಧಿ, ಮತ್ತು ಶಕ್ತಿ ಯೋಜನೆಗಳ ಮಹತ್ವವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರುಗಳಾದ ಉದಯ ಕುಮಾರ ಚಟನಳ್ಳಿ, ಶಿವಕುಮಾರ ಕುತ್ತಾಬಬಾದ್, ಮತ್ತು ಮುಖಂಡರಾದ ಮೋಹಿನ್ ಪಠಾಣ್, ಗ್ರಾಮದ ಮುಖಂಡರಾದ ಲಕ್ಷ್ಮಣ ನಿರ್ಣಕಾರ್ ಮತ್ತು ಅನೇಕ ಗ್ರಾಮಸ್ಥರು ಪಾಲ್ಗೊಂಡಿದ್ದರು.

# ವಿಮಾನ ದುರಂತದಲ್ಲಿ ಮಡಿದವರ ಆತ್ಮಕ್ಕೆ ಶಾಂತಿಸಿಗಲೆಂದು ಪ್ರಾರ್ಥನೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಅಹಮದಾಬಾದನಲ್ಲಿ ನಡೆದ ವಿಮಾನ ದುರಂತದಲ್ಲಿ ಭಾರತೀಯರು ಸೇರಿ ಅನೇಕ ವಿದೇಶೀಯ ಪ್ರಯಾಣಿಕರು ಸಾವನಪ್ಪಿದ್ದಾರೆ. ಅವರ ಆತ್ಮಕ್ಕೆ ಶಾಂತಿಸಿಗಲೆಂದು ಚಿಟಗುಪ್ಪ ಪಟ್ಟಣದ ನಾಗರಿಕರ ವತಿಯಿಂದ ಶ್ರದ್ಧಾಂಜಲಿ ಮಾಡಲಾಯಿತು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗದಲಕರ್, ಉಪಾಧ್ಯಕ್ಷ ನಸೀರ್ ಖಾನ್, ಮಲ್ಲಿಕಾರ್ಜುನ ಪಾಟೀಲ, ಅಶೋಕಸ್ವಾಮಿ, ವಿಜಯಕುಮಾರ ಬೊಮ್ಮಣಿ,, ಮುಜಾಫರ್ ಪಟೇಲ್, ರಾಜದೀಪ ಜಾಬಾ, ಸುಭಾಷ ಕುಂಬಾರ, ತಬ್ಬರೇಜ್, ಗುಂಡುರೆಡ್ಡಿ, ಪವನ ಪೂಜಾರಿ, ಪ್ರವೀಣ ರಾಜಾಪುರ್, ಪ್ರಭು ಮುದನ್ನಾಳಕ್ಕರ್, ಪರಮೇಶ್ ಬಬಡಿ, ವೀರಪ್ಪ ಹೊಸಳ್ಳಿ, ಹುಸೇನ್ ಲಚ್ಚಿಕೆ, ತೈಸಿನ್ ನಾಗುರೆ, ಪ್ರಶಾಂತ ಜವಳಿ, ನಟವರ ಪವರ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮುಂಗಾರು ಮಳೆಯ ಅಬ್ಬರಕ್ಕೆ ಉತ್ತರ ಕರ್ನಾಟಕ ತತ್ತರ



ಮಲ್ಲಮ್ಮ ನುಡಿ ವಾರ್ತೆ

ಹುಬ್ಬಳ್ಳಿ/ಚಿಕ್ಕಮಗಳೂರು,ಜೂ.13-ಮುಂಗಾರು ಮಳೆಯ ಅಬ್ಬರಕ್ಕೆ ಉತ್ತರಕರ್ನಾಟಕ ತತ್ತರಗೊಂಡಿದೆ. ಮಲೆನಾಡು ಕರಾವಳಿ ಭಾಗದಲ್ಲಿ ಮುಂಗಾರು ಮಳೆ ಜೋರಾಗಿದ್ದು, ಹಳ್ಳಕೊಳ್ಳಗಳು ತುಂಬಿ, ನದಿಗಳು ಉಕ್ಕಿಹರಿಯುತ್ತಿವೆ. ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಭಾರೀ ಮಳೆಗೆ ಇಬ್ಬರು ಸಾವನ್ನಪ್ಪಿದ್ದಾರೆ. ಗೋಕಾಕ್‌ನಲ್ಲಿ ಒಬ್ಬರು ಬಲಿಯಾಗಿದ್ದಾರೆ. ಉತ್ತರ ಕನ್ನಡ, ಚಿಕ್ಕಮಗಳೂರು, ಉಡುಪಿ, ಕೊಡಗು ಜಿಲ್ಲೆಗಳಲ್ಲಿ ನಿರಂತರ ಮಳೆ ಸುರಿಯುತ್ತಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ನದಿಗಳು ಉಕ್ಕಿ ಹರಿದು, ಹೊಲಗದ್ದೆಗಳು ಜಲಾವೃತಗೊಂಡಿವೆ. ಬೆಣ್ಣೆಹಳ್ಳ ತುಂಬಿ ಹರಿದ ಪರಿಣಾಮ ಹಲವು ಗ್ರಾಮಗಳಿಗೆ ನೀರು ನುಗ್ಗಿ ಜನ ಮನೆಯಿಂದ ನೀರನ್ನು ಹೊರಹಾಕುವಲ್ಲಿ ಹರಸಾಹಸ ಪಡುತ್ತಿದ್ದಾರೆ. ಕಾರವಾರ, ಗದಗ ನಗರಗಳಲ್ಲೂ ಕೂಡ ಭಾರೀ ಮಳೆ ಬಿದ್ದ ಪರಿಣಾಮ ರಸ್ತೆಗಳೆಲ್ಲಾ ಜಲಾವೃತಗೊಂಡಿವೆ. ಹೊಲಗದ್ದೆಗಳಿಗೆ ನೀರು ನುಗ್ಗಿದೆ. ಹಲವು ಮನೆಗಳು ಕುಸಿತವಾಗಿವೆ. ನೂರಾರು ಎಕರೆಯಲ್ಲಿದ್ದ ಬೆಳೆ ನಾಶವಾಗಿದೆ. ಹಲವೆಡೆ ರಸ್ತೆ ಸಂಪರ್ಕ ಕಡಿತಗೊಂಡಿದೆ. ನಿನ್ನೆ ಹುಬ್ಬಳ್ಳಿ ನೇಕಾರ ನಗರದಲ್ಲಿ ಮಳೆಯಲ್ಲಿ ಬೈಕ್ ಸವಾರ ಹುಸೇನ್ ಕೊಚ್ಚಿ ಹೋಗಿ ಸಾವನ್ನಪ್ಪಿದ್ದು, ಹಿಂಬದಿ ಸವಾರನನ್ನು ರಕ್ಷಿಸಲಾಗಿದೆ. ಹುಬ್ಬಳ್ಳಿಯಾದ್ಯಂತ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಹುಬ್ಬಳ್ಳಿ ತಾಲ್ಲೂಕಿನ ಹಲವೆಡೆ ರಸ್ತೆ ಸಂಪರ್ಕ ಕಡಿತಗೊಂಡಿದ್ದು, ಸಾವಿರಾರು ಎಕರೆ ಜಮೀನು ಜಲಾವೃತಗೊಂಡು ಬೆಳೆ ನಷ್ಟ ಉಂಟಾಗಿದೆ. ಆರಂಭದಲ್ಲಿ ಮುಂಗಾರುಮಳೆ ಅಬ್ಬರಿಸುತ್ತಿದ್ದು, ಉತ್ತರ ಕನ್ನಡ, ಕರಾವಳಿ, ಮಧ್ಯಕರ್ನಾಟಕ ಭಾಗದಲ್ಲಿ ಭಾರೀ ಮಳೆಯಾಗುತ್ತಿದೆ. ಇನ್ನು ಒಂದು ವಾರ ಕಾಲ ಭಾರೀ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ಮುನ್ನೆಚ್ಚರಿಕೆ ಕ್ರಮ ವಹಿಸುವಂತೆ ಸೂಚಿಸಲಾಗಿದೆ.

# ಪತ್ನಿ ಜತೆ ಜಗಳ: ನೇಣಿಗೆ ಶರಣಾದ ಪತಿ

ಕಲಬುರಗಿ,ಜೂ.12-ಪತ್ನಿ ಜೊತೆ ಜಗಳವಾಡಿದ ಪತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಆಳಂದ ಚೆಕ್ ಪೋಸ್ಟ್ ಹತ್ತಿರ ಬಡಾವಣೆಯೊಂದರಲ್ಲಿ ಇಂದು ನಡೆದಿದೆ.

ಸಿದ್ರಾಮ ಢಗೆ (42) ಆತ್ಮಹತ್ಯೆ ಮಾಡಿಕೊಂಡವರು.

ಮೆಡಿಕಲ್ ರಿಪ್ರೆಸೆಂಟೆಟಿವ್ (ಎಂಆರ್) ಆಗಿ ಕೆಲಸ ಮಾಡುತ್ತಿದ್ದ ಸಿದ್ರಾಮ ಅವರು ಪತ್ನಿ ಜೊತೆಗೆ ಜಗಳವಾಡಿ ಮನೆಯಲ್ಲಿಯೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಸಡಗರದಿಂದ ಜರುಗಿದ ಭೋಸ್ಲೆ ಅವರ 25ನೇಯ ಮದುವೆ ವಾರ್ಷಿಕೋತ್ಸವ

# ಸಂಜೀವನ ಭೋಸ್ಲೆ ಜನಸ್ನೇಹಿ ಶಿಕ್ಷಕ:- ಬೇಲೂರೆ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಸಹ ಶಿಕ್ಷಕ ಸಂಜೀವನ ಭೋಸ್ಲೆ ಸರಳ ಜೀವಿಗಳಾಗಿದ್ದು ಜನಸ್ನೇಹಿ ಶಿಕ್ಷಕರಾಗಿದ್ದಾರೆ ಎಂದು ನಿವೃತ್ತ ಮುಖ್ಯ ಶಿಕ್ಷಕ ರಾಜಕುಮಾರ ಬೇಲೂರೆ ಅವರು, ಪಟ್ಟಣದ ಶ್ರೀ ರೇವಣಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ವಾಲಿಬಾಲ್ ಟೀಮ್ ಗೆಳೆಯರ ಬಳಗ ವತಿಯಿಂದ ಬೋಸ್ಲೆ ಪರಿವಾರದ ಕವಿತಾ ಸಂಜೀವನ ಬೋಸ್ಲೆ ಇವರ 25ನೇಯ ಮದುವೆ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡುತ್ತ ತಿಳಿಸಿದ್ದರು. ಸಂಜೀವನ ಭೋಸ್ಲೆ ಅವರು ಎಲ್ಲೆಲ್ಲಿ ಸೇವೆ ಸಲ್ಲಿಸಿದ್ದಾರೆ ಅಲ್ಲಿ ಸಾರ್ವಜನಿಕರೊಂದಿಗೆ ಒಳ್ಳೆಯ ಭಾಂದವ್ಯ ಹೊಂದಿ ಅತ್ಯುತ್ತಮ ಶಿಕ್ಷಕರೆಂದು ಖ್ಯಾತಿ ಪಡೆದಿದ್ದಾರೆ. ಮದುವೆಯಾಗಿ 25 ವರ್ಷ ಆರೋಗ್ಯವಂತರಾಗಿ ಯಶಸ್ವಿಯಾಗಿ ಸಂಸಾರ ನಡೆಸುತ್ತಿರುವುದು ಹೆಮ್ಮೆ ಎಂದರು. ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಮಾತನಾಡಿ, 25ನೇಯ ಮದುವೆ ವಾರ್ಷಿಕೋತ್ಸವ ಯಶಸ್ವಿಯಾಗಿ ಆಚರಿಸಿಕೊಂಡಂತೆ ಮುಂದಿನ ದಿನಗಳಲ್ಲಿ ಶತಾಯಿಷಿಗಳಾಗಿ ಮುಂದೆಯೂ ಕೂಡ ಆಚರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದರು. ಶಿಕ್ಷಕಿ ಪಂಚಶೀಲ ಕಟ್ಟಿಮನಿ ಮಾತನಾಡಿ, ಪತಿ ಪತ್ನಿ ಒಳ್ಳೆಯ ಭಾಂದವ್ಯದಿಂದ ಸುಖಕರ ಜೀವನ ನಡೆಸುತ್ತಿರುವುದು ಇತರರಿಗೆ ಮಾದರಿಯಾಗಿದ್ದಾರೆ ಎಂದರು.

ವಾಲಿಬಾಲ್ ಟೀಮ್ ಕೋಶಾಧ್ಯಕ್ಷ ರಾಜಪ್ಪ ಜಮಾದರ್ ಮಾತನಾಡಿ, ವಾಲಿಬಾಲ್ ಟೈಮ್ ಗೆಳೆಯರು ಸೇರಿಕೊಂಡು ಸಂಜೀವನ ಭೋಸ್ಲೆ ಅವರ 25ನೇಯ ಮದುವೆ ವಾರ್ಷಿಕೋತ್ಸವ ಅದ್ದುರಿಯಾಗಿ ಆಚರಿಸುತ್ತಿರುವುದು ಸಂತಸ ತಂದಿದೆ ಎಂದರು. ಸಂಜೀವನ ಭೋಸ್ಲೆ ಮಾತನಾಡಿ, ನನ್ನ 25ನೇಯ ಮದುವೆ ವಾರ್ಷಿಕೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದ ವಾಲಿಬಾಲ್ ಟೀಮ್ ಗೆಳೆಯರ ಬಳಗಕ್ಕೆ ಸದಾ ಚಿರಋಣಿಯಾಗಿರುತ್ತೇನೆ, ಸದಾ ನಿಮ್ಮೆಲ್ಲರ ಪ್ರೀತಿ, ಸಹಕಾರ, ಆಶೀರ್ವಾದ ನಮ್ಮ ಕುಟುಂಬದ ಮೇಲೆ ಇರಲ್ಲಿ ಎಂದು ಮನವಿ ಮಾಡಿದರು. ಕಸಾಪ ಗೌರವಾಧ್ಯಕ್ಷ ಮಹಾರುದ್ರಪ್ಪ ಅಣದುರೆ, ತಾಲುಕಾಧ್ಯಕ್ಷ ಅನೀಲಕುಮಾರ ಸಿಂಧೆ ಮಾತನಾಡಿದರು. ಈ ಸಂದರ್ಭದಲ್ಲಿ ವಾಲಿಬಾಲ್ ಟೀಮ್ ಗೆಳೆಯರ ಬಳಗದ ಅಧ್ಯಕ್ಷ ವೆಂಕಟಪ್ಪ, ಉಪಾಧ್ಯಕ್ಷ ಗುಂಡಪ್ಪ ಕೋರೆ, ಕಾರ್ಯದರ್ಶಿ ಬಸವರಾಜ್ ಮೇತ್ರೆ, ಹಸನ್ ಲಚ್ಚಿಕೆ, ಮಲ್ಲಿಕಾರ್ಜುನ ತಿರಲಾಪುರ್, ರಜನಿಕಾಂತ್ ಫುಲೇ, ಚಂದ್ರಕಾಂತ ನಾರಾಯಣಪುರ್, ಶಾಮರಾವ ಭುತ್ತಾಳೆ, ಸೈಯದ್ ಅಜೀಮ್, ಅಶೋಕಕುಮಾರ್ ಮಹಿಂದ್ರಕ್ಕರ್, ಶಾಮರಾವ ಹಡಪದ, ರಾಜಶೇಖರ ಉಪ್ಪಿನ, ದಯಾನಂದ ಕಾರಬಾರಿ, ರಮೇಶ್ ಸಲಗರ್, ರಾಮಕೃಷ್ಣ ನಿರ್ಣಾಕ್ಕರ್, ದಯಾನಂದ ಕಾಂಬಳೆ, ಸಂತೋಷ್ ತಾಂಡುರ್, ಗಣಪತಿ, ಮಹಿಪತಿ ಶರ್ಮಾ, ಬಸವರಾಜ್ ಮಡಿವಾಳ, ರಾಜು ಕುಂದನ, ಅಡೆಪ್ಪ, ಭೀಮಪ್ರಕಾಶ, ಗುರುರಾಜ್ ಪಾಟೀಲ್, ಸಂತೋಷ್ ತೆಲಂಗ, ರಾಜಶೇಖರ ಹತ್ತಿ, ಅರವಿಂದ ಕುಕಡಾಲ್, ಆಶಿಷ್ ಎಸ್. ಭೋಸ್ಲೆ, ಅಶ್ವಿನಿ ಎಸ್. ಭೋಸ್ಲೆ, ಶಿಲ್ಪ, ಮಲ್ಲಮ್ಮ ಹುಡಗಿ, ಅಂಬಿಕಾ, ಸುಮನಬಾಯಿ ಗಾಯಕವಾಡ, ಧೋಡುಬಾಯಿ ಕುಂದನ, ಸೇರಿದಂತೆ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ರಾಜಕುಮಾರ ಆರ್. ಹಡಪದ ನಿರೋಪಿಸಿ, ವಂದಿಸಿದರು.

# ಕೃಷಿ ಚಟುವಟಿಕೆಗೆ ಸಂಬಂಧಿಸಿ ಸಾಮಾಗ್ರಿ ಗುಣಮಟ್ಟದಿಂದ ಕೂಡಿರಬೇಕು: ಶಾಸಕ ಶರಣು ಸಲಗರ

ಮಲ್ಲಮ್ಮ ನುಡಿ ವಾರ್ತೆ




ಬಸವಕಲ್ಯಾಣ: - ಜೂ 14- ಕೃಷಿ ಚಟುವಟಿಕೆಗೆ ಸಂಬಂಧಿಸಿದ ಸಾಮಾಗ್ರಿಗಳನ್ನು ನಾನು ಮತ್ತು ಅಧಿಕಾರಿಗಳ ತಂಡ ಗುಣಮಟ್ಟದ ಬಗ್ಗೆ ಪರಿಶೀಲನೆ ಮಾಡಿದ ನಂತರವೇ ರೈತರಿಗೆ ವಿತರಣೆ ಮಾಡಬೇಕು ಎಂದು ಶಾಸಕ ಶರಣು ಸಲಗರ ಹೇಳಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾವು ಯಾರು

ನಿರೀಕ್ಷೆ ಮಾಡಿರಲಿಲ್ಲ ಅಷ್ಟು ಮಳೆ ಕಳೆದ ತಿಂಗಳು ಬಂದಿದೆ. ಹೀಗಾಗಿ ರೈತರು ಬಿತ್ತಣಕೆ ಮಾಡುವುದು ವಿಳಂಬವಾಗಬಹುದು. ಆದ್ದರಿಂದ ಬೀಜ ಮತ್ತು ಗೊಬ್ಬರ ಗುಣ ಮಟ್ಟದಿಂದ ಕೂಡಿರಬೇಕು ಇಲ್ಲದಿದ್ದರೆ ಹಿಂದಕ್ಕೆ ಕಳಿಸಿಕೊಡಬೇಕಾಗುತ್ತೆ ಮತ್ತು ಬೀಜ ವಿತರಣಾ ಕೇಂದ್ರಗಳಲ್ಲಿ ರೈತರಿಗೆ ಯಾವುದೇ ತೊಂದ-ರೆ ಆಗದಂತೆ ಮುಂಜಾಗೃತ ವಹಿಸಬೇಕು ಎಂದು ತಿಳಿಸಿದರು.

ಪ್ರಸಕ್ತ ವರ್ಷ ದಿಂದ ಖಾಲಿ ಇರುವ ಖಾಲಿ ಇರುವ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಆದೇಶ ಹೊರಡಿಸಲಾಗಿದೆ. ಅದರಂತೆ 253 ವಿಶೇಷ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಪೈಕಿ ನಿಯಮಾನುಸಾರ 221 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಆದರೆ ಉಳಿದ ಶಿಕ್ಷಕರನ್ನು ವಿಶೇಷ ಅನುದಾನದಡಿ ನೇಮಕ ಮಾಡಿಕೊಳ್ಳಬೇಕು ಮತ್ತು ಕಳೆದ ಕೆಲವು ವರ್ಷಗಳಿಂದ ಅತಿಥಿ ಶಿಕ್ಷಕರನ್ನಾಗಿ ಕೆಲಸ ಮಾಡುವ ಶಿಕ್ಷಕರಿಗೆ ಯಾವುದೇ ಸಮಸ್ಯೆ ಆಗಬಾರದು. ಒಂದು ವೇಳೆ ಅವರಲ್ಲಿ ಅರ್ಹತೆ ಇರದೆ ಇದ್ದಲ್ಲಿ ತೆಗೆದುಹಾಕಿ ವಿನ: ವಿನಾಕಾರಣ ತೆಗೆದು ಹಾಕಬಾರದು ಎಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ ಹೇಳಿದರು.

ಎಸ್.ಎಸ್.ಎಲ್.ಸಿ.ಫಲಿತಾಂಶದಲ್ಲಿ ಬದಲಾವಣೆ ಆಗಬೇಕಾದರೆ ಶಿಕ್ಷಕರ ಎಚ್ಚರ ವಾಗಬೇಕು ಇಲ್ಲದಿದ್ದರೆ ಸರ್ಕಾರಿ ಶಾಲೆಗಳತ್ತ ಯಾರು ಬರಲಾರದಂಥಹ ಸ್ಥಿತಿ ನಿರ್ಮಾಣವಾಗುತ್ತದೆ ಎಂದು ಅವರು, ಮಂಗಳೂರು ಮತ್ತು ಧಾರವಾಡದ ಜಿಲ್ಲೆಯ ಮಕ್ಕಳು ಹುಟ್ಟುತ್ತಾನೇ ಬುದ್ಧಿವಂತರು ಇರಲ್ಲ ಅವರಲ್ಲಿ ಗುಣಾತ್ಮಕ ಶಿಕ್ಷಣವನ್ನು ಕೊಡುತ್ತಾರೆ, ನಾವು ಅವರಂತೆ ಬದಲಾಗಬೇಕು ಅದಕ್ಕೆ ಬೇಕಾದ ಸಹಕಾರ ಮತ್ತು ಸೌಲಭ್ಯಗಳನ್ನು ನಾನು ಕೊಡುತ್ತೇನೆ ಎಂದು ಭರವಸೆ ನೀಡಿದರು.

ವೈದ್ಯಾಧಿಕಾರಿಗಳು ಯಾರಿಗು ಹೆದರುವ ಅಗತ್ಯವಿಲ್ಲ. ನೀವು ಎಚ್ಚರ ವಾದಾಗ ಮಾತ್ರ ನಾವು ಬದಲಾವಣೆ ಮಾಡಲು ಸಾಧ್ಯವಾಗುತ್ತದೆ. ನೀವು ನೀಡಿದ ವರದಿಯ ಮೇಲೆ ನಾವು ಖಾಸಗಿ ಆಸ್ಪತ್ರೆಗಳ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಬಡ ರೋಗಿಗಳು ಸಮಸ್ಯೆ ಎದುರಿಸಬೇಕಾಗುತ್ತದೆ ಅದಕ್ಕೆ ಆಸ್ಪದೆ ಕೊಡಬೇಡಿ ಎಂದು ಸರ್ಕಾರಿ ಆಸ್ಪತ್ರೆಯ ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಿದರು.

ಮುಡಬಿ ಆಸ್ಪತ್ರೆ ತುಂಬಾ ಚನ್ನಾಗಿದೆ ಅದಕ್ಕೆ ಬೇಕಾದ ಎಲ್ಲಾ ಸಿಬ್ಬಂದಿಗಳನ್ನು ನೀಡಬೇಕು ಮತ್ತು ಸಂತೆ ನಡೆಯುವ ಸಂದರ್ಭದಲ್ಲಿ ಸಿಬ್ಬಂದಿಗಳು ಸ್ಥಳದಲ್ಲಿಯೇ ಇದ್ದುಕೊಂಡು ರೋಗಿಗಳ ಚಿಕತ್ಸೆ ಮಾಡಬೇಕು ಎಂದರು.

ಕೋಹಿನೂರ ಗ್ರಾಮದಲ್ಲಿ ಪಿಎಚ್‌ಸಿ ಕಟ್ಟಡ ಅವಶ್ಯಕವಾಗಿರುವುದರಿಂದ ಸರ್ಕಾರಿ ಜಮೀನು ಮಂಜೂರು ಮಾಡಿಕೊಟ್ಟರೆ ಕೆಕೆಆರ್‌ಡಿಬಿ ಯಲ್ಲಿ ಅನುದಾನ ಮಂಜುರು ಮಾಡಿಕೊಡುತ್ತೆನೆ ಎಂದು ತಹಶೀಲ್ದಾರ ಅವರಿಹೆ ಹೇಳಿದರು.

ಖಾನಾಪೂರ ಹತ್ತಿರ ಇರುವ ಪದವಿ ಕಾಲೇಜು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೆಪಿಎಸ್ ಶಾಲೆಗೆ ಸ್ಥಳಾಂತರ ಮಾಡಬೇಕು. ಇಲ್ಲದಿದ್ದರೆ 470 ವಿದ್ಯಾರ್ಥಿಗಳು ಖಾಸಗಿ ಕಾಲೇಜಿಗೆ ಹೋಗುತ್ತಾರೆ, ಇದಕ್ಕೆ ಸಂಬಂಧಿಸಿದ ಪ್ರಕ್ರಿಯೆ ಪ್ರಾರಂಭಿಸಿ ನಾನು ಸಂಬಂಧ ಪಟ್ಟ ಸಚಿವರಿಗೆ ಮಾತನಾಡುತ್ತೆನೆ ಎಂದು ತಿಳಿಸಿದರು. ನಂತರ ವಿವಿಧ ಇಲಾಖೆ ಕಾಮಗಾರಿಗಳ ಮಾಹಿತಿ ಪಡೆದುಕೊಂಡು ಶೀಘ್ರವಾಗಿ ಮುಗಿಸುವಂತೆ ತಿಳಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಮಾರುತಿರಾವ್ ಮುಳೆ, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ.ನಾರಾಯಣರಾವ್, ತಹಶೀಲ್ದಾರ ದತ್ತಾತ್ರೆಯ ಗಾದಾ, ಶಿವಾನಂದ ಮೇತ್ರೆ, ತಾ.ಪಂ.ಕಾ.ನಿ.ಅ.ರಮೇಶ ಸುಲ್ಫಿ, ಮಹಾದೇವ ಜಮ್ಮು ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ಸಭೆಯಿಂದ ಎದ್ದು ಹೋದ ಎಂ.ಎಲ್.ಸಿ.ಮುಳೆ

ವಿಧಾನ ಪರಿಷತ್ತ ಸದಸ್ಯ ಮಾರುತಿರಾವ್ ಮುಳೆ ಅವರು ಶುಕ್ರವಾರ ಶಾಸಕ ಶರಣು ಸಲಗರ ಅವರ ಅಧ್ಯಕ್ಷತೆಯಲ್ಲಿ ನಡೆದ ಕೆಪಿಡಿ ಸಭೆಯ ಮಧ್ಯದಲ್ಲಿಯೇ ಎದ್ದು ಹೋದ ಪ್ರಸಂಗ ನಡೆಯಿತು. ಇದಕ್ಕು ಮುಂಚೆ ಮಾತನಾಡಿದ ಮಾರುತಿರಾವ್ ಮುಳೆ ಅವರು, ನಾನು ಒಬ್ಬ ಪ್ರತಿನಿಧಿ ಇದ್ದೆನೆ ಆದರೆ ಅಧಿಕಾರಿಗಳು ನಮಗೆ ಯಾವುದೇ ರೀತಿಯ ಸ್ಪಂದನೆ ನೀಡುತ್ತಿಲ್ಲ ಅದಕ್ಕಾಗಿ ನಾನು ಯಾತಕ್ಕಾಗಿ ಸಭೆಯಲ್ಲಿ ಕುಳಿತುಕೊಳ್ಳಬೇಕು ನನಗೆ ಕರ್ನಾಟಕದಲ್ಲಿ ಯಾವ ಕ್ಷೇತ್ರವನ್ನಾದರು ಆಯ್ಕೆ ಮಾಡಿಕೊಳ್ಳುವ ಅಧಿಕಾರ ನನಗಿದೆ ನಾನು ಕ್ಷೇತ್ರ ಬದಲಾವಣೆ ಮಾಡಿಕೊಳ್ಳುತ್ತೆನೆ ಎಂದು ಸಭೆಯಿಂದ ಹೋರಗೆ ಹೋದರು.

## ಅನುದಾನ ಘೋಷಣೆ

ನಗರದಲ್ಲಿ ಶಿವಶೃಷ್ಟಿ ನಿರ್ಮಾಣ ಮಾಡಲು 1 ಕೋಟಿ ಇಟ್ಟಿದ್ದು ಇನ್ನೂ 2 ಕೋಟಿ ರೂ. ಮತ್ತು ಐತಿಹಾಸಿಕ ಪರುಷಕಟ್ಟೆ ಜೀರ್ಣೋದ್ಧಾರ ಸಲುವಾಗಿ ನಾನು ಅಧಿಕಾರಲ್ಲಿದಲ್ಲಿ ಇದ್ದಾಗ ಕಾಮಗಾರಿ ಪ್ರಾರಂಭಿಸಿದ್ದೆವೆ ಅದಕ್ಕೆ 2 ಕೋಟಿ ಕೊಡುತ್ತೆನೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ 25 ಕೋಟಿ ರೂ. ಮಂಜೂರು ಮಾಡುವಂತೆ ಮನವಿ ಮಾಡಿಕೊಳ್ಳುತ್ತೆನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶೃದ್ಧಾಂಜಲಿ ಸಲ್ಲಿಕೆ ಅಹಮಬಾದ್ ದಿಂದ ಲಂಡನ ತೆರಳುತ್ತಿದ್ದ ವಿಮಾನದ ದುರ್ಘಟೆಯಲ್ಲಿ ಮೃತ ಪಟ್ಟವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು 2 ನಿಮಿಷ ಮೌನಾಚಾರಣೆ ಮಾಡುವ ಮೂಲಕ ಶೃದ್ಧಾಂಜಲಿ ಸಲ್ಲಿಸಲಾಯಿತು.

# ಇಂದು ಕಲಬುರಗಿಯಲ್ಲಿ ಕಕ ಭಾಗದ ಪತ್ರಕರ್ತರಿಗಾಗಿ ಒಂದು ದಿವಸದ ವಿಚಾರ ಸಂಕಿರಣ

ಮಲ್ಲಮ್ಮ ನುಡಿ ವಾರ್ತೆ

ಬೀದರ್: ಜೂ.14: ಜೂ.15 ರಂದು ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಮದ್ಯಾಹ್ನ 1.30 ಗಂಟೆವರೆಗೆ ಕಲಬುರಗಿ ನಗರದ ಸೇಡಂ ರಸ್ತೆಯಲ್ಲಿರುವ ಗೀತಾ ನಗರದಲ್ಲಿನ ಬ್ರಹ್ಮಾಕುಮಾರಿಸ್ ಅಮೃತ ಸರೋವರ ರಿಟ್ರೀಟ್ ಸೆಂಟರ್ ನಲ್ಲಿ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಮುದ್ರಣ ಹಾಗೂ ದೃಶ್ಯ ಮಾಧ್ಯಮದ ಗೆಳೆಯರಿಗೆ ಒಂದು ದಿನದ ವಿಚಾರ ಸಂಕಿರಣ ಆಯೋಜಿಸಲಾಗಿದೆ.

ರಾಜಯೋಗ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನದ ಮಾಧ್ಯಮ ವಿಭಾಗ ಮತ್ತು ಪ್ರಜಾಪಿತಾ ಬ್ರಹ್ಮಾಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯ ಮೌಂಟ್ ಅಬು ಮತ್ತು ಉಪ ವಲಯ ಕೇಂದ್ರ, ಕಲಬುರಗಿ ಇವರ ಸಹಯೋಗದಲ್ಲಿ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. *ಶಾಂತಿ,ಏಕತೆ ಮತ್ತು ವಿಶ್ವಾಸವನ್ನು ಉತ್ತೇಜಿಸುವಲ್ಲಿ ಮಾಧ್ಯಮಗಳ ಪಾತ್ರ* ಎಂಬ ವಿಷಯದ ಕುರಿತು ವಿಚಾರ ಸಂಕಿರಣ ಜರುಗಲಿದೆ. ಬ್ರಹ್ಮಕುಮಾರೀಸ್ ಪ್ರಧಾನ ಕೇಂದ್ರ ಮೌಂಟ್ ಅಬುದ ಮಾಧ್ಯಮ ವಿಭಾಗದ ರಾಷ್ಟ್ರೀಯ ಸಂಯೋಜಕರಾದ ಬಿ.ಕೆ ಶಾಂತನು ಭಾಯಿ, ಹೈದ್ರಾಬಾದ್ ನ ಬಿ.ಕೆ ಸರಳಾ ದಿದಿ, ಮಧ್ಯಪ್ರದೇಶದ ಬಿಲಾಸಪುರ್ ಬ್ರಹ್ಮಾಕುಮಾರಿ ಕೇಂದ್ರದ ರಾಜಯೋಗಿನಿ ಬಿ.ಕೆ ಮಂಜು ದಿದಿ ಹಾಗೂ ಮೌಂಟ್ ಅಬು ಪ್ರಧಾನ ಕೇಂದ್ರದ ಸಾಮಾಜಿಕ ವಿಭಾಗದ ಉಪಾಧ್ಯಕ್ಷರಾದ ಬಿ.ಕೆ ಪ್ರೇಂ ಭಾಯಿ ವಿಚಾರ ಸಂಕಿರಣ ಉದ್ದೇಶಿಸಿ ಮಾತನಾಡುವರು. ಕಲಬುರಗಿ ಬ್ರಹ್ಮಾಕುಮಾರಿ ಕೇಂದ್ರದ ಮುಖ್ಯಸ್ಥೆ ಬಿ.ಕೆ ವಿಜಯಾ ಅಕ್ಕನವರು ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸುವರು.

ಕಾರಣ ಬೀದರ್ ಜಿಲ್ಲೆಯ ಎಲ್ಲ ಮುದ್ರಣ ಹಾಗೂ ದೃಶ್ಯ ಮಾಧ್ಯಮ ದ ಗೆಳೆಯರು ಈ ಮಹತ್ವದ ವಿಚಾರ ಸಂಕಿರಣದಲ್ಲಿ ಭಾಗವಹಿಸಬೇಕೆಂದು ಕಲಬುರಗಿ ಬ್ರಹ್ಮಾಕುಮಾರಿಸ್ ಕೇಂದ್ರದ ರಾಜಯೋಗ ಶಿಕ್ಷಕಿ ಬಿ.ಕೆ ರಾಗಿಣಿ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಹಕಾರ ಭಾರತಿ ಜಿಲ್ಲಾ ಪದಾಧಿಕಾರಿಗಳ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಜೂ. 14 : ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿಯಮಿತ ಬೀದರ್ ಸಂಸ್ಥೆಯ ಸಭಾಂಗಣದಲ್ಲಿ ಗುರುವಾರ ಸೌಹಾರ್ದ ಸಹಕಾರಿ ಒಕ್ಕೂಟದ ರಾಜ್ಯಾಧ್ಯಕ್ಷರಾದ ಪ್ರಭುದೇವ್ ಎಮ್ ಆರ್, ರಾಜ್ಯ ಕಾರ್ಯದರ್ಶಿ ವಿಶ್ವನಾಥ ಪಾಟೀಲ್ ಹಾಗೂ ರಾಜ್ಯ ನಿರ್ದೇಶಕರಾದ ಗುರುನಾಥ ಶಾಂತಿಕರ್ ಸೇರಿದಂತೆ ಅನೇಕ ರಾಜ್ಯ ಆಡಳಿತ ಮಂಡಳಿಯ ಸದಸ್ಯರ ನೇತೃತ್ವದಲ್ಲಿ ನೂತನ ಜಿಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು,

ಬೀದರ್ ಜಿಲ್ಲಾ ಅಧ್ಯಕ್ಷರಾಗಿ ಶವಬಸಪ್ಪ ಚನ್ನಲ್ಲೆ, ಉಪಾಧ್ಯಕ್ಷರಾಗಿ ಪ್ರಭುದೇವ ಹಳ್ಳಿಖೆಡ, ಜಿಲ್ಲಾ ಕಾರ್ಯದರ್ಶಿಯಾಗಿ ಬಸವರಾಜ ಹೊಡಗೆ, ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಕಾಂತ್ ಸ್ವಾಮಿ ಸೋಲಪುರ್, ಜಿಲ್ಲಾ ಕೋಶ್ಯಾಧ್ಯಕ್ಷರಾಗಿ ಸಂ- ಜಯ ಗ್ಯಾಸ್ ಇವರನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರಾದ ಪ್ರಭುದೇವ ಮಾತನಾಡಿ, ಸಹಕಾರ ಭಾರತಿ ಸಂಸ್ಥಾಪಕರಾದ ದಿ. ಲಕ್ಷ್ಮಣರಾವ ಇನಾಂದಾರ್ ಅವರ ಸಂಕಲ್ಪದಂತೆ ಬಿನಾ ಸಂಸ್ಕಾರ ನಹಿ ಸಹಕಾರ್, ಬಿನಾ ಸಹಕಾರ್ ನಹಿ ಉದ್ಧಾರ. ಎಂಬ ಸ್ಪಟಿಕ ವಾಣಿಯಾಗಿದ್ದು ಭಾರತೀಯ ಪ್ರತಿ ಪ್ರಜೆ ಸಹಕಾರ ಮನೋಭಾವ ಹೆಚ್ಚಿಸಬೇಕು ಎಂದು ನುಡಿದರು. ನೂತನ ಜಿಲ್ಲಾ ಅಧ್ಯಕ್ಷರ ಹಾಗೂ ಮುಂದಿನ ನೂತನ ಆಡಳಿತ ಮಂಡಳಿಗೆ ಜಿಲ್ಲೆಯ ಎಲ್ಲಾ ಜವಾಬ್ದಾರಿ ನೀಡಲಾಗಿದೆ. ಮುಂಬರುವ ದಿನಗಳಲ್ಲಿ ತಾಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಅಧಿಕಾರ ಜಿಲ್ಲಾ ಅಡಳಿತಮಂಡಳಿಗೆ ನೀಡಲಾಗಿದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಅಧ್ಯಕ್ಷ ವೀರಭದ್ರಪ್ಪ ಭುಯ್ಯ ಅಧಿಕಾರ ಹಸ್ತಾಂತರಿಸಿದರು, ಇದೇ ವೇಳೆ ಭುಯ್ಯಾ ಅವರನ್ನು ರಾಜ್ಯ ಕಾರ್ಯಕಾರಣಿ ಸದಸ್ಯರಾಗಿ ಆಯ್ಕೆ ಮಾಡಲಾಗಿತ್ತು.

ಸಭೆಯಲ್ಲಿ ಭೊಂಮಗೊಂಡೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷ ರಾಜಶೇಖರ ನಾಗಮೂರ್ತಿ, ಸಹಕಾರ ಭಾರತೀಯ ರಾಜ್ಯ ಆಡಳಿತ ಮಂಡಳಿಯ ಸಂಘಟನಾ ಕಾರ್ಯದರ್ಶಿ ಮಂಜುನಾಥ, ವಿಭಾಗಿಯ ಸಂಘಟನಾ ಕಾರ್ಯದರ್ಶಿ ರಾಜಕುಮಾರ, ಸಹಕಾರ ಭಾರತೀಯ ಮಾಜಿ ಉಪಾಧ್ಯಕ್ಷ ಜಗನ್ನಾಥ ಕರಂಜಿ, ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಉಪಾಧ್ಯಕ್ಷ ಸಂಜುಕುಮಾರ ಪಾಟೀಲ್, ನಿರ್ದೇಶಕರಾದ ನಾಗಶೆಟ್ಟಿ ಪಾಟೀಲ್, ಡಾ. ಅಣ್ಣಾರಾವ್, ಮಹದೇವ್ ಅಷ್ಟುರೆ, ಮಾರುತಿ ವಾಡೆಕರ್ ಸೇರಿದಂತೆ ಜಿಲ್ಲಾ ಸಹಕಾರಿಗಳು ಉಪಸ್ಥಿರಿದರು.

## ಜೂ.15 ರಿಂದ 17 ರವರೆಗೆ ವಿವಿಧ ಹುದ್ದೆಗಳ ಆಯ್ಕೆಗಾಗಿ ಲಿಖಿತ ಪರೀಕ್ಷೆ: ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಆದೇಶ



ಬೀದರ, ಜೂ.14 : ದಿನಾಂಕ: 15-06-2025 ರಿಂದ 17-06-2025 ರವರೆಗೆ ಸಿ.ಆರ್.ಪಿ/ಬಿ.ಆರ್.ಪಿ/ಇ.ಸಿ.ಓ/ತಾಂತ್ರಿಕ ಸಹಾಯಕರು ಪ್ರಾಥಮಿಕ ಮತ್ತು ಪ್ರೌಢ ವಿಭಾಗಗಳಿಗೆ ಹಾಗೂ ಗ್ರೂಪ್-ಬಿ ವೃಂದದ ಸಮನಾಂತರ ಹುದ್ದೆಗಳ ಆಯ್ಕೆಗಾಗಿ ಲಿಖಿತ ಪರೀಕ್ಷೆ ಸುಸೂತ್ರವಾಗಿ ನಡೆಸುವ ಸಲುವಾಗಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ-2023 ರ ಕಲಂ 163(1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜೂನ್.15 ರಿಂದ 17 ರವರೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ) ನೌಬಾದ, ಬೀದರ ಪರೀಕ್ಷಾ ಕೇಂದ್ರದ ಸುತ್ತಮುತ್ತ 200 ಮೀಟರ್ ವ್ಯಾಪ್ತಿ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ಅವರು ಆದೇಶಿಸಿರುತ್ತಾರೆ.

## ಜೂ.16 ರಂದು ಎನ್‌ಎಬಿಎಲ್ ಮಾನ್ಯತೆ, ಅದರ ಲಾಭಗಳು ಕುರಿತು ಜಾಗೃತಿ ಕಾರ್ಯಕ್ರಮ

ಬೀದರ, ಜೂ.14 : ಬೀದರ ತೋಟಗಾರಿಕೆ ಮಹಾವಿದ್ಯಾಲಯ, ರಿವರ್ಡ ಯೋಜನೆ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ ಬೀದರ, ರಾಷ್ಟ್ರೀಯ ಪರೀ- ಕ್ಷೆ ಮತ್ತು ಅಂಶಶೋಧನಾ ಪ್ರಯೋಗಾಲಯಗಳ ಮಾನ್ಯತಾ ಮಂಡಳಿ (ಎನ್‌ಎಬಿಎಲ್) ಅವರ ಸಹಯೋಗದೊಂದಿಗೆ ಜೂನ್.16 ರಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3.30 ರವರೆಗೆ ಸೆಮಿನಾರ್ ಹಾಲ್, ತೋಟಗಾರಿಕೆ ಮಹಾವಿದ್ಯಾಲಯ ಬೀದರದಲ್ಲಿ ಎನ್‌ಎಬಿಎಲ್ ಮಾನ್ಯತೆ ಮತ್ತು ಅದರ ಲಾಭಗಳು ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೀದರ ಕೆಆರ್‌ಇ ಸೊಸೈಟಿಯ ಕರ್ನಾಟಕ ಆರ್ಟ್ಸ್ ???ಂಡ್ ಕಾಮರ್ಸ ಕಾಲೇಜಿನ ಐಕ್ಯೂಎಸಿ ಸಂಯೋಜಕರಾದ ಡಾ.ರಾಜಮೋಹನ ಪರದೇಶಿ ಭಾಗವಹಿಸಲಿದ್ದಾರೆ. ಹಾಗೂ ಅಧ್ಯಕ್ಷತೆಯನ್ನು ಬೀದರ ತೆ-ೂಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಎಸ್.ವಿ.ಪಾಟೀಲ್ ಅವರು ವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಎನ್‌ಎಬಿಎಲ್ ನಿರ್ದೇಶಕ ಶ್ರೀಕಾಂತ್ ಆರ್., ಎನ್‌ಎಬಿಎಲ್ ಸಮನ್ವಯಕರಾದ ಅಕ್ಷಯ್ ಜಿ.ಎಂ., ಮಾನಸಿ ಕುಲಕರ್ಣಿ ಅವರುಗಳು ಭಾಗವಹಿಸಲಿದ್ದಾರೆ.

# "ದಿ ಸ್ಟಡಿ ಫಾಲ್ಕನ್" ಸಾಮಗ್ರಿಗಳು ವಿದ್ಯಾರ್ಥಿಗಳಿಗೆ ಬಹುಮುಖ್ಯ ಹೆಜ್ಜೆಯಾಗಿದೆ:ಬಸವರಾಜ ಭತಮುರ್ಗೆ




ಮಲ್ಲಮ್ಮ ನುಡಿ ವಾರ್ತೆ

ಬೀದರ, ಜೂ.14 : ದಿ ಸ್ಟಡಿ ಫಾಲ್ಕನ್ ಸಾಮಗ್ರಿಗಳು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯ್ಯಾರಿ ನಡೆಸಲು ಬಹುಮುಖ್ಯವಾದ ಹೆಜ್ಜೆಯಾಗಿದೆ ಎಂದು ಬೀದರ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರಾದ ಬಸವರಾಜ ಭತಮುರ್ಗೆ ತಿಳಿಸಿದರು.

ಅವರು ಶುಕ್ರವಾರ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್‌ನ ವಿಶ್ವವಿದ್ಯಾಲಯ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವು ಬೀದರನ ಪಶು ವೈದ್ಯಕೀಯ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ವಿನ್ಯಾಸಗೊಳಿಸಲಾದ ಅಮೂಲ್ಯ ಇ-ಸಂಪನ್ಮೂಲವಾದ "ದಿ ಸ್ಟಡಿ ಫಾಲ್ಕನ್" ಸಾಮಗ್ರಿಗಳನ್ನು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಪರಿಚಯಿಸಲು ಚಾಲನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕರ್ನಾಟಕ ಅಭಿಯಂತರ ಪರಿಷತ್ ಸದಸ್ಯರು ಮತ್ತು ಬೀದರ್ ಜಿಲ್ಲಾ ಸಿವಿಲ್ ಇಂಜಿನಿಯರ್ ಅಸೋಸಿಯೇಷನ್ ಅಧ್ಯಕ್ಷರಾದ ಹಾವಶೆಟ್ಟಿ ಪಾಟೀಲ್ ಮಾತನಾಡಿ, ದಿ-ಸ್ಟಡಿ ಫಾಲ್ಕನ್ ಯೋಜನೆಯಿಂದ ವಿದ್ಯಾರ್ಥಿಗಳು ಸರಿಯಾದ ಸಮಯದಲ್ಲಿ ಅತ್ಯಗತ್ಯ ಡಿಜಿಟಲ್ ಮತ್ತು ಶೈಕ್ಷಣಿಕ ಸಂಪನ್ಮೂಲಗಳನ್ನು ಪಡೆದಿರುವದು ತುಂಬಾ ಸಂತೋಷದ ವಿಷಯ. ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಲು ಈ ಡಿಜಿಟಲ್ ಸಂಪನ್ಮೂಲಗಳು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ "ಸ್ಟಡಿ ಫಾಲ್ಕೋನ್ ಸಂಸ್ಥೆ" ನವದೆಹಲಿಯ ಸ-ಸಂಸ್ತಾಪಕರಾದ ವಿನಯ್ ಗೊಯಲ್ ಮತ್ತು ಪಿಯುಶ್ ಚಂದ್ರ ಇವರು ಈ ಡಿಜಿಟಲ್ ಸಂಪನ್ಮೂಲಗಳನ್ನು ಹೇಗೆ ಉಪಯೋಗಿಸಬೇಕೆಂಬುವದನ್ನು ಸವಿವರವಾಗಿ ವಿದ್ಯಾರ್ಥಿಗಳಿಗೆ ವಿವರಿಸಿದರು. ಬೀದರ್‌ನ ಪಶು ವೈದ್ಯಕೀಯ ಕಾಲೇಜಿನ ಎಲ್ಲಾ ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಲಭ್ಯವಿರುವ ಶೈಕ್ಷಣಿಕ ಸಂಪನ್ಮೂಲಗಳ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಕಪಪಮಿವಿವಿ ವಿಸ್ತರಣಾ ನಿರ್ದೇಶಕರಾದ ಡಾ.ಬಸವರಾಜ ಅವಟಿ, ಪಶು ವೈದ್ಯಕೀಯ ಮಹಾವಿದ್ಯಾಲಯದ ಪ್ರಭಾರಿ ಡೀನ್ ಡಾ.ವಿವೇಕ್ ಕಾಸರಳಿಕರ, ವಿಶ್ವವಿದ್ಯಾನಿಲಯದ ಹಣಕಾಸು ನಿಯಂತ್ರಣಾಧಿಕಾರಿಗಳಾದ ಅಹ್ಮದ್‌ರವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಸಂಯೋಜ- ಕರಾದ ಡಾ. ಯು. ಎಸ್. ಜಾಧವ ಸ್ವಾಗತಿಸಿದರು ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತನ ನೋಡಲ್ ಅಧಿಕಾರಿಯಾದ ಡಾ. ಶ್ರೀಕಾಂತ್ ಕುಲಕರ್ಣಿ ವಂದಿಸಿದರು.

# ಕಾನೂನು ಪ್ರಕಾರ ಗೋಹತ್ಯೆ ವಿರುದ್ಧ ಹೋರಾಟ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಜೂ.14: ಇತ್ತೀಚಿಗೆ ಪಟ್ಟಣದ ಹೊರವಲಯದ ರಾಂಪುರ ರಸ್ತೆಯ ಪಕ್ಕದ ಶೇಡವೊಂದರಲ್ಲಿ ಗೋಹತ್ಯೆ ನಡೆದಿದ್ದು,

ಗೋಹತ್ಯೆ ವಿರುದ್ಧ ಹೋರಾಟವನ್ನು ಕಾನೂನು ಪ್ರಕಾರ ಮಾಡಲಾಗುವುದು, ಆರೋಪಿಗಳ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಲು ಸರ್ಕಾರಕ್ಕೆ ಒತ್ತಡ ಹೇರಲಾಗುವುದು ಎಂದು ಪ್ರಭು ಚವ್ಹಾಣ ಹೇಳಿದರು.

ಪಟ್ಟಣದ ಅತಿಥಿ ಗೃಹದಲ್ಲಿ ಶನಿವಾರ ಸಂಜೆ ನಡೆದ ಶಾಂತಿ ಸಭೆಯ ಉದ್ದೇಶಿ ಶಾಸಕ ಪ್ರಭು ಚವ್ಹಾಣ ಅವರು ವಿವಿಧ ಹಿಂದೂ ಸಂಘಟನ ಕಾರ್ಯಕರ್ತರು ಜೊತೆ ಮಾತನಾಡಿದರು.

ಯಾರೂ ಕೂಡಾ ಆತುರಕ್ಕೆ ಒಳಗಾಗಿ ಗಲಾಟೆ ಮಾಡಬಾರದು. ಕಾರ್ಯಕರ್ತರು ಶಾಂತಿಯುತವಾಗಿ ಇರಬೇಕು ಕಮಲನಗರ ಪಟ್ಟಣ ಸೇರಿದಂತೆ ತಾಲೂಕಿನ ಹಳ್ಳಿಗಲ್ಲಿ ಅನಗತ್ಯ ಹೋರಾಟ ಮಾಡದೇ ಕಾನೂನು ಪಾಲನೆ ಮಾಡುವಂತೆ ಸೂಚಿಸಿದರು.

# ವಿಶ್ವಕ್ಕೆ ಮಾನವೀಯ ಮೌಲ್ಯ ತೋರಿಸಿದ್ದು ಭಾರತ : ಗುರುಬಸವ ಪಟ್ಟದ್ದೇವರು



> ನಿರೋಗಿಯಾಗಿ ಬಾಳಲು ಯೋಗ ಮುಖ್ಯ ಅಸ್ತ್ರವಾಗಿದೆ. ನಮ್ಮ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಂಡು ನೀರೋಗಿ ಜೀವನ ಸಾಗಿಸಬೇಕು .
>
> -ಗುರುಬಸವ ಪಟ್ಟದ್ದೇವರು, ಪೀಠಾಧಿಪತಿಗಳು, ಹಿರೇಮಠ ಸಂಸ್ಥಾನ ಭಾಲ್ಕಿ.

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜೂ.14: ಜಗತ್ತಿಗೆ ಮಾನವೀಯ ಮೌಲ್ಯ ತೋರಿಸಿದ್ದು ಭಾರತದೇಶವಾಗಿದೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಪ್ರತಿಪಾದಿಸಿದರು.

ಪಟ್ಟಣದ ಕಲ್ಯಾಣಿ ನಗರದ ಷಣ್ಮುಖಪ್ಪ ಕಲ್ಯಾಣ ಮಂಟಪದಲ್ಲಿ ಅಂತರಾಷ್ಟ್ರೀಯ ಯೋಗದಿನ 2025 ನಿಮಿತ್ಯ ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗದ ಸದುದ್ದೇಶದಿಂದ ವಿಶ್ವವಾಹಿನಿ ಶಿಕ್ಷಣ ಸಂಸ್ಥೆಯ ಆಯೋಜತ್ವದಲ್ಲಿ, ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ ಇನ್ ಯೋಗ್ ಮತ್ತು ನ್ಯಾಚುರೋಪತಿ, ಭಾರತ ಸರ್ಕಾರದ ಆಯುಷ್ ಮಂತ್ರಾಲಯ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಸಾಮ ಯೋಗ ಕಾರ್ಯಕ್ರಮ ದಿವ್ಯ ಸಾನಿಧ್ಯವಹಿಸಿ ಅವರು ಮಾತನಾಡಿದರು. ಇಂದು ಪ್ರಪಂಚ ಭಾರತದತ್ತ ನೋಡುವಂತಾಗಿದೆ. ಪ್ರಾಚೀನ ಕಾಲದಿಂದಲೂ ಭಾರತ ಸುಸಂಸ್ಕೃತ ರಾಷ್ಟ್ರ, ನಮ್ಮ ಹಿಂದಿನ ಋಷಿಮುನಿಗಳು ಯೋಗ, ಧ್ಯಾನದಿಂದ ಜಗದ್ಗುರುಗಳಾಗಿ ಹೊರಹೊಮ್ಮಿದ್ದಾರೆ. ವಿಶ್ವಕ್ಕೆ ಮಾನವೀಯ ಮೌಲ್ಯ ತೋರಿಸಿ ಕೊಟ್ಟದ್ದು ಭಾರತದೇಶವಾಗಿದೆ. ಯೋಗದಿಂದ ನಿರೋಗಿ ಜೀವನ ಸಾಧಿಸಲು ಸಾಧ್ಯ ಎಂದು ಜಗತ್ತಿಗೆ ಸಾರಿ ಹೇಳಿದ ದೇಶ ನಮ್ಮದು ಎಂದು ಹೇಳಿದರು.

ವಿವೇಕವಾಹಿನಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗು ಐಎನ್‌ಓ ತಾಲೂಕು ಸಂಚಾಲಕ ಈಶ್ವರ ರುಮ್ಮಾ ನೇತೃತ್ವವಹಿಸಿ ಮಾತನಾಡಿ, ಇದೇ ಜೂನ್ 21 ರಂದು ನಡೆಯಲಿರುವ ಅಂತರ ರಾಷ್ಟ್ರೀಯ ಯೋಗ ದಿನದ ನಿಮಿತ್ಯ ಜಗತ್ತಿನಾದ್ಯಂತ ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಐಎನ್‌ಓ ಸಹಯೋಗದಲ್ಲಿ ಯೋಗ ತರಬೇತಿ ನೀಡುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಯಾವುದೇ ಅಡ್ಡಪರಿಣಾಮವಿದಲ್ಲದೇ ಯೋಗದಿಂದ ಎಲ್ಲಾ ಕಾಯಿಲೆಗಳು ವಾಸಿ ಮಾಡಿಕೊಳ್ಳಬಹುದು. ಯೋಗದಿಂದ ನರೋಗಿ ಜೀವನ ಸಾಗಿಸಬಹುದು ಎಂದು ಹೇಳಿದರು. ಐಎನ್‌ಓ ಜಿಲ್ಲಾ ಉಪಾಧ್ಯಕ್ಷ ಹಾಗು ಯೋಗ ಗುರು ಹರಿದೇವ ರುದ್ರಮಣಿ ಯೋಗ ತರಬೇತಿ ನೀಡಿದರು. ವಿಶೇಷ ಉಪನ್ಯಾಸ ಮಂಡಿಸಿದ ಬಿಎನ್‌ಎಸ್‌ವಾಯ್ ಕಲಬುರಗಿಯ ಡಾ| ರಿಷಿಕೇಶ ಗೂಗಳೆ, ಬಿಎನ್‌ವಾಯ್‌ಎಸ್ ಕೂಡ ಎಮ್‌ಬಿಬಿಎಸ್ ಪದವಿಯಂತೆ ಒಂದು ಉತ್ತಮ ಪದವಿಯಾಗಿದೆ. ಹೆಚ್ಚಿನ ಜನರಿಗೆ ಇದರ ಬಗ್ಗೆ ಮಾಹಿತಿ ಇಲ್ಲ. ಬಿಎನ್‌ಎಸ್‌ವಾಯ್ ಎಂದರೆ ಬ್ಯಾಚಿಲರ್ ಆಫ್ ನ್ಯಾಚುರೋಪತಿ ಯೋಗಾಸಾಯಿನ್ಸ್, ಪಿಯುಸಿ ನಂತರ ನಾಲ್ಕು ವರ್ಷದ ಪದವಿ ಇದಾದಿಗೆ. ಹೆಚ್ಚಿನ ವಿದ್ಯಾರ್ಥಿಗಳು ಈ ಪದವಿ ಪಡೆದು ಉತ್ತಮ ವೈದ್ಯರಾಗಬಹುದು ಎಂದು ಮಾಹಿತಿ ನೀಡಿದರು. ಇದೇ ವೇಳೆ ಯೋಗಪಟು ಆನಂದ, ಗೌರಿ ಓಂಪಾಟೀಲ ಮತ್ತು ಮಂಗಲಾ ಕಾಡೋದೆಯವರಿಂದ ಯೋಗ ಪ್ರದರ್ಶನ ನಡೆಯಿತು. ಕಾರ್ಯಕ್ರಮದಲ್ಲಿ ಪ್ರಮುಖರಾದ ಸೂರ್ಯಕಾಂತ ಮಲ್ಲಾಸೂರೆ, ಜೈರಾಜ ದಾಬಶೆಟ್ಟಿ, ಸಂಗಮೇಶ ಗಾಮಾ, ಜಯಕಿಶನ ಬಿಯಾನಿ, ಐಎನ್‌ಓ ರಾಜ್ಯ ಸಂಚಾಲಕ ಗುರುನಾಥ ರಾಜಗೀರಾ, ಗೋರಖನಾಥ ಕುಂಬಾರ, ವಕೀಲರ ಸಂಘದ ಕಾರ್ಯದರ್ಶಿ ಶಿವಕುಮಾರ ಕೇರೂರೆ, ಚಂದ್ರಕಾಂತ ತಳವಾಡೆ, ಯೋಗೇಂದ್ರ ಎದಲಾಪೂರೆ, ಸಂತೋಷ ಪಾಟೀಲ, ಡಾ| ಮಂಜುಳಾ ಮುಚಳಂಬೆ, ಅಮರ ಹಲಮಂಡಗೆ, ಪಂಡಿತ ಪಾಟೀಲ, ಶಿವಾನಂದ ಗುಂದಗೆ ಉಪಸ್ಥಿತರಿದ್ದರು. ಈಶ್ವರ ರುಮ್ಮಾ ಸ್ವಾಗತಿಸಿದರು. ಗುರುನಾಥ ರಾಜಗೀರಾ ವಂದಿಸಿದರು.

# ಪ್ರವಾಸೋದ್ಯಮ ಇಲಾಖೆಯಿಂದ ವಿವಿಧ ಯೋಜನೆಗಳ ಕಾಮಗಾರಿ ಸಚಿವ ಎಚ್.ಕೆ. ಪಾಟೀಲ ಅವರಿಂದ ಪ್ರಗತಿ ಪರಿಶೀಲನಾ ಸಭೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಜೂನ್. 14- 2020-25ನೇ ಸಾಲಿನ ಕರ್ನಾಟಕ ಪ್ರವಾಸೋದ್ಯಮ ನೀತಿಯಡಿ ಗುರುತಿಸಿರುವ ಪ್ರವಾಸಿ ತಾಣಗಳ ಕೈಗೊಂಡ ಕಾಮಗಾರಿ ವಿವರಗಳು ವಿವಿಧ ಯೋಜನೆ ಹಾಗೂ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರ ಶಾಸನ ರಚನೆ ಹಾಗೂ ಪ್ರವಾದೋದ್ಯಮ ಸಚಿವರಾದ ಎಚ್.ಕೆ. ಪಾಟೀಲ ನಡೆಸಿದರು.



ಶನಿವಾರದಂದು ಹಳೆ ಐವಾನ -ಇ- ಶಾಹಿ ಅತಿಥಿಗೃಹದಲ್ಲಿ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲಿಸಿ ಮಾತನಾಡಿ, ಈಗಾಗಲೇ ಎಷ್ಟು ಕಾಮಗಾರಿಗಳು ಬಾಕಿ ಇವೆ ಅಧಿಕಾರಿಗಳೊಂದಿಗೆ ಪ್ರಶ್ನಿಸಿದರು.

ಪ್ರವಾಸೋದ್ಯಮ ಇಲಾಖೆ ಪ್ರಭಾರಿ ಉಪನಿರ್ದೇಶಕಿ ಅನುಸೂಯ ಎಂ. ಹೂಗಾರ ಅವರು ಮಾತನಾಡಿ, ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಗಾಣಗಾಪೂರದಲ್ಲಿ ಧಾರ್ಮಿಕ ದತ್ತಿ ಇಲಾಖೆಯಿಂದ ಕೇಂದ್ರ ಸರ್ಕಾರ ಪ್ರಸಾದ ಯೋಜನೆಯಡಿ ರೂ. 83.50 ಕೋಟಿ ವೆಚ್ಚದ ಪರಿಕಲ್ಪನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು.

ಅನುದಾನ ಬಿಡುಗಡೆ- ಯಾದರೆ ಪ್ರವಾಸೋದ್ಯಮಗೆ ಸಂಬಂಧಪಟ್ಟ ಎಲ್ಲ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದು ಹೇಳಿದರು.

ಘತ್ತರಗಿ ಗ್ರಾಮದಲ್ಲಿ ಪ್ರವಾಸದ್ಯೋಮ ಇಲಾಖೆ ವತಿಯಿಂದ 100 ಲಕ್ಷಗಳ ಅನುದಾನದಲ್ಲಿ ಯಾತ್ರಿಕನಿವಾಸ ಕಾಮಗಾರಿ ಪ್ರಗತಿಯಲ್ಲಿ ಇದೆ ಎಂದು ತಿಳಿಸಿದರು.

ಪ್ರವಾಸಿ ತಾಣಗಳು ಅಭಿವೃದ್ಧಿ ಪಡಿಸಲು ಈಗಾಗಲೇ ಸರ್ಕಾರ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸಚಿವರ ಗಮನಕ್ಕೆ ತಂದರು. ನಾನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಅನುದಾನ ಬಿಡುಗಡೆ ಮಾಡಲು ಪ್ರಯತ್ನ ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ಸಚಿವರು ಹೇಳಿದರು.

2024-25 ನೇ ಸಾಲಿನ ಆಯವ್ಯಯದಲ್ಲಿ ಚಂದ್ರಂಪಳ್ಳಿ ಜಲಾಶಯದ ಹಿನ್ನಿರಿನಲ್ಲಿ ಜಲಸಾಹಸ ಕ್ರೀಡೆ ಮತ್ತು ಜಲ ಪ್ರವಾಸ್ಯೋದ್ಯಮ ಚಟುವಟಿಕೆಗಳನ್ನು ನಡೆಸಲು ಸರ್ಕಾರ ಅನುಮೋಧನೆ ನೀಡಿರುತ್ತದೆ ಈಗಷ್ಟೆ ಆರಂಭಗೊಂಡಿದೆ ಎಂದು ಹೇಳಿದರು.

ಕಲಬುರಗಿ ಜಿಲ್ಲೆಯ ಪ್ರವಾಸ ತಾಣಗಳ ಶರಣಬಸವೇಶ್ವರ ದೇವಸ್ಥಾನ, ಬುದ್ದ ವಿಹಾರ, ಕಲಬುರಗಿ ಕೋಟೆ, ಪ್ರಾಣಿ ಸಂಗ್ರಹಾಲಯ, ಪ್ರಾಚ್ಯ ವಸ್ತು ಸಂಗ್ರಹಾಲಯ, ಘತ್ತರಗಿ ಭಾಗ್ಯವಂತಿ ದೇವಸ್ಥಾನ, ಘಾಣಗಾಪೂರ ದತ್ತ ದೇವಸ್ಥಾನ, ಲಾಡ್ಲೆ ಮಶಾಕ ದರ್ಗಾ, ಮಳಖೇಡ ಕೋಟೆಗಳಿಗೆ ಪ್ರವಾಸಿ ಮಿತ್ರ ಯೋಜನೆಯಲ್ಲಿ 48 ಜನ ಸಿಬ್ಬಂದಿಗಳ ಆಯ್ಕೆಮಾಡಿದ್ದೇವೆ. ಇದರಿಂದ ಪ್ರವಾಸಿಗರ ಸೂಕ್ತ ಭದ್ರತೆ ಹಾಗೂ ಅಗತ್ಯ ಮಾಹಿತಿಗಾಗಿ ಪೂರೈಕೆಗಾಗಿ ಆಯೋಜಿಸಲಾಗಿದೆ ಎಂದರು.

ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆಯಡಿ ನಿರುದ್ಯೋಗಿಗಳಿಗೆ 4 ರಿಂದ 5 ತಿಂಗಳ ಕಾಲ ಕೌಶಲಾಭಿವೃದ್ಧಿ ತರಬೇತಿ ನೀಡಲಾಗುವುದು, ಮೊಬೈಲ್ ಕ್ಯಾಂಟಿನ ನಡೆಸಲು 5 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ ಅವರು ತಿಳಿಸಿದರು.

ಮೂರು ನೂತನ ಪ್ರಸ್ತಾವನೆಗಳು ಸಲ್ಲಿಸಿದ್ದು, ಅಫಜಲಪೂರ ತಾಲ್ಲೂಕಿನ ಆತನೂರ ಹೊಬಳಿಯ ದೇವಲ ಗಾಣಗಾಪುರ ಗ್ರಾಮದ ಸರ್ವೆ ನಂ. 234 ರಲ್ಲಿ 02 ಎಕರೆ 30 ಗುಂಟೆ ನಿವೇಶನ ಇಲಾಖೆ ಹೆಸರಿನಲ್ಲಿ ಲಭ್ಯವಿದ್ದು ಪ್ರವಾಸ್ಯೋದ್ಯಮ ಚಟುವಟಿಕೆಗಳು ಕೈಗೊಳ್ಳಲು ಸೂಕ್ತವಾಗಿದೆ.

ಕಲಬುರಗಿ ನಗರದ ಕೆಸರಟಿಗೆ ಗ್ರಾಮದ ಸರ್ವೆ ನಂ. 89/1 ರಲ್ಲಿ 3.5 ಎಕರೆ ಜಮೀನು ಇಲಾಖೆಯ ಹೆಸರಿನಲ್ಲಿ ಲಭ್ಯವಿದ್ದು, ಪ್ರವಾಸೋದ್ಯಮ ಚಟುವಟಿಕೆ ಬಳಸಿಕೊಳ್ಳಬಹುದಾಗಿದೆ ಎಂದು ಅಧಿಕಾರಿಗಳು ಸಚಿವರ ಗಮನಕ್ಕೆ ತಂದರು

ಕೆ.ಆರ್.ಐ.ಡಿ.ಎಲ್., ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕೆಟಿಐಎಲ್ ಒಟ್ಟು 6 ಅನುಷ್ಠಾನ ಸಂಸ್ಥೆಗಳು ಸೇರಿ ರೂ 1359 ಕೋಟಿ ಅನುದಾನ ಸರ್ಕಾರದಿಂದ ಬಿಡುಗಡೆ ಮಾಡಿದರೆ ಎಲ್ಲ ಕೆಲಸಗಳನ್ನು ಸಂಪೂರ್ಣವಾಗಿ ಮುಕ್ತಾಯಗೊಳ್ಳುತ್ತದೆ ಎಂದು ಉಪನಿರ್ದೇಶಕಿ ಸಚಿವರಿಗೆ ತಿಳಿಸಿದರು.

ಕಲಬುರಗಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಸಹಾಯಕ ನಿರ್ದೇಶಕ ರಾಜಾರಾಮ್ ಅವರು ಮಾತನಾಡಿ, ನಾಗಾವಿಯಲ್ಲಿ ಅಭಿವೃದ್ಧಿ ಸಂಬಂಧಪಟ್ಟಂತೆ ನಾಗಾವಿಯ ಘಟಕ ಸ್ಥಾನ 60 ಕಂಬದ ದೇವಾಲಯ ಜೀರ್ಣೋದರ ಮತ್ತು ಸಂರಕ್ಷಣೆ ನಂದೇಶ್ವರ ದೇವಾಲಯ, ಕರಿ ಮಸೀದಿ, ಸಂಜೀವಿನಿ ಅಂಜನೆಯ ದೇವಸ್ಥಾನ ಜೀರ್ಣೋಧಾರ ಮತ್ತು ಅಭಿವೃದ್ಧಿ ಮಾಡಲು ನಾಗಾವಿಯ ಮಧುಸೂದನ ದೇವಾಲಯ ಆವರಣದಲ್ಲಿ ಅನ್ವೇಷಣೆ ಮಾಡಲು ಈಗಾಗಲೇ ಇಲಾಖೆಯಲ್ಲಿ ಚರ್ಚಿಸಿದ್ದೇವೆ ಎಂದರು.

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿರುವ ಕನಗನಹಳ್ಳಿಯ ಮಾಹಿತಿ ಕೇಂದ್ರದ ಅಭಿವೃದ್ಧಿ ಹಾಗೂ ಸಂರಕ್ಷಣೆ ಮತ್ತು ಮೂಲಭೂತ ಸೌಕರ್ಯವನ್ನು ಒದಗಿಸಲು ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಲಾಗಿದೆ. ದ್ವಿಜಾ ಅಸೋಸಿಯೇಟ್ಸ್ ಬೆಂಗಳೂರು ಮತ್ತು ಇಡಿಸಿ ಬೆಂಗಳೂರು ಇವರು ಸ್ಥಳ ಪರಿಶೀಲನೆ ನಡೆಸಿದ್ದುಮ ಯೋಜನಾ ವರದಿಯು ತಯಾರಿಕೆ ಹಂತದಲ್ಲಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಕಲಬುರಗಿ ಹೈಕೋರ್ಟಿನ್ ಅಡಿಷನಲ್ ಅಡ್ವಕೇಟ್ ಜನರಲ್ ಗೌರವಾನ್ವಿತ ಅರ್ಚನಾ ತಿವಾರಿ ಪ್ರವಾಸೋದ್ಯಮ ಇಲಾಖೆ ಸಹಾಯಕ ಅಭಿಯಂತರಾದ ಯೋಗೇಶ ಅಣದುರೆ, ಪುರಾತತ್ವ ಸಹಾಯಕ ಶಿವಪ್ರಕಾಶ, ಪ್ರವಾಸೋದ್ಯಮ ಇಲಾಖೆಯ ದ್ವಿತೀಯ ಸಹಾಯಕ ಲಿಂಗಮೂರ್ತಿ, ಇದ್ದರು.

# ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಇಂದು “ ಮಾವು ಮೇಳ-2025”



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಜೂನ್ 14- ಅಲುಮ್ನಿ ಅಸೋಸಿಯೇಷನ್, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ), ಬೆಂಗಳೂರು ಹಾಗೂ ತೋಟಗಾರಿಕೆ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ "ಮಾವು ಮೇಳ-2025"ರ ಉದ್ಘಾಟನೆಯನ್ನು ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ. ಎಸ್. ರಮೇಶ್ ಇವರು ನೆರವೇರಿಸಿ ಇಂದು ಮತ್ತು ನಾಳೆ ಈ ಮೇಳವು ಮಾವು ಬೆಳೆಗಾರರ ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸುವ ಸೇತುವೆಯಾಗಿದೆ. ಇದರಿಂದ ರೈತರಿಗೆ ಉತ್ತಮ ಬೆಲೆ ಸಿಕ್ಕರೆ ಗ್ರಾಹಕರಿಗೆ ಕಡಿಮೆ ದರದಲ್ಲಿ ತಾಜ ಮಾವಿನಹಣ್ಣು ದೊರಕುತ್ತದೆ. ಇದರ ಪ್ರಯೋಜನವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ತಿಳಿಸಿದರು.

ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ಡಾ. ಕೆ. ಸಿ. ವೀರಣ್ಣ, ಕುಲಪತಿಗಳು, ಕ.ಪ.ಪ.ಮಿ.ವಿ.ವಿ., ಬೀದರ ಇವರು ಮಾತನಾಡಿ ಮಾವಿನ ಎಲ್ಲಾ ಜಾತಿಯ ತಳಿಗಳಿಗೆ ಉತ್ತಮ ಬೆಲೆ ಸಿಗುವುದಿಲ್ಲ. ಇಂತಹ ಮೇಳಗಳನ್ನು ನಿರಂತರವಾಗಿ ಏರ್ಪಡಿಸುವುದರಿಂದ ಮಧ್ಯವರ್ತಿಗಳ ಹಾವಳಿ ಇಲ್ಲದೆ ರೈತರಿಗೆ ಮತ್ತು ಗ್ರಾಹಕರಿಬ್ಬರಿಗೂ ಅನುಕೂಲಕರವಾಗಲಿದೆ ಎಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ. ಹೆಚ್. ಎಲ್. ಹರೀಶ್, ಆಡಳಿತ ಮಂಡಳಿ ಸದಸ್ಯರು, ಕೃ.ವಿ.ವಿ., ಬೆಂಗಳೂರು ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಡಾ. ಸಿ. ಜಿ. ನಾಗರಾಜು, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ), ಬೆಂಗಳೂರು ಮತ್ತು ಅಲುಮ್ನಿ ಅಸೋಸಿಯೇಷನ್ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸದಸ್ಯರು ಉಪಸ್ಥಿತರಿದ್ದರು.

# 'ಆರೋಗ್ಯ ಆವಿಷ್ಕಾರ'ಕ್ಕೆ ಮುಖ್ಯ ಮಂತ್ರಿಗಳಿಂದ ಚಾಲನೆ.



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮಂಡಳಿಯ 'ಆರೋಗ್ಯ ಆವಿಷ್ಕಾರ'ಯೋಜನೆಯಡಿ ಆರೋಗ್ಯ ಇಲಾಖೆಯ ವಿವಿಧ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವರು ಇಂದು ಚಾಲನೆ ನೀಡಿದ್ದಾರೆ.

ಕೆಕೆಆರ್‌ಡಿಬಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ ಸುಮಾರು ಸಾವಿರಾರು ಜನಗಳ ಸಮ್ಮುಖದಲ್ಲಿ ಜರುಗಿತು.

ರೂ.440. 68 ಕೋಟಿ ವೆಚ್ಚದ ಆರೋಗ್ಯ ಅವಿಷ್ಕಾರ ಯೋಜನೆಯಡಿ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯಸಿಂಗ್, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವರಾದ ದಿನೇಶ ಗುಂಡೂರಾವ ಸೇರಿದಂತೆಯೇ ಏಳು ಜಿಲ್ಲೆಗಳ ಉಸ್ತುವಾರಿ ಸಚಿವರು, ಶಾಸಕರು, ಹಿರಿಯ ಅಧಿಕಾರಿಗಳು ಹಾಜರಿದ್ದರು.

ಆರೋಗ್ಯ ಅವಿಷ್ಕಾರದಲ್ಲಿ ಕಲ್ಯಾಣ ಕರ್ನಾಟಕದ ಭಾಗದ ಜನರಿಗೆ ಅನುಕೂಲವಾಗಲು 1200 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ, 6 ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆ, 1 ನಗರ ಆರೋಗ್ಯ ಕೇಂದ್ರಕ್ಕೆ ಚಾಲನೆ, 14 ಸಿಎಚ್‌ಸಿಗಳನ್ನು 100 ಹಾಸಿಗೆಗೆ ಮೇಲ್ದರ್ಜೆಗೆ ಏರಿಸುವುದು, 3 ಸಿಎಚ್‌ಸಿಗಳನ್ನು 100 ರಿಂದ 1500 ಹಾಸಿಗೆಗೆ ಮೇಲ್ದರ್ಜೆಗೇರಿಸುವುದು, 30 ಹಾಸಿಗೆ 3 ಸಿಎಚ್‌ಸಿಗಳನ್ನು 150 ಹಾಸಿಗೆಗೆ ಹೆಚ್ಚಿಸುವುದು, 2 ಪಿಎಚ್‌ಸಿಗಳನ್ನು 100 ಹಾಸಿಗೆಗೆ ಮೇಲ್ದರ್ಜೆಗೆ ಏರಿಸುವದು ಈ ಯೋಜನೆಯ ಉದ್ದೇಶ.

ಜಿಲ್ಲಾ ಸಮನ್ವಯ ಸಮಿತಿ ಸಭೆ:

# ಜನನ-ಮರಣ ನೊಂದಣಿಗೆ ವಿಳಂಬ ಸಲ್ಲದು-ಬಿ.ಫೌಜಿಯಾ ತರನ್ನುಮ್



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜೂ.14-ಜಿಲ್ಲೆಯಾದ್ಯಂತ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತ್ ಸ್ಥಳೀಯ ಸಂಸ್ಥೆಗಳಲ್ಲಿ ಜನನ-ಮರಣ ನೊಂದಣಿಗೆ ಬರುವ ಅರ್ಜಿಯನ್ನು ವಿಳಂಬ ಮಾಡದೆ ಸಕಾಲದಲ್ಲಿ ನೋಂದಣಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಸಮನ್ವಯ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 21 ದಿನದೊಳಗೆ ಜನನ-ಮರಣ ನೋಂದಣಿ ಮಾಡಬೇಕಾಗಿರುತ್ತದೆ. ಅಂಗನವಾಡಿ-ಆಶಾ ಕಾರ್ಯಕರ್ತೆ-ಯರು, ಕುಟುಂಬದ ಸದಸ್ಯರು, ಅಂಬುಲೆನ್ಸ್ ವಾಹನದ ಚಾಲಕರು ಹೊಸದಾಗಿ ಜನನ-ಮರಣ ಕುರಿತು ಸಂಬಂಧಪಟ್ಟವರಿಗೆ ಮಾಹಿತಿ ನೀಡಬೇಕು ಎಂದು ಜಿಲ್ಲೆಯ ಜನನ-ಮರಣ ನೋಂದಣಾಧಿಕಾರಿಗಳಾಗಿರುವ ಡಿ.ಸಿ. ಅವರು ತಿಳಿಸಿದರು.

2025ರ ಜನವರಿ ದಿಂದ ಮೇ ಮಾಹೆ ವರೆಗೆ ಜಿಲ್ಲೆಯ 261 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜನನ ನೋಂದಣಿಗೆ ಸಲ್ಲಿಕೆಯಾದ 548ರಲ್ಲಿ 532ಕ್ಕೆ ಮತ್ತು ಮರಣ ನೋಂದಣಿಗೆ ಸಲ್ಲಿಕೆಯಾದ 3,453ರಲ್ಲಿ 3,443 ಅನುಮೋದನೆ ನೀಡಿದ್ದು, ಬಾಕಿ ಅರ್ಜಿಯನ್ನು ಕೂಡಲೆ ಅನುಮೋದಿಸಬೇಕು.

ತಾಲೂಕಾ ಪಂಚಾಯತ್ ಇ.ಓ.ಗಳು ಇದರ ಮೇಲುಸ್ತುವಾರಿ ವಹಿಸಬೇಕು. ಇನ್ನು ಗ್ರಾಮ ಪಂಚಾಯತಿ ಹಂತದಲ್ಲಿ ಕಾಲಮಿತಿಯಲ್ಲಿ ನೋಂದಣಿ ಮಾಡದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಡಿ.ಸಿ. ಅವರು, ಕೆಲಸದಲ್ಲಿ ನಿರ್ಲಕ್ಷ್ಯ ವಹಿಸುವ ಪಿ.ಡಿ.ಓ. ಗಳಿಗೆ ನೋಟಿಸ್ ಜಾರಿ ಮಾಡುವಂತೆ ಜಿಲ್ಲಾ ಸಂಖ್ಯಾಸಂಗ್ರಹಣಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

2024-25ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬೆಳೆ ಕಟಾವು ಪರಿಣಾಮಕಾರಿ ಅನುಷ್ಠಾನ ನಿಟ್ಟಿನಲ್ಲಿ ಜಿಲ್ಲೆಗೆ ಮುಂಗಾರಿನಲ್ಲಿ 3,424, ಹಿಂಗಾರಿನಲ್ಲಿ 2,676 ಹಾಗೂ ಬೇಸಿಗೆಯಲ್ಲಿ 152 ಸೇರಿ ಒಟ್ಟು 6,252 ಪ್ರಯೋಗಗಳನ್ನು ಯೋಜಿಸಿದ್ದು, ಇದರಲ್ಲಿ ಒಟ್ಟಾ-ರೆ 4,861 ಪ್ರಯೋಗಗಳನ್ನು ಕೈಗೊಳ್ಳಲಾಗಿದೆ ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಜಿಲ್ಲಾ ಸಂಖ್ಯಾಸಂಗ್ರಹಣಾಧಿಕಾರಿ ಜಯಶ್ರೀ ಕರಜಗಿ ಸಭೆಗೆ ತಿಳಿಸಿದರು. ಡಿ.ಸಿ. ಬಿ.ಫೌ-ಜಿಯಾ ತರನ್ನುಮ್ ಮಾತನಾಡಿ, ಬೆಳೆ ಕಟಾವು ಪರಿಣಾಮಕಾರಿ ಅನುಷ್ಠಾನಕ್ಕೆ ಹೋಬಳಿವಾರು ಕೃಷಿ, ಕಂದಾಯ, ತೋಟಗಾರಿಕೆ, ಆರ್.ಡಿ.ಪಿ.ಆರ್ ಸಿಬ್ಬಂದಿಗಳಿಗೆ ತರಬೇತಿ ಆಯೋಜಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎಸ್.ಎಸ್.ಮಠಪತಿ, ತೋಟಗಾರಿಕೆ ಉಪನಿರ್ದೇಶಕ ಸಂತೋಷ ಇನಾಂದಾರ, ಕೃಷಿ ಉಪನಿರ್ದೇಶಕಿ ಅನುಸೂಯಾ ಹೂಗಾರ, ತಾಲೂಕಿನ ತಹಶೀಲ್ದಾರರು, ತಾಲೂಕ ಪಂಚಾಯತ್ ಇ.ಓ.ಗಳು, ಕೃಷಿ ಮತ್ತು ತೋಟಗಾರಿ-ಕೆ ಇಲಾಖೆಯ ಸಹಾಯಕ ನಿರ್ದೇಶಕರು ಇದ್ದರು.

# ವಾರ್ಷಿಕ ಸಾಧನ ಹಾಗೂ ಮುಂದಿರುವ ಸವಾಲುಗಳ ಕುರಿತು ಸಭೆ



ಮಲ್ಲಮ್ಮ ನುಡಿ ವಾರ್ತೆ

ಗುರುಮಠಕಲ್: ಇಂದು ಗುರುಮಠಕಲ್ ತಾಲೂಕಿನ ಅಂಗವಿಕಲರ ಒಕ್ಕೂಟ ವತಿಯಿಂದ ವಾರ್ಷಿಕ ಸಾಧನ ಹಾಗೂ ಮುಂದಿರುವ ಸವಾಲುಗಳ ಕುರಿತಾದ ಸಭೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ಕರೆಯಲಾಗಿತ್ತು.

APD ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ ಜಿಲ್ಲೆಯ ಅಧಿಕಾರಿಗಳಾದ ರಮೇಶ ದುಂಡಪ್ಪ ಹಾಗೂ ಶ್ರೀ ಸಂಜೀವ್ ಕುಲಕರ್ಣಿ ಅಜೀಮ್ ಪ್ರೇಮ್ ಜಿ ಫೌಂಡೇಷನ್ ವ್ಯವಾಸ್ಥಾಪಕರು. ಂಕಆ ಸಂಸ್ಥೆಯ ಶ್ರೀ ನಾಗಪ್ಪ ಜಿ.ಅವಟಿ ನೀತಿ ಮತ್ತು ವಕಾಲತ್ತು ವಿಭಾಗ ಮುಖ್ಯಸ್ಥರು. ಕು.ಸಂಪ್ರತಾ, ಐಅಂ ಕಾರ್ಯಕ್ರಮದ ವ್ಯವಸ್ಥಾಪಕರು, ವಿರುಪಾಕ್ಷ ಮಾಲಿ ಪಾಟೀಲ ತಾಲೂಕ ಸಂಯೋಜಕರು, ಸಿದ್ದನಗೌಡ ನಜರಪೂರ ತಾಲೂಕ ಖಿಕಆ ಟಾಸ್ಕ್ ಫೋರ್ಸ್ ಆಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು, ತಾಲೂಕಿನ ವಿವಿಧ ಗ್ರಾಮ ಪಂಚಾಯತಿ VRW (Village Rehabilitation Worker) and URW (Urban Rehabilitation Worker) ಗಳಾದ ಶ್ರೀ ಕುಮಾರ, ಶಿಲ್ಪಾ, ರೇಷ್ಮಾ, ನಾಗಮಣಿ, ಸುರೇಶ, ಗಂಗಪ್ಪ ,ಹನುಮಂತ, ಮಲ್ಲಿಕಾರ್ಜುನ ಸೇರಿದಂತೆ ಆರ್.ಪಿ.ಡಿ ಟಾಸ್ಕ್ ಫೋರ್ಸ್ ಗುರುಮಠಕಲ್ ಸದಸ್ಯರು ಮತ್ತು ತಾಲೂಕಿನ ವಿವಿಧ ಕಡೆಗಳಿಂದ ಇಂದು ವಿಕಲ ಚೇತನರು ಸಭೆಯಲ್ಲಿ ಪಾಲ್ಗೊಂಡಿದ್ದರು.

ವಾರ್ಷಿಕ ಸಭೆಯ ಉದ್ದೇಶಿಸಿ ಮಾತನಾಡಿದ ಂಕಆ ತಾಲೂಕಿನ ಸಂಯೋಕರಾದ ವಿರುಪಾಕ್ಷ ಮಾಲಿಪಾಟೀಲ ಆರ್.ಪಿ.ಡಿ ಟಾಸ್ಕ್ ಫೋರ್ಸ್ ಗುರುಮಠಕಲ್ ತಾಲೂಕ ಅಂಗವಿಕಲರ ಒಕ್ಕೂಟ ಒಂದು ವರ್ಷ ಪೂರ್ಣಗೊಂಡಿದ್ದು, ಈ ಒಂದು ವರ್ಷದ ಅವಧಿಯಲ್ಲಿ ಆರ್.ಪಿ.ಡಿ ಟಾಸ್ಕ್ ಫೋರ್ಸ್ ಗುರುಮಠಕಲ್ ವತಿಯಿಂದ ಎಲ್ಲಾ 21 ಭಾಗೆಯ ವಿಕಲಚೇತನರ ಸಮ್ಮೃದ್ಧಿಗೆ ಕೈಗೊಂಡಿರುವ ಕಾರ್ಯಗಳ ಕುರಿತು ವಿವರ ನೀಡಿದರು.

ನಗರ ಹಳ್ಳಿ ಮತ್ತು ಪಂಚಾಯತಿ ಪಟ್ಟದಲ್ಲಿ ವಿಕಲಚೇತನರ ಸ್ವ-ಸಹಾಯ ಸಂಘಗಳ ಗುಂಪು ರಚನೆ ಮತ್ತು ಸದಸ್ಯರ ಬಲವರ್ಧನೆ ಕುರಿತಾಗಿ, ಗ್ರಾಮಿಣ ಅಂಗವಿಕಲರ ಪುರ್ನವಸತಿ ಕಾರ್ಯಕ್ರಮಕ್ಕೆ ಸಹಕಾರ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ವೈದ್ಯಕೀಯ, ಮತ್ತು ಸಾಂಸ್ಕೃತಿಕ ಹಾಗೂ ರಾಜಕೀಯವಾಗಿ ವಿಕಲಚೇತನರ ಪುನ:ಶ್ವೇತನದಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಕುರಿತಾಗಿ, ಹಾಗೂ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡುವುದು ,ಸರಕಾರಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ವಿಕಲಚೇತನರ ಸ್ನೇಹಿ ವಾತಾವರಣವನ್ನು ಖಾತ್ರಿಗೊಳಿಸುವ ಕುರಿತು, ವಿಕಲಚೇತನರ ಪರವಾಗಿರುವ ಕಾಯ್ದೆಗಳು ಮತ್ತು ಇನ್ನೂ ಹಲವು ವಿಕಲಚೇತನರ ಸಮಸ್ಯೆಯನ್ನು ತಳಮಟ್ಟದಿಂದ ಉನ್ನತಮಟ್ಟಕ್ಕೆ ತೆಗೆದುಕೊಂಡು ಹೋಗುವುದು, ವಿಕಲಚೇತನರ ಆರೈಕೆದಾರರ ಭತ್ಯ, ಸರ್ಕಾರಿ ಯೋಜನೆಗಳನ್ನು ಸಮಪರ್ಕವಾಗಿ ಸದ್ಬಳಕೆ ಮಾಡುವುದರ ಕುರಿತಾಗಿ ಸಭೆಯಲ್ಲಿ ವಿವರಿಸಲಾಯಿತು.


ಶೇ. 5% ಅನುದಾನದ ಬಗ್ಗೆ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಾಗೂ ಪುರಸಭೆಯ ಮುಖ್ಯಾಧಿಕಾರಿಗಳ ಜೊತೆ ಮಾಹಿತಿ ಪಡೆದು ಸಮರ್ಪಕ ರೀತಿಯಲ್ಲಿ ಅನುದಾನ ಬಳಕೆಗೆ ಮನವಿ ಸಲ್ಲಿಸಲು ತಿರ್ಮಾನ ಕೈಗೊಳ್ಳಲಾಗುವುದು ಎಂದು ಂಕಆ ತಾಲೂಕ ಸಂಯೋಜಕರಾದ ವಿರುಪಾಕ್ಷ ಮಾಲಿ ಪಾಟೀಲ ತಿಳಿಸಿದರು.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿ:9449287890

# ಜಿಲ್ಲಾ ಮಟ್ಟದ ಮುಂಗಾರು ಕಾವ್ಯೋತ್ಸವ, ಎಚ್.ಎಸ್.ವಿ ಗೆ ನುಡಿನಮನ !

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ಕೊಪ್ಪಳ ವತಿಯಿಂದ ಖ್ಯಾತ ಕವಿ ಡಾ. ಎಚ್.. ಎಸ್. ವೆಂಕಟೇಶ್ ಮೂರ್ತಿ ಅವರಿಗೆ ನುಡಿನಮನ ಹಾಗೂ ಜಿಲ್ಲಾ ಮಟ್ಟದ ಮುಂಗಾರು ಕಾವ್ಯೋತ್ಸವ ( ಚುಟುಕು, ಕವಿತೆ, ಶಾಹಿರಿ ಹಾಗೂ ಗಜಲ್ ವಾಚನಗಳ ಝಲಕ್ ) ಕಾಯ9ಕ್ರಮ ಜೂನ್ 15ರಂದು ಮುಂಜಾನೆ 10.30ಕ್ಕೆ ಕುಷ್ಟಗಿ ರಸ್ತೆಯ ಪದಕಿ ಲೇಔಟ್ ನ ಶಾಂತಿ ನಿವಾಸದಲ್ಲಿ ಜರುಗಲಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ರವಿತೇಜ ಅಬ್ಬಿಗೇರಿ ಅವರು ದಿ . ಎಚ್.ಎಸ್.ವೆಂಕಟೇಶ್ ಮೂರ್ತಿ ಅವರ ಬದುಕು ಬರಹ ,ಸಾಹಿತ್ಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಸಾಹಿತಿಗಳಾದ ಡಾ.ಮಹಾಂತೇಶ್



ಮಲ್ಲನಗೌಡರ , ಶಿ.ಕಾ. ಬಡಿಗೇರ, ಸಾವಿತ್ರಿ ಮುಜಮದಾರ್ , ಜಿ.ಎಸ್. ಗೋನಾಳ , ಫಕೀರಪ್ಪ ವಜ್ರಬಂಡಿ , ಕೊಟ್ರೇಶ್ ಜವಳಿ ಮುಂಡರಗಿ, ದೊಡ್ಡಯ್ಯ ಗುರುಸ್ಥಳ ಮಠ , ಅಮೀನಸಾಬ್ ಮುಲ್ಲಾ, ಮೊದಲಾದವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಭಾಗವಹಿಸುವ ಕವಿಗಳಾದ ಎ. ಪಿ. ಅಂಗಡಿ, ರವಿ ಹಿರೇಮನಿ.ಪುಷ್ಪ ಲತಾ ಯೋಳಭಾವಿ., ಶಿವಮ್ಮ ಗುರುಸ್ಥಲ ಮಠ. ಶಾರದಾ ಶ್ರಾವಣಸಿಂಗ್ ರಜಪೂತ. ಡಾ. ಪ್ರಕಾಶ್ ಹಳ್ಳಿಗುಡಿ, ನರಸಿಂಹ ಗುಂಜಳ್ಳಿ, ಪ್ರದೀಪ್ ಹದ್ದಣ್ಣವರ್. ಮಹಾಲಕ್ಷ್ಮಿ ಮುಂಡರಗಿ.ಪೂಜಾ ವಣಗೇರಿ. ಸೋಮಶೇಖರ್ ಕಂಚಿ. ಅನ್ನಪೂರ್ಣಾ ಮಹೇಶ್ ಮನ್ನಾಪುರ , ವೀರೇಶ ಇಂದರಗಿ.

ಬಸವರಾಜ ತಿರುಮಲಾಪುರ. ಎಚ್, ಆರ್ ವಸ್ತ್ರದ. ,ಮಹಾಂತೇಶ, ಮುದುಕನಗೌಡ್ರು. ಅಥಣಿ. ಈರಪ್ಪ ಬಿಜಲಿ. ಅಕ್ಕಮಹಾದೇವಿ ಅಂಗಡಿ, ಈರಯ್ಯ ಕುತ9ಕೋಟಿ ಮೊದಲಾದವರು ಕವಿತೆ ವಾಚಿಸಲಿದ್ದಾರೆ ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ರುದ್ರಪ್ಪ ಆರ್.ಭಂಡಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ .

# ಸ್ವಚ್ಛತೆ ಇಲ್ಲದ ನೀರಿನ ಟ್ಯಾಕ್;ಗ್ರಾಮಸ್ಥರ ಆಕ್ರೋಶ




ವೀರಯ್ಯ ವಿ ಹಿರೇಮಠ
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಜಿಲ್ಲೆಯ ಕುಕನೂರು ತಾಲೂಕಿನ ಬನ್ನಿಕೊಪ್ಪ ಗ್ರಾಮದಲ್ಲಿ ಕರ್ನಾಟಕ ಮೂಲಭೂತ ಅಭಿವೃದ್ಧಿ ನಿಯಮಿತ ಕೊಪ್ಪಳ ಇವರಿಂದ ರಾಜೀವ್ ಗಾಂಧಿ ಸಬ್ ಮಿಷನ್ ಕುಡಿಯುವ ನೀರು ಯೋಜನೆಯ ಅಡಿಯಲ್ಲಿ ಬನ್ನಿಕೊಪ್ಪ ಮತ್ತು ಇನ್ನಿತರ 38 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಯೋಜನೆಯ ಉದ್ದೇಶಕ್ಕಾಗಿ ಸುಮಾರು 20 ಲಕ್ಷ ಲೀಟರ ನಿರಿನ ಸಂಗ್ರಹದ ಸಾಮರ್ಥ್ಯವುಳ್ಳ ಭೋಗತ ನೀರಿನ ತೊಟ್ಟಿ ನಿರ್ಮಿಸಲಾಗಿದ್ದು, ವರ್ಷಾನುಗಟ್ಟಲೆ ಕಾಲಗತಿಸಿದರು ಸಹ ಈ ಟ್ಯಾಂಕನ್ನು ಶುಚಿಗೊಳಿಸದೆ ಇದ್ದು ನೀರಿನ ಟ್ಯಾಂಕನ ನೀರು ಶೇಖರಣೆ ಗೊಳ್ಳುವ ಸ್ಥಳದ ಕೆಳಭಾಗದಲ್ಲಿ ಸುಮಾರು ಒಂದು ಅಡಿಯಷ್ಟು ಕೊಳಚೆ ಮಣ್ಣು ಶೇಖರಣೆಯಾಗಿದ್ದು ನೀರಿನ ಟ್ಯಾಂಕ್ ಸಹ ಕೊಳಚೆ ನೀರಿನಿಂದ ಕೂಡಿರುತ್ತದೆ.

ಜಿಲ್ಲೆಯ 39 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಭುಗತ ನೀರಿನ ತೊಟ್ಟಿಯಲ್ಲಿ ಸುಮಾರು ಒಂದು ಅಡಿಯಷ್ಟು ಕೆಸರು ಸಂಗ್ರಹವಾಗಿದ್ದು ಇದೆ ಕೆಸರುಮಯ ನೀರನ್ನು ಗ್ರಾಮಗಳಿಗೆ ಕುಡಿಯುವ ಉದ್ದೇಶದಿಂದ ಪೂರೈಕೆ ಆಗುತ್ತಿರುವುದನ್ನು ವಿರೋಧಿಸಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ ಘಟನೆ ಶನಿವಾರ ಜರುಗಿದೆ

ಸದ್ಯ ಸುಮಾರು ಆರು ದಿನಗಳಿಂದ ಈ ನೀರಿನ ಟ್ಯಾಂಕಿಗೆ ನೀರು ಸರಬರಾಜು ಆಗದೇ ಇರುವುದರಿಂದ ಸಂಪೂರ್ಣ ನೀರು ಖಾಲಿಯಾಗಿದ್ದು ತಳಭಾಗದಲ್ಲಿ ಶೇಖರಣೆಗೊಂಡಿರುವ ಕೊಳಚೆ ಮಣ್ಣನ್ನು ಬನ್ನಿಕೊಪ್ಪ ಗ್ರಾಮಸ್ಥರು ನೋಡಿ ಆಶ್ಚರ್ಯಗೊಂಡು ನೀರಿನ ತೊಟ್ಟಿ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ಕುಡಿಯುವ ನೀರು ಮತ್ತು ನೈರ್ಮಲೀಕರಣ ಇಲಾಖೆ ಹಾಗೂ ಗುತ್ತಿಗೆದಾರನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ನೀರಿನ ತೊಟ್ಟಿಯಲ್ಲಿ ಶೇಖರಣೆಗೊಂಡಿರುವ ಕೊಳಚೆ ಮಣ್ಣನ್ನು ನೋಡಿದರೆ ಯಾವ ಪ್ರಜೆಯೂ ಸಹ ಇಲ್ಲಿನ ನೀರನ್ನು ಕುಡಿಯಲು ಮುಂದಾಗುವುದಿಲ್ಲ ಆದರೆ ಒಂದಲ್ಲ ಎರಡಲ್ಲ 39 ಹಳ್ಳಿಗಳಿಗೆ ಕುಡಿಯೋ ನೀರು ಮತ್ತು ನೈರ್ಮಲೀಕರಣ ಇಲಾಖೆಯವರು ಇದೇ ನೀರನ್ನು ಸರಬರಾಜು ಮಾಡುತ್ತಿದ್ದು ಇದರಿಂದ ಖಾಯಿಲೆಗಳು ಸಾಮಾನ್ಯವಾಗಿ ಹರಡಲಾರಂಭಿಸಿವೆ ಎಂದು ಗ್ರಾಮಸ್ಥರು ಇಲಾಖೆಯ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಗ್ರಾಮ ಪಂಚಾಯತಿ ಅಧ್ಯಕ್ಷ ನಾಗರಾಜ ವೆಂಕಟಪುರ ಮಾತನಾಡಿ. ಈ ಭಾಗದ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಕುಡಿಯಲು ಇದೆ ಟ್ಯಾಂಕಿನಲ್ಲಿ ಶೇಖರಣೆಗೊಂಡ ನೀರು ಆಧಾರವಾಗಿದ್ದು ಇಲಾಖೆಯ ಅಧಿಕಾರಿಗಳು ಈ ಟ್ಯಾಂಕನ್ನು ಶುಚಿಗೊಳಿಸುವಲ್ಲಿ ವರ್ಷಾನುಗಟ್ಟಲೆ ಹಿಂದೇಟು ಹಾಕುತ್ತಿದ್ದು ಸಾರ್ವಜನಿಕರಿಗೆ ಕೊಡಿಸುತ್ತಿರುವ ನೀರನ್ನು ತಾವು ಒಂದು ಬಾರಿ ಸೇವಿಸಲಿ ಎಂದು ಅಧಿಕಾರಿಗಳಲ್ಲಿ ದೂರವಾಣಿ ಮೂಲಕ ತಿಳಿಸಿದರಲ್ಲವೇ ಇದನ್ನು

> ❝ ನೀರಿನ ಟ್ಯಾಂಕ್‌ನಲ್ಲಿ ಸ್ವಚ್ಛತೆ ಇಲ್ಲದೇ ಜನರು ಹೇಗೆ ನೀರು ಕುಡಿಯಬೇಕೆಂದು ಗ್ರಾಮಸ್ಥರು ಆಗ್ರಹಿಸುತ್ತಿದ್ದಾರೆ. ಈ ನೀರಿನ ಟ್ಯಾಂಕ್‌ನಿಂದ ಹಳ್ಳಿಗಳಿಗೆ ನೀರು ಸರಬರಾಜುವಾಗುತ್ತವೆ. ಜನರು ಸ್ವಚ್ಛತೆ ಇಲ್ಲದೇ ನೀರು ಹೇಗೆ ಕುಡಿಯಬೇಕೆಂದು ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಟ್ಯಾಂಕ್‌ನ ಒಳಗಡೆ ಎಷ್ಟು ಮಣ್ಣು ತುಂಬಿದೆ, ಟ್ಯಾಕ್ ಹಾಗೂ ನೀರು ಸ್ವಚ್ಛತೆ ಇದೆ–ಯೋ ಇಲ್ಲವೋ ಎಂದು ನೋಡದೇ ಇರುವುದರಿಂದ ಗ್ರಾಮಸ್ಥರು ಮಲ್ಲಮ್ಮ ನುಡಿ ದಿನಪತ್ರಿಕೆಗೆ ಮಾತನಾಡುತ್ತಾ ತಮ್ಮ ಅಳಲನ್ನು ತೋಡಿಕೊಂಡರು.

ಶೀಘ್ರದಲ್ಲಿಯೇ ಶುಚಿಗೊಳಿಸಿ ಸ್ವಚ್ಛ ನೀರನ್ನು ಪೂರೈಕೆ ಮಾಡದೇ ಇದ್ದಲ್ಲಿ ಇದೆ ನೀರನ್ನು ಶಾಸಕರ ಕಾರ್ಯಾಲಯ ಹಾಗೂ ಮುಖ್ಯಮಂತ್ರಿಗಳಿಗೆ ಅಂಚೆ ಮೂಲಕ ರವಾನಿಸಲಾಗುವುದು ಎಂದು ತಿಳಿಸಿದರು.

ಗ್ರಾಮದ ಪ್ರಮುಖರಾದ ಮರಿಗೌಡರು ತಗ್ಗಿನಮನಿ ಮಾತನಾಡುತ್ತಾ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಶುದ್ಧೀಕರಿಸಿದ ಬಾಟಲ್ ನೀರನ್ನು ಕುಡಿದು ತಮ್ಮ ಇದ್ದ ಹತ್ತನಿಸಿಕೊಳ್ಳುತ್ತಾರೆ ಆದರೆ ಗ್ರಾಮೀಣ ಪ್ರದೇಶದ ಬಡ ಜನತೆಗೆ ಇದೇ ನೀರು ಆಧಾರವಾಗಿದ್ದು ಬಡವರಿಗೆ ಕೊಡಿಸುತ್ತಿರುವ ನೀರನ್ನು ಒಂದು ಬಾರಿ ಅಧಿಕಾರಿಗಳು ಸೇವಿಸಿ ನೋಡಲಿ ಸಾರ್ವಜನಿಕರ ಪರಿಸ್ಥಿತಿ ಅರ್ಥವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಾಗರಾಜ್ ವೆಂಕಟಪುರ್, ಮರಿಗೌಡ್ರು ತಗ್ಗಿನಮನಿ, ಸಿದ್ದಪ್ಪ ಮಾಳೆಕೊಪ್ಪ, ಸಿದ್ದಪ್ಪ ಪ್ಯಾಟಿ, ನಾಗರಾಜ್ ಹಳ್ಳಿಕೇರಿ, ಚನ್ನಪ್ಪ ಮೆಣಸಿನಕಾಯಿ, ರಾಜು ತಗ್ಗಿನಮನಿ, ಶರಣಪ್ಪ ಆದಾಪುರ್, ಆನಂದ್ ತಗ್ಗಿನಮನಿ, ರಮೇಶ್ ತಳವಾರ್, ರಾಜೀವ್ ಗಾಂಧಿ ಸಬ್ ಮಿಷನ್ ಗ್ರಾಮ ಪಂಚಾಯಿತಿ ಸರ್ವ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಇಂದು ಶ್ರೀಶಿವಸಂಗಮೇಶ್ವರ ಶಿವಾಚಾರ್ಯರ ಪುಣ್ಯಸ್ಮರಣೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕನೂರ ತಾಲೂಕಿನ ಬೆದವಟ್ಟಿ ಗ್ರಾಮದ ಶ್ರೀಶೈಲ ಪೀಠದ ಶ್ರೀಮಠದ ಪೂಜ್ಯರಾದ ಶ್ರೀ ಶಿವಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು 28 ಮೇ 2025 ರಂದು ಲಿಂಗೈಕ್ಯರಾಗಿದ್ದು ಅವರ ಪ್ರಥಮ ಪುಣ್ಯಸ್ಮರಣೋತ್ಸವ ಕಾರ್ಯಕ್ರಮವನ್ನು ಜೂನ್ 15 ರಂದು ರವಿವಾರ ಬೆಳಿಗ್ಗೆ ಕುಕನೂರು ಪಟ್ಟಣದ ಮುಂಡರಗಿ ಶ್ರೀ ಅನ್ನದಾನೇಶ್ವರ ಶಾಖಾಮಠದಲ್ಲಿ ಕೊಪ್ಪಳ ಜಿಲ್ಲೆಯ ಮಠಾಧೀಶರ ಒಕ್ಕೂಟದ ವತಿಯಿಂದ ಆಯೋಜಿಸಲಾಗಿದೆ ಎಂದು ಹೇಳಿದರು.

ಪಟ್ಟಣದ ಮುಂಡರಗಿ ಶ್ರೀ ಅನ್ನದಾನೇಶ್ವರ ಶಾಖ ಮಠದಲ್ಲಿ ವರದಿಗಾರರೊಂದಿಗೆ ವೀರಯ್ಯ ತೋಟದಾರ್ಯ ಮಠ ಮಾತನಾಡುತ್ತಾ ಶ್ರೀಗಳು ಈ ಭಾಗದ ನಡೆದಾಡುವ



ದೇವರಾಗಿದ್ದು, ಅನೇಕ ಕಡೆಗಳಲ್ಲಿ ಧರ್ಮ ಜಾಗೃತಿ ಕಾರ್ಯವನ್ನು ಮಾಡಿದ ಮಹಾನ್ ಪುರುಷರಾಗಿದ್ದಾರೆ ಭಕ್ತರನ್ನು ಆಧ್ಯಾತ್ಮದ ಕಡೆಗೆ ಕರೆದೊಯ್ಯುತ್ತಿದ್ದ ಅವರ ಮಾರ್ಗಗಳು ಅನನ್ಯವಾಗಿದ್ದು ಎಲ್ಲಾ ವರ್ಗದ ಭಕ್ತರನ್ನು ಸಮಾನವಾಗಿ ಕಾಣುತ್ತಾ ಧಾರ್ಮಿಕ ಕ್ಷೇತ್ರ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸುತ್ತಿದ್ದರು . ಶ್ರೀಗಳ ಶಿವ ಗಣರಾಧನೆಯನ್ನು ಜೂನ್ ಒಂದರಂದು ಶ್ರೀಶೈಲ ಜಗದ್ಗುರುಗಳ ಉಪಸ್ಥಿತಿಯಲ್ಲಿ ನೆರವೇರಿಸಿದ್ದು ಈಗ ಶ್ರೀ ಶಿವಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಪ್ರಥಮ ಪುಣ್ಯ ಸ್ಮರಣೋತ್ಸವವನ್ನು ಜೂನ್ 15ರಂದು ಕುಕನೂರು ಪಟ್ಟಣದ ಶ್ರೀಮಠದಲ್ಲಿ ಆಯೋಜಿಸಲಾಗಿದ್ದು ಅಂ–ದು ಬೆಳಿಗ್ಗೆ ಎಂಟು ಗಂಟೆಗೆ ಪ್ರಮುಖ ಬೀದಿಗಳಲ್ಲಿ ಪೂಜ್ಯರ ಭಾವಚಿತ್ರ ಮೆರವಣಿಗೆ ನಂತರ ಧರ್ಮಸಭೆ ಹಾಗೂ ಅನ್ನ ಸಂತರ್ಪಣೆ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿದ್ದು ಭಕ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪುನೀತರಾಗಬೇಕು ಎಂದು ಮಠಾಧೀಶರ ಒಕ್ಕೂಟದಿಂದ ಅಪ್ಪಣೆ ಮಾಡಲಾಗಿದ್ದು ಪ್ರತಿಯೊಬ್ಬ ಭಕ್ತ ವರ್ಗದವರು ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

# ತುಂಬಿ ಹರಿದ ಬೊಮ್ಮಘಟ್ಟ ಕೆರೆ

ಮಲ್ಲಮ್ಮ ನುಡಿ ವಾರ್ತೆ
ಸಂಡೂರು :ಜೂ:14

ಸಂಡೂರು ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ 2 ದಿನ ಅಂದರೆ, ತಡ ರಾತ್ರಿ ಮತ್ತು ಬೆಳಿಗ್ಗೆ ಉತ್ತಮ ಮಳೆ ಧಾರಾಕಾರವಾಗಿ ಆದ ಪ್ರಯುಕ್ತ ಧರ್ಮಾಪುರ ಗ್ರಾಮದ ಬಳಿಯ ನಾರಿಹಳ್ಳವು ತುಂಬಿ ಹರಿಯುತ್ತಿದ್ದು, ಬೊಮ್ಮಘಟ್ಟದ ಕೆರೆ ಕೋಡಿ ಬಿದ್ದು, ನೀರು ಹೊಲಗಳಲ್ಲಿ ಸಂಗ್ರಹಗೊಂಡಿದ್ದು, ರೈತರು ಸಂತ್ರಸ್ತಗೊಂಡಿದ್ದಾರೆ. ಸಂಡೂರು ತೋರಣಗಲ್ಲು, ಚೋರನೂರು ಹೋಬಳಿಯ ಬಹುತೇಕ ಎಲ್ಲಾ ಹಳ್ಳಿಗಳಲ್ಲಿ ಭಾರಿ ಪ್ರಮಾಣದಲ್ಲಿ ಮಳೆ ಸುರಿದ ಪರಿಣಾಮವಾಗಿ ಕೆಲ ಗ್ರಾಮಗಳ ಪ್ರದೇಶಗಳು ಮಳೆಯ ನೀರಿನಿಂದ ತುಂಬಿ ಹೊಗಿವೆ. ಬೊಮ್ಮಘಟ್ಟ ಗ್ರಾಮದ ಹಿರೆಕೆರೆ ಹುಲಿಕುಂಟೆ ಕರೆ ಗ್ರಾಮದ ಕೆರೆಗಳು ನಿರಂತರ ಮಳೆಯ ಪ್ರಭಾವಕ್ಕೆ ಕೋಡಿ ಬಿದ್ದ ಪರಿಣಾಮವಾಗಿ ರೈತರು ಸಂತಸಗೊಂಡು ನೆಮ್ಮದಿಯ ನಿಟ್ಟಸಿರು ಬಿಟ್ಟಿದ್ದಾರೆ.



ಸಂಡೂರು ತಾಲೂಕಿನಲ್ಲಿ 4 ಮಳೆ ಮಾಪನ ಕೇಂದ್ರಗಳಿದ್ದು, ಸಂಡೂರು ಹೋಬಳಿಯಲ್ಲಿ 34.2 ಚೋರನೂರು 21.2 ಕುರೇಕುಪ್ಪ 2.0 ವಿಠಲಾಪುರ 1.2 ಮಿಲಿಮೀಟರ್ ಮಳೆಯ ಮಾಪನ ಕೇಂದ್ರದಲ್ಲಿ ಮಳೆಯು ದಾಖಲಾಗಿದೆ. ರೈತರ ಜಮೀನುಗಳಲ್ಲಿ ಮಳೆಯ ನೀರು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಗೊಂಡಿದ್ದು, ಬಿತ್ತನೆ ಕಾರ್ಯಕ್ಕೆ ಸ್ವಲ್ಪ ಹಿನ್ನಡೆ–ಯಾಗಿದೆ. ಬೊಮ್ಮಘಟ್ಟ ಗ್ರಾಮದಲ್ಲಿ ಮಳೆ ನಿರಂತರ ಸುರಿದಿದ್ದರಿಂದ ಗ್ರಾಮದ 3ನೇ ವಾರ್ಡನ ವಿದ್ಯುತ್ ಪರಿವರ್ತವು ಸುಟ್ಟು ಕರಕಲಾಗಿದ್ದು, ಯಾವುದೇ ಅವಘಡ ಸಂಭವಿಸಿಲ್ಲ. ನೂತನ ವಿದ್ಯುತ್ ಪರಿವರ್ತಕ ಅಳವಡಿಸಲು ಗ್ರಾಮದ ನಿವಾಸಿಗಳು ಈ ಸಂದರ್ಭದಲ್ಲಿ ಒತ್ತಾಯಿಸಿದ್ದು,

ನಾರಿಹಳ್ಳ ಜಲಾಶಯ: ನಾರಿಹಳ್ಳ ಜಲಾಶಯವು ಸಂಪೂರ್ಣವಾಗಿ ಭರ್ತಿಯಾಗಿದ್ದರಿಂದ ಜಲಾಶಯದ ಎರೆಡು ಗೇಟ್‌ಗಳ ಮೂಲಕ 2 ಅಡಿಯ ನೀರನ್ನು ಬೆಳಗಿನ ವರೆಗೂ ನಾರಿಹಳ್ಳಕ್ಕೆ ನಿರಂತರವಾಗಿ ನೀರನ್ನು ಹರಿ ಬಿಡಲಾಗುತ್ತದೆ. ಎಂದು ಜಲಾಶಯದ ಅಧಿಕಾರಿ ಜನಾರ್ಧನರೆಡ್ಡಿಯವರು ತಿಳಿಸಿದರು. ತರಾನಗರ ಗ್ರಾಮದ ಬಳಿಯ ನಾರಿಹಳ್ಳಿ ಜಲಾಶವು ಮಳೆಯ ಭಾರಿ ಪ್ರಮಾಣದಿಂದ 2ನೇ ಬಾರಿಗೆ ಭರ್ತಿಯಾಗಿದ್ದರಿಂದ ಜನರು ರೈತರು ಸಾರ್ವಜನಿಕರು ಸಂತಸಗೊಂಡಿದ್ದಾರೆ.

# ದೇವಸ್ಥಾನ ನಿರ್ಮಾಣಕ್ಕೆ ಸದ್ಭಕ್ತರು ನೆರವು ನೀಡಲು ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಜಿಲ್ಲೆಯ ಸಿರುಗುಪ್ಪ ತಾಲೂಕಿನ ದರೂರು ಗ್ರಾಮದಲ್ಲಿರುವ ಶ್ರೀ ವೀರಭದ್ರಸ್ವಾಮಿ ಪುಣ್ಯಕ್ಷೇತ್ರದ ಕಾಮಗಾರಿ ಪ್ರಗತಿಯಲ್ಲಿದ್ದು ಸದ್ಭಕ್ತರು ದೇವಸ್ಥಾನ ಅಭಿವೃದ್ಧಿಗೆ ತ್ರಿಕರಣ ಪೂರ್ವಕ ನೆರವು ನೀಡುವಂತೆ ಕೋರಲಾಗಿದೆ. ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಪದಾಧಿಕಾರಿಗಳು ಈ ಕುರಿತು ಸದ್ಭಕ್ತರಲ್ಲಿ ಮನವಿ ಮಾಡಿದ್ದು, ದರೂರು ಶ್ರೀ ವೀರಭದ್ರಸ್ವಾಮಿ ಪುಣ್ಯಕ್ಷೇತ್ರದ ವ್ಯವಸ್ಥಾಪನ ಸಮಿತಿಯು ಭಕ್ತರ ನೆರವಿನಿಂದ ಸುಮಾರು 06 ಕೋಟಿ ರೂಪಾಯಿಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದೀಗ ನಿರ್ಮಾಣವಾಗುತ್ತಿರುವ 81 ಅಡಿಗಳ ಎತ್ತರದ ರಾಜಗೋಪುರ ಮತ್ತು 47 ಅಡಿಗಳ ಎತ್ತರದ ಈಶಾನ್ಯ ಗೋಪುರ ಹಾಗೂ 13 ಅಡಿಗಳ ಉದ್ದ, 90 ಅಡಿಗಳ ಅಗಲದ 31 ಶಿಲಾಮಂಟಪಗಳ ನಿರ್ಮಾಣ ಕಾರ್ಯವು ಎರಡು ವರ್ಷಗಳಿಂದ ನಡೆದಿದೆ.

ಹಿಂದಿನ ವರ್ಷ ಸೆಪ್ಟೆಂಬರ್



ತಿಂಗಳಿಗೆ ಬೇಸ್‌ಮಟ್ಟದವರೆಗೆ ಸುಮಾರು ರೂ.1.80 ಕೋಟಿಗಳ ಕಾಮಗಾರಿಯು ಪೂರ್ಣಗೊಂಡಿದೆ. 2024ರ ಸೆ.1ರಿಂದ ಹಣಕಾಸಿನ ತೊಂದರೆಯಿಂದ ಕಾಮಗಾರಿಯು ನಿಲುಗಡೆಯಾಗಿತ್ತು.

ಇತ್ತೀಚಿಗೆ ಭಕ್ತರು ನೀಡಿರುವ ಕಾಣಿಕೆಯಿಂದ ಸುಮಾರು ರೂ.32 ಲಕ್ಷ ರೂಪಾಯಿಗಳ ಮೌಲ್ಯದ ಶಿಲಾಬಂಡೆಗಳನ್ನು ಚಿಕ್ಕಬಳ್ಳಾಪುರದಿಂದ ಎಂಟು ಲಾರಿಗಳಲ್ಲಿ ತರಿಸಲಾಗಿದೆ. ಈ ದಿನ ಪುಣ್ಯಕ್ಷೇತ್ರ ನಿರ್ಮಾಣದ ಶಿಲ್ಪಿಗಳು ಮುರಡೇಶ್ವರದಿಂದ ಆಗಮಿಸಿದ್ದು, ಉದಯ ಪ್ರಧಾನ ಅರ್ಚಕರಿಂದ ಪೂಜೆ ಸಲ್ಲಿಸಿ ಕಾಮಗಾರಿಯನ್ನು ಪುನರಾರಂಭಿಸಲಾಗಿದೆ.

ಪುಣ್ಯಕ್ಷೇತ್ರಕ್ಕೆ ಹಣಕಾಸಿನ ನೆರವು ನೀಡುತ್ತೇವೆಂದು ಭರವಸೆಯನ್ನು ನೀಡಿರುವ ಬಳ್ಳಾರಿ, ವಿಜಯನಗರ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಭಕ್ತಾದಿಗಳು ಬೇಗನೇ ಪುಣ್ಯಕ್ಷೇತ್ರಕ್ಕೆ ಹಣಕಾಸಿನ ನೆರವನ್ನು ನೀಡಬೇಕು. ಪುಣ್ಯಕ್ಷೇತ್ರದ ಕಾಮಗಾರಿಗೆ ದಾನಿಗಳು ಸಹ ಹಣಕಾಸಿನ ನೆರವು ನೀಡಬೇಕೆಂದು ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಡಾ.ಪುರುಷೋತ್ತಮ ಗೌಡ, ಸದಸ್ಯರಾದ ಪೂಜಾರಿ ವೀರೇಶಯ್ಯಸ್ವಾಮಿ, ಮೇಟಿ ಪಂಪನಗೌಡ, ಬಡಿಗೇರಿ ಪಂಪಾಪತಿ ನಾಯಕ, ತಳವಾರ ದುರ್ಗಣ್ಣ ನಾಯಕ ಕುರುಬರ ಪೂಜಾರಿ ಮಲ್ಲಯ್ಯ ಕೆಂಪಣ್ಣನವರ ವೀರೇಶ ನಾಯಕ ಲೆಂಕೇರು ಕಲ್ಲಪ್ಪನಾಯಕ ಕೋರಿದ್ದಾರೆ.

# ಮೈಸೂರಿನಲ್ಲಿ ಬಾಲ್ಯ ವಿವಾಹ ತಡೆಗೆ ಅಲರ್ಟ್

ಮಲ್ಲಮ್ಮ ನುಡಿ ವಾರ್ತೆ

ಮೈಸೂರು: ಜಿಲ್ಲೆಯಲ್ಲಿ ಬಾಲ್ಯ ವಿವಾಹ ತಡೆಗೆ ಜಿಲ್ಲಾಡಳಿತವು ಕಠಿಣ ನಿಯಮಾವಳಿಗಳನ್ನು ರೂಪಿಸಿದ್ದು, ಮದುವೆಗೂ ಮುನ್ನ ಎಲ್ಲಾ ಕಲ್ಯಾಣ ಮಂಟಪ, ಛತ್ರ, ಸಮುದಾಯ ಭವನಗಳಲ್ಲಿ ವಧು–ವರರ ವಯಸ್ಸಿನ ದೃಢೀಕರಣ ದಾಖಲೆ ನೀಡುವುದನ್ನು ಕಡ್ಡಾಯಗೊಳಿಸಿದೆ.

64 ವರ್ಷಗಳ ಹಿಂದೆ ಪ್ರೀತಿಸಿ ಓಡಿ ಹೋಗಿ ಮದುವೆಯಾಗಿದ್ದ 80ನೇ ವಯಸ್ಸಿನಲ್ಲಿ ಅದ್ಧೂರಿ ಮದುವೆ!

Photos:'ಎರಡು ಹೃದಯಗಳು, ಒಂದು ಆತ್ಮ, ಒಂದು ಸುಂದರ ಆರಂಭ'; ವೈಷ್ಣವಿ ಗೌಡ – ಅನುಕೂಲ್ ಮಿಶ್ರಾ ಕಲ್ಯಾಣ ಸಂಭ್ರಮ

ಎರಡೂವರೆ ವರ್ಷಗಳ ಬಳಿಕ ಮತ್ತೆ ಕಿರುತೆರೆಯಲ್ಲಿ ಮಿಂಚಲು 'ಸೀತಾ ವಲ್ಲಭ' ಖ್ಯಾತಿಯ ಜಗನ್ ರೆಡಿ; ಹೊಸ ಸೀರಿಯಲ್ ಯಾವುದು?

**'ರಾಘಣ್ಣನಂಥ ಅಪ್ಪ ಇಲ್ಲ..';** ತಂದೆಯ ಸ್ಫೂರ್ತಿದಾಯಕ ಕಥೆ ಹೇಳಿದ ಯುವ ರಾಜ್‌ಕುಮಾರ್

ಅಲ್ಲದೆ ಎಲ್ಲ ಸರಕಾರಿ, ಸರಕಾರೇತರ ಶಾಲಾ ಕಾಲೇಜು, ವಸತಿಯುತ ಶಾಲೆಗಳು ಹಾಗೂ ಹಾಸ್ಟೆಲ್‌ಗಳಲ್ಲಿ ಬಾಲ್ಯವಿವಾಹ ನಿಷೇಧದ ಬಗ್ಗೆ ಅರಿವು ಮೂಡಿಸಲು ಮುಂದಾಗಿದೆ.

ಸಾಮಾಜಿಕ ಪಿಡುಗಾದ ಬಾಲ್ಯ ವಿವಾಹ ತಡೆಗೆ ರಾಜ್ಯ ಸರಕಾರ ಹತ್ತಾರು ಕಾರ್ಯಕ್ರಮಗಳನ್ನು ರೂಪಿಸುವ ಜತೆಗೆ ಅರಿವು ಕಾರ್ಯಕ್ರಮಗಳನ್ನು ನಡೆಸುತ್ತಾ ಬರುತ್ತಿದೆ. ಹಾಗೆಯೇ ಬಾಲ್ಯ ವಿವಾಹ ನಡೆಯದಂತೆ ಅಪ್ರಾಪ್ತರಿಗೆ ವಿವಾಹ ಮಾಡಿದವರ ವಿರುದ್ಧ ಕಠಿಣ ಕಾನೂನು ಜಾರಿಗೆ ತಂದಿದೆ. ಇಷ್ಟಾದರೂ 2024–2025ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ 284 ಬಾಲ್ಯ ವಿವಾಹ ಪ್ರಕರಣ ಬೆಳಕಿಗೆ ಬಂದಿದೆ.

ವಯಸ್ಸಿನ ದೃಢೀಕರಣ ಕಡ್ಡಾಯ: ಬಾಲ್ಯ ವಿವಾಹ ನಿಷೇಧಿಸಲು ಎಲ್ಲ ಕಲ್ಯಾಣ ಮಂಟಪ, ಸಮುದಾಯ ಭವನ, ಪಾರ್ಟಿ ಹಾಲ್, ಛತ್ರ, ಶಾಮಿಯಾನ ಅಂಗಡಿಯವರು, ದೇವಸ್ಥಾನ, ಮಸೀದಿ, ಚರ್ಚ್‌ಗಳಲ್ಲಿ ಮದುವೆಗಾಗಿ ಕಾಯ್ದಿರಿಸುವ ಮೊದಲು, ಛಾಯಾಚಿತ್ರ ತೆಗೆಯುವವರು ಆರ್ಡರ್ ತೆಗೆದುಕೊಳ್ಳುವ ಮುನ್ನ ಹಾಗೂ ಪ್ರಿಂಟಿಂಗ್ ಪ್ರೆಸ್‌ನವರು ಲಗ್ನಪತ್ರಿಕೆ ಮುದ್ರಿಸುವ ಮುಂಚೆ ವಧು–ವರರ ವಯಸ್ಸಿನ ದೃಢೀಕರಣ ದಾಖಲೆಯನ್ನು ಕಡ್ಡಾಯವಾಗಿ ಪಡೆಯಬೇಕೆಂದು ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ತಪ್ಪಿದರೆ ಜೈಲು ಶಿಕ್ಷೆ: ಈ ನಿಯಮಾವಳಿಯನ್ನು ಉಲ್ಲಂಘಿಸಿದರೆ ಬಾಲ್ಯ ವಿವಾಹ ನಿಷೇಧ ಕಾಯಿದೆ 2006 ಕಲಂ 11 ರಡಿಯಲ್ಲಿ ಬಾಲ್ಯ ವಿವಾಹ ಬೆಂಬಲಿಸಿದ್ದಕ್ಕೆ 2 ವರ್ಷದವರೆಗೂ ಜೈಲು ಶಿಕ್ಷೆ ಮತ್ತು 1 ಲಕ್ಷ ರೂ. ದಂಡ ಅಥವಾ ಎರಡೂ ರೀತಿಯ ಶಿಕ್ಷೆ ವಿಧಿಸಲಾಗುವುದು. ಜತೆಗೆ ಪರವಾನಗಿ ರದ್ದುಗೊಳಿಸಲಾಗುವುದು ಎಂದು ಆದೇಶದಲ್ಲಿ ಎಚ್ಚರಿಸಲಾಗಿದೆ.

ಬಾಲಕಿಯರಿಂದಲೇ ದೂರು: ಜಿಲ್ಲೆಯ ಎಚ್.ಡಿ.ಕೋಟೆ, ಪಿರಿಯಾಪಟ್ಟಣ, ಕೆ.ಆರ್.ನಗರಗಳಲ್ಲಿ ಹೆಚ್ಚಿನ ಬಾಲ್ಯ ವಿವಾಹ ಪ್ರಕರಣ ಕಂಡು ಬಂದಿದೆ. ಜಿಲ್ಲೆಯಲ್ಲಿ ದಾಖಲಾಗಿರುವ 284 ಪ್ರಕರಣಗಳ ಪೈಕಿ ಬಾಲ್ಯ ವಿವಾಹಕ್ಕೆ ಒಳಗಾಗುತ್ತಿದ್ದ 18 ಮಂದಿ ಅಪ್ರಾಪ್ತೆಯರೇ ನೇರವಾಗಿ ಮಕ್ಕಳ ಸಹಾಯವಾಣಿಗೆ ಕರೆ ಮಾಡಿ, ವಿಷಯ ತಿಳಿಸಿ ಮದುವೆ ತಡೆಯುವಂತೆ ಹೇಳಿರುವುದು ವಿಶೇಷ.

ವಿದ್ಯಾಕೇಂದ್ರಗಳಲ್ಲಿ ಜಾಗೃತಿ "ಮೈಸೂರು ಜಿಲ್ಲೆಯಲ್ಲಿರುವ ಎಲ್ಲಾ ಸರಕಾರಿ, ಸರಕಾರೇತರ ಶಾಲಾ–ಕಾಲೇಜುಗಳು, ವಸತಿಯುತ ಶಾಲೆಗಳು ಹಾಗೂ ಹಾಸ್ಟೆಲ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಬಾಲ್ಯ ವಿವಾಹ ನಿಷೇಧ ಕಾಯಿದೆ ಮತ್ತು ಪೋಕ್ಸೊ ಕಾಯಿದೆಯ ಬಗ್ಗೆ ಹೆಚ್ಚಿನ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಸಂಬಂಧಪಟ್ಟ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು, ತಾಲೂಕು ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಸಹಾಯವಾಣಿ 1098/112 ಘಟಕದ ಸಹಯೋಗದಲ್ಲಿ ಜಾಗೃತಿ ಕಾರ್ಯಕ್ರಮ ನಡೆಯಬೇಕು," ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ತಿಳಿಸಿದ್ದಾರೆ.

## ಹುಬ್ಬಳ್ಳಿ: ಮೃತ ಹುಸೇನಸಾಬ್ ಕಳಸ ಕುಟುಂಬಕ್ಕೆ 5 ಲಕ್ಷ ರೂ ಪರಿಹಾರ ವಿತರಿಸಿದ ಸಂತೋಷ್ ಲಾಡ್



ಮಲ್ಲಮ್ಮ ನುಡಿ ವಾರ್ತೆ

ಹುಬ್ಬಳ್ಳಿ: ಇತ್ತೀಚಿಗೆ ಸುರಿದ ಭಾರಿ ಮಳೆಯಿಂದ ನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿದ್ದ ಹುಸೇನಸಾಬ್ ಕಳಸ ಕುಟುಂಬದ ಸದಸ್ಯರಿಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಶನಿವಾರ 5 ಲಕ್ಷ ರೂ. ಪರಿಹಾರದ ಆದೇಶವನ್ನು ಹಸ್ತಾಂತರಿಸಿದರು.

ಹುಬ್ಬಳ್ಳಿ ಹೊರವಲಯದ ಮಾವನೂರು ರಸ್ತೆಯ ಬಳಿ ಬುಧವಾರ ರಾತ್ರಿ ಹುಸೇನಸಾಬ್ ಅವರು ಮಳೆನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿದ್ದರು.

ಇಂದು ಹುಸೇನಸಾಬ್ ಅವರ ಮನೆಗೆ ತೆರಳಿ, ಅವರ ಕುಟುಂಬಕ್ಕೆ ಸಾಂತ್ವನ ಹೇಳಿ, ಪರಿಹಾರದ ಆದೇಶದ ಪ್ರತಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂತೋಷ್ ಲಾಡ್, ಜಿಲ್ಲೆಯಲ್ಲಿ ಭಾರಿ ಮಳೆಯಿಂದಾಗಿ ಇಲ್ಲಿಯವರೆಗೆ ಒಟ್ಟು ಇಬ್ಬರು ಸಾವನ್ನಪ್ಪಿದ್ದಾರೆ ಮತ್ತು ಬೆಳೆ ನಷ್ಟದ ಬಗ್ಗೆ ಸರ್ವೇ ಮಾಡಬೇಕಾಗಿದೆ ಎಂದು ತಿಳಿಸಿದರು. ಅಲ್ಲದೆ ಸರ್ವೇ ಮುಗಿದ ನಂತರ, ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ.

ಜೂನ್ 12 ರಂದು, ಹುಬ್ಬಳ್ಳಿಯ ಹೊರವಲಯದ ಮಾವನೂರು ರಸ್ತೆಯ ಬಳಿಯ ತಗ್ಗು ಪ್ರದೇಶದಲ್ಲಿ ಬುಧವಾರ ರಾತ್ರಿ ಸುರಿದ ಭಾರೀ ಮಳೆ ಮತ್ತು ಬಲವಾದ ಗಾಳಿಯ ನಂತರ, ಹುಸೇನಸಾಬ್ ನೀರಿನಲ್ಲಿ ಕೊಚ್ಚಿಹೋಗಿ ಸಾವನ್ನಪ್ಪಿದ್ದಾರೆ.

**5 ಲಕ್ಷ ರೂ. ಪರಿಹಾರ ವಿತರಿಸಿದ ಸಂತೋಷ್ ಲಾಡ್**

ಹುಬ್ಬಳ್ಳಿ–ಧಾರವಾಡದಲ್ಲಿ ವ್ಯಾಪಕ ಮಳೆ: ನೀರಲ್ಲಿ ಓರ್ವ ಕೊಚ್ಚಿ ಹೋಗಿರುವ ಶಂಕೆ, ಶಾಲಾ–ಕಾಲೇಜುಗಳಿಗೆ ರಜೆ

ಇನ್ನು ಹೆಚ್ಚಿನ ಮಳೆಯಾದಗ ಬೆಣ್ಣೆಹಳ್ಳದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗುತ್ತದೆ. ಪ್ರತಿ ಬಾರಿ ಕೂಡಾ ಸಾವಿರಾರು ಎಕರೆಯಲ್ಲಿ ಬೆಳದಿದ್ದ ಬೆಳೆ ಹಾಳಾಗಿ ಹೋಗುತ್ತದೆ. ಹೀಗಾಗಿ ಬೆಣ್ಣೆಹಳ್ಳದಲ್ಲಿ ಉಂಟಾಗುತ್ತಿರುವ ಪ್ರವಾಹಕ್ಕೆ ಶಾಶ್ವತ ಪರಿಹಾರ ಕಲ್ಪಿಸುವುದರ ಜೊತೆಗೆ, ಬೆಳೆಹಾನಿಯಾದ ರೈತರಿಗೆ ಪರಿಹಾರ ಕೊಡಿಸುವ ಕೆಲಸ ಕೂಡಾ ಆಗಬೇಕಿದೆ ಎಂದು ಸಚಿವರು ಹೇಳಿದ್ದಾರೆ.

ಘಟನೆಯ ಕುರಿತು ಎಎನ್‌ಐ ಜೊತೆ ಮಾತನಾಡಿದ ಹುಬ್ಬಳ್ಳಿ ತಾಲೂಕು ತಹಶೀಲ್ದಾರ್ ಕಲ್ಲನಗೌಡ ಪಾಟೀಲ್ , "ಆ ವ್ಯಕ್ತಿಯನ್ನು ಪತ್ತೆಹಚ್ಚಲು ಅಗ್ನಿಶಾಮಕ ದಳದವರು ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಕಳೆದ 10 ಗಂಟೆಗಳಿಂದ ಕಾರ್ಯಾಚರಣೆ ಮುಂದುವರೆದಿದೆ. ನಿನ್ನೆ ರಾತ್ರಿ ಸುಮಾರು 150 ಮಿ.ಮೀ ಮಳೆಯಾಗಿದೆ. ಇಂದು ಹುಬ್ಬಳ್ಳಿಯಲ್ಲಿ ಶಾಲೆಗಳನ್ನು ಬಂದ್ ಮಾಡಲಾಗಿದೆ. ಬುಧವಾರ ಭಾರೀ ಮಳೆಯ ನಂತರ ತನ್ನ ಜಮೀನಿಗೆ ತೆರಳಿದ್ದ ಕಾಣೆಯಾದ ಹುಸೇನಸಾಬ್ ಅವರ ಚಪ್ಪಲಿಗಳು ಪತ್ತೆಯಾಗಿವೆ" ಎಂದು ಹೇಳಿದ್ದಾರೆ.

ಜೂ.16ಕ್ಕೆ ಲಿಂಗೈಕ್ಯ ಶ್ರೀ ಚನ್ನಮಲ್ಲೇಶ್ವರ ತ್ಯಾಗಿಗಳವರದ್ವಿತೀಯ ಪುಣ್ಯಾರಾಧನೆ

# ಉಚಿತ ಆರೋಗ್ಯ ತಪಾಸಣೆ ಹಾಗೂ ಹಸಿರು ಹಬ್ಬ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ತಾಲ್ಲೂಕಿನ ಇಟಗಾ ಗ್ರಾಮದ ಶಿವಸಿದ್ಧ ಯೋಗಾಶ್ರಮ ಶಾಖಾ ಮುಕ್ತಿ ಮಠದಲ್ಲಿ ಪೀಠಾಧಿಪತಿಗಳಾದ ಧರ್ಮಶ್ರೀ ತಪೋರತ್ನ ಷ. ಬ್ರ. ಶ್ರೀ ಶಿವಸಿದ್ದ ಸೋಮೇಶ್ವರ ಶಿವಾಚಾರ್ಯರು, ಹಾಗೂ ಹಿರೇಮುನವಳ್ಳಿಯ ಷ. ಬ್ರ. ಶ್ರೀ ಶಂಭುಲಿಂಗ ಶಿವಾಚಾರ್ಯರ ಇವರ ದಿವ್ಯ ನೇತೃತ್ವದಲ್ಲಿ ಜೂನ್ 16ರಂದು ಬೆಳಿಗ್ಗೆ 10ರಿಂದ 4ರ ವರೆಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಹಸಿರು ಹಬ್ಬ ಕಾರ್ಯಕ್ರಮ ಜರುಗಲಿದೆ. ಮದ್ಯಾಹ್ನ 2 ಗಂಟೆಗೆ ಲಿಂಗೈಕ್ಯ, ಪೂಜ್ಯ ದಾಸೋಹ ಮೂರ್ತಿ ಶ್ರೀ ಚನ್ನಮಲ್ಲೇಶ್ವರ



ತ್ಯಾಗಿಗಳವರದ್ವಿತೀಯ ಪುಣ್ಯಾರಾಧನೆ ಸಮಾರಂಭ ಜರುಗಲಿದೆ. ಅಂದೆ ಭದ್ರೇಶ್ವರ ಜತೆಗೆ ವೀಣಾ ಇವರ ವಿವಾಹ ಸಮಾರಂಭರವು ನರವೇರಲಿದೆ ಎಂದು ಇಟಗಾ ಶಿವಸಿದ್ಧ ಯೋಗಾಶ್ರಮ ಶಾಖಾ ಮುಕ್ತಿಮಠದ ಸಮಿತಿ ಪ್ರಟಕಣೆಯಲ್ಲಿ ತಿಳಿಸಿದೆ. ಅಂದು ನಡೆಯುವ ಸಮಾರಂಭದಲ್ಲಿ ನಾಡಿನ ವಿವಿಧ ಪರಮ ಪೂಜ್ಯರು ಹಾಗೂ ಹರ, ಗುರು, ಚರ ಮೂರ್ತಿಗಳು ಮತ್ತು ಅನೇಕ ರಾಜಕೀಯ ಧುರೀಣ–ರು, ಗಣ್ಯ ಮಾನ್ಯರು, ಸಂಗೀತ ಕಲಾವಿದರು, ಆಗಮಿಸಲಿದ್ದು, ಪೂಜ್ಯರ ಸಕಲ ಸದ್ಭಕ್ತರು ಆಗಮಿಸಿ ಈ ಕಾರ್ಯಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಇಟಗಾ ಸಂಸ್ಥಾನ ಮಠದ ಸಮಿತಿ ಪ್ರಕಟಣೆಯಲ್ಲಿ ಕೋರಿದೆ.

ವಿಶೇಷ ಮನವಿ: ಲಿಂಗೈಕ್ಯ ದಾಸೋಹ ಮೂರ್ತಿ ಶ್ರೀ ಚನ್ನಮಲ್ಲೇಶ್ವರ ತ್ಯಾಗಿಗಳವರ ಸ್ಮರಣಾರ್ಥವಾಗಿ ಶ್ರೀಮಠದಲ್ಲಿ ನಿತ್ಯ ನಡೆಯುವ ಅನ್ನದಾಸೋಹ ಸೇವೆಯ ಅಜೀವ ಸದಸ್ಯತ್ವವನ್ನು ನೊಂದಾಯಿಸಿಕೊಳ್ಳಲು ಸಮಿತಿ ವಿನಂತಿಸಿದೆ. ಹೆಚ್ಚಿನ ಮಾಹಿತಿಗೆ ಮೋಬೈಲ್ ಸಂಖೆ,9008551008, 9350294686,9972597542, ಸಂಪರ್ಕಿಸುವಂತೆ ಕೋರಲಾಗಿದೆ.

# ರಕ್ತದಾನ ಮಾಡೋಣ ಇನ್ನೊಬ್ಬರಿಗೆ ಜೀವದಾನ ನೀಡೋಣ

ಪ್ರಪಂಚದ ಅತಿ ದೊಡ್ಡ ಮಾನವೀಯ ಸೇವೆ ಎಂದರೆ ಬಹು ಪಾಲು ಜನರು ರಕ್ತದಾನ ಎಂದು ಹೇಳುತ್ತಾರೆ ಪ್ರತಿ ವರ್ಷ ಜೂನ್ 14 ರಂದು ಆಚರಿಸಲಿರುವ ವಿಶ್ವ ರಕ್ತದಾನ ದಿನ ಒಂದು ಅಮೂಲ್ಯ ಜೀವ ಉಳಿಸುವ ಮಹತ್ವದ ದಿನ ಎಂದು ಕರೆದರೂ ತಪ್ಪಾಗಲಾರದು.

ನಾವು ಮಾಡುವ ರಕ್ತದಾನವೇ ಬದುಕಿನ ದಾನ ನಾವು ಯಾರಿಗೂ ಪರಿಚಯವಿಲ್ಲದ ವ್ಯಕ್ತಿಗೆ ಜೀವನದ ದಾರಿದೀಪವಾಗಿ ಬೆಳಗಬಹುದಾದ ಮಹತ್ವಪೂರ್ಣ ಸೇವೆ ಎಂದರೆ ಅದು ರಕ್ತದಾನ.

1991ರಲ್ಲಿ ಆಸ್ಟ್ರಿಯಾದ ವಿಜ್ಞಾನಿ ಡಾ// ಕಾರ್ಲ್ ಲ್ಯಾಂಡ್ಸ್ಟೈನ ಅವರು ಂಃಔ ರಕ್ತ ಗುಂಪು ವ್ಯವಸ್ಥೆಯನ್ನು ಕಂಡುಹಿಡಿದರು ಇವರ ಮಹತ್ವದ ಆವಿಸ್ಕಾರದಿಂದಲೇ ರಕ್ತದ ಸುರಕ್ಷಿತ ವರ್ಗಾವಣೆ ಸಾಧ್ಯವಾಯಿತು. ಅವರ ಜನ್ಮದಿನವನ್ನೇ ಜೂನ್ 14 ರಂದು ವಿಶ್ವ ರಕ್ತದಾನ ದಿನವನ್ನಾಗಿ ಘೋಷಿಸಲಾಗಿದೆ.

2004ರಲ್ಲಿ "ಘಊಔ"ಪ್ರಾರಂಭಿಸಿದ ಈ ದಿನವನ್ನು 2005 ರಿಂದ ವಿಶ್ವಾದ್ಯಂತ ಆಚರಿಸಲಾಗುತ್ತಿದೆ.ಪ್ರತಿದಿನ ಭಾರತದಲ್ಲಿಯ ಸಾವಿರಾರು ಜನರಿಗೆ ತುರ್ತು ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಇರುತ್ತದೆ. ಅಪಘಾತ ಆದವರಿಗೆ ಗರ್ಭಿಣಿಯರಿಗೆ ಥೆಲಸ್ಸಿಮಿಯಾ ಹಾಗೂ ಹಿಮೋಫೋಲಿಯಾ ಮಕ್ಕಳಿಗೆ ಕಿಡ್ನಿ ಮತ್ತು ಹೃದಯದ ಸಮಸ್ಯೆ ಅನುಭವಿಸುವವರಿಗೆ ಭಾರತಾದತ್ಯಂತ ದಿನಾಲೂ ರಕ್ತದ ಅವಶ್ಯಕತೆ ಬೀಳುತ್ತದೆ. 140 ಕೋಟಿ ಜನರು ವಾಸಿಸುವ ಭಾರತದಲ್ಲಿ ರಕ್ತದ ಕೊರತೆ ಅನುಭವಿಸುವವರಿಗೆ ಸಾಕಾಗುವಷ್ಟು ರಕ್ತ ಸಿಗುತ್ತಿಲ್ಲ. ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಾಗುವುದಿಲ್ಲ ರಕ್ತದಾನ ಮಾಡುವವರ ಸಂಖ್ಯೆ ತೀರ ಕಡಿಮೆ ಆಗಿರುವುದರಿಂದ ದಿನಾಲೂ ದೇಶದಲ್ಲಿ ರಕ್ತದ ಕೊರತೆಯಿಂದ ಸಾವಿರಾರು ಸಾವುಗಳು ಸಂಭವಿಸುತ್ತವೆ ರೋಗಿಗಳಿಗೆ ಬೇಕಾಗುವಷ್ಟು ಯೂನಿಟ್ ಗಳು ರಕ್ತ ಸಿಗದೇ ಇರುವುದರಿಂದ ದಿನಾಲು ಸಾವು ನೋವುಗಳು ಸಂಭವಿಸುತ್ತವೆ.

ಹಾಗಾಗಿ ಭಾರತದಲ್ಲಿ ವಾಸಿಸುವ ಪ್ರತಿಯೊಬ್ಬರು 18ನೇ ವಯಸ್ಸಿನಿಂದ 65 ವರ್ಷದವರೆಗಿನ 50 ಕಿಲೋ ಗಿಂತ ಹೆಚ್ಚು ತೂಕ ಹೊಂದಿರುವ ಆರೋಗ್ಯವಂತ ವ್ಯಕ್ತಿಗಳು ಯಾರಾದರೂ ರಕ್ತವನ್ನು ದಾನ ಮಾಡಬಹುದು. ಆರೋಗ್ಯವಂತ ಮಹಿಳೆಯರೂ ರಕ್ತದಾನ ಮಾಡಬಹುದು. ವಾಸ್ತವವಾಗಿ ನಮ್ಮ ನಾಗರಿಕರಲ್ಲಿ ರಕ್ತದಾನ ಮಾಡುವುದರಿಂದ ತೊಂದರೆಗಳು ಆಗುತ್ತವೆ ಎನ್ನುವ ಪರಿಕಲ್ಪನೆ ಮನಸ್ಸಿನಲ್ಲಿ ಬೇರೂರಿದೆ. ಯಾವುದೇ ಒಬ್ಬ ಆರೋಗ್ಯವಂತ ವ್ಯಕ್ತಿ ರಕ್ತದಾನ ಮಾಡಿದ 48 ಗಂಟೆ ಒಳಗೆ ಆತನ ದೇಹದಲ್ಲಿ ರಕ್ತ ಪುನಃ ಉತ್ಪತ್ತಿಯಾಗುತ್ತದೆ ಎನ್ನುವುದು ನಾವೆಲ್ಲರೂ ಅರಿತುಕೊಳ್ಳಬೇಕು. ರಕ್ತದಾನ ಮಾಡುವುದರಿಂದ ಹೊಸ ರಕ್ತ ಕಣಗಳ ಉತ್ಪತ್ತಿ ಹೃದಯ ಆರೋಗ್ಯ ಸುಧಾರಣೆ, ರಕ್ತದ ನಿಯಂತ್ರಣ ಒಳಾಂಗಿಕ ತೃಪ್ತಿ ಮಾನವೀಯ ಸೇವೆಯ ಸಂತೋಷ. ನಮಗೆ ಸಿಗುತ್ತದೆ.

ಗ್ರಾಮೀಣ ಮಟ್ಟದಿಂದ ಹಿಡಿದು ನಗರ ಮಹಾನಗರ ಪಾಲಿಕೆಗಳಲ್ಲಿ ಸಂಘ ಸಂಸ್ಥೆಗಳು ಬ್ಲಡ್ ಕ್ಯಾಂಪುಗಳನ್ನು ರಕ್ತದಾನದ ಶಿಬಿರಗಳನ್ನು ಏರ್ಪಾಡು ಮಾಡುವುದರಿಂದ ರಕ್ತ ಸಾಕಾಗುವಷ್ಟು ಸಂಗ್ರಹಿಸಿ ರಕ್ತದ ಕೊರತೆಯ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ರಕ್ತವನ್ನು ಒದಗಿಸುವುದರ ಮೂಲಕ ಪುಣ್ಯ ಕಟ್ಟಿಕೊಳ್ಳುವ ಕೆಲಸ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಒಂದು ವರ್ಷಕ್ಕೆ ಒಮ್ಮೆಯಾದರೂ ಯುವಕರು ರಕ್ತದಾನ ಮಾಡಿದರೆ, ರಕ್ತದ ಕೊರತೆ ಅನುಭವಿಸುವ ರೋಗಿಗೆ ಜೀವದಾನ ಮಾಡುವುದರ ಜೊತೆಗೆ ಸಮಾಜಕ್ಕೆ ಮತ್ತು ಅವರ ಕುಟುಂಬಕ್ಕೆ ಉಪಕಾರ ಮಾಡಿದಂತಾಗುತ್ತದೆ ಇದಕ್ಕೆ ಪುಷ್ಟಿ ಎನ್ನುವಂತೆ ಸರ್ಕಾರಗಳು ಸಂಘ ಸಂಸ್ಥೆಗಳು ಗ್ರಾಮ ಪಂಚಾಯಿತಿಗಳು ಪುರಸಭೆ ನಗರಸಭೆಗಳು ಮಹಾನಗರ ಪಾಲಿಕೆಗಳು ಹಾಗೂ ಅನೇಕ ಸಂಘ ಸಂಸ್ಥೆಗಳು ಜನರಲ್ಲಿ ರಕ್ತದಾನದ ಜಾಗೃತಿ ಮೂಡಿಸುವುದರ ಜೊತೆಗೆ ಆರೋಗ್ಯ ಇಲಾಖೆಯ ಸಂಯೋಗದೊಂದಿಗೆ ಶಿಬಿರಗಳನ್ನು ಹಮ್ಮಿಕೊಂಡು ರಕ್ತದಾನದ ಜಾಗೃತಿ ಮಾಡುವುದರ ಜೊತೆಗೆ ರಕ್ತದಾನದ ಶಿಬಿರಗಳನ್ನು ಏರ್ಪಡಿಸಿ ಬಡ ರೋಗಿಗಳಿಗೆ ಹಾಗೂ ರಕ್ತದ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ರಕ್ತ ಒದಗಿಸುವ ಕೆಲಸ ಮಾಡಬೇಕಾದ ಜವಾಬ್ದಾರಿ ಭಾರತೀಯರಾದ ಪ್ರತಿಯೊಬ್ಬರೂ ಈ ಕೆಲಸವನ್ನು ಮಾಡುವುದರಿಂದ ಸಮಾಜಕ್ಕೆ ಉಪಕಾರ ಕುಟುಂಬಕ್ಕೆ ಸಹಕಾರ ವಾಗುತ್ತದೆ ರಕ್ತದ ಕೊರತೆ ಅನುಭವಿಸುವವರಿಗೆ ಜೀವದಾನ ಮಾಡಿದಂತೆ ಆಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಸರ್ಕಾರಿ ಆಸ್ಪತ್ರೆಗಳು ರೆಡ್ ಕ್ರಾಸ್ ಇಂಡಿಯನ್ ಮೆಡಿಕಲ್ ಅಸೋಸಿಯನ್ ಮುಂತಾದವುಗಳು ರಕ್ತದಾನ ಶಿಬಿರಗಳ ಜಾಗೃತಿ ಮೂಡಿಸಿ ಶಿಬಿರಗಳನ್ನು ಹಮ್ಮಿಕೊಂಡು ಬ್ಲಡ್ ಬ್ಯಾಂಕುಗಳನ್ನು ಸುಧಾರಿಸುವ ಕೆಲಸ ಮಾಡಿದರೆ ಹೆಚ್ಚೆಚ್ಚು ರಕ್ತಸಂಗ್ರಹವಾಗುವಂತ ಯೋಜನೆಗಳನ್ನು ಹಾಕಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರ ಮತ್ತು ಸಂಘ ಸಂಸ್ಥೆ ಮೇಲಿದೆ ಎನ್ನುವುದು



ಅರಿತುಕೊಳ್ಳಬೇಕು ಗ್ರಾಮೀಣ ಭಾಗದಲ್ಲಿ ನಿರಂತರ ಶಿಬಿರಗಳನ್ನು ನಡೆಸುವುದರಿಂದ ಗ್ರಾಮೀಣ ಜನರಲ್ಲಿ ರಕ್ತದಾನದ ಅರಿವು ಉಂಟಾಗಿ ಹೆಚ್ಚೆಚ್ಚು ರಕ್ತವನ್ನು ಸಂಗ್ರಹಣೆ ಮಾಡಲು ಅನುಕೂಲವಾಗುವುದು.

ರಕ್ತದಾನವು ಕೇವಲ ಆರೋಗ್ಯದ ವಿಷಯವಲ್ಲ ಅದು ಮಾನವೀಯತೆಯ ಸಂಕೇತ.ರಕ್ತದಾನದಿಂದ ಆರೋಗ್ಯವಷ್ಟೇ ಅಲ್ಲದೆ ಇನ್ನುಳಿದ ದೇಹದ ಶಕ್ತಿಯನ್ನು ನಾವು ಪಡೆದುಕೊಳ್ಳಬಹುದು.

ನಾವು ಪ್ರತಿ ವರ್ಷ ಒಂದೊಮ್ಮೆ ರಕ್ತದಾನ ಮಾಡಿದರೆ ದೇಶದಲ್ಲಿ ರಕ್ತದ ಕೊರತೆ ಇರುವುದೇ ಇಲ್ಲ.

ಹಾಗಾಗಿ ಭಾರತೀಯರಾದ ನಾವೆಲ್ಲರೂ ಇದೇ ಜೂನ್ 14 ರಂದು ನಾವೆಲ್ಲರೂ ಒಂದು ಪ್ರತಿಜ್ಞೆ ಮಾಡೋಣ ""ನಾನು ರಕ್ತದಾನ ಮಾಡುವೆನು, ನಾನು ಇನ್ನೊಬ್ಬರ ಜೀವ ಉಳಿಸುವೆನು""

""ನಾನು ರಕ್ತದಾನ ಮಾಡುತ್ತೇನೆ ನೀವು ರಕ್ತದಾನ ಮಾಡಿರಿ"" ಎಂಬ ಸಂಕಲ್ಪ ಪ್ರತಿಜ್ಞೆ ಮಾಡಿ ರಕ್ತದಾನ ಮಾಡುವುದರಿಂದ ನಮ್ಮ ದೇಶದಲ್ಲಿ ರಕ್ತದ ಕೊರತೆ ಎದುರಿಸುವ ಪ್ರತಿಯೊಬ್ಬರಿಗೂ ಆಸರೆಯಾಗುತ್ತದೆ.

ನಾವೆಲ್ಲರೂ ಮುಖ್ಯವಾಗಿ ಅರಿತುಕೊಳ್ಳಬೇಕಾದ ವಿಷಯವೆಂದರೆ ಒಂದು ಯೂನಿಟ್ ರಕ್ತ ದಾನ ಮಾಡುವುದರಿಂದ ಒಂದು ಜೀವಕ್ಕೆ ಆಸರೆಯಾಗುತ್ತೆ ಎನ್ನುವುದಾದರೆ ಸಾವು ಬದುಕಿನ ಮಧ್ಯೆ ಹೋರಾಡುವ ಒಂದು ಜೀವ ಬದುಕುತ್ತದೆ ಇನ್ನೊಬ್ಬರ ಜೀವನದ ಕನಸು ನನಸಾಗುತ್ತದೆ ಎನ್ನುವುದಾದರೆ ನಾವ್ಯಾಕೆ ರಕ್ತದಾನ ಮಾಡಬಾರದು ಎನ್ನುವ ಶಪಥ ನಮ್ಮ ಮನಸ್ಸಿನಲ್ಲಿ ಮನನ ಮಾಡಿಕೊಳ್ಳಬೇಕು. ಒಂದು ಯೂನಿಟ್ ರಕ್ತದಾನ ಮಾಡುವುದರಿಂದ ನಮಗೆ ಯಾವ ತೊಂದರೆಯೂ ಆಗುವುದಿಲ್ಲ ಪೂರಕವಾಗಿ ಆರೋಗ್ಯ ಇನ್ನೂ ಹೆಚ್ಚು ಸುಧಾರಣೆ ಗೊಳ್ಳುತ್ತದೆ ಎನ್ನುವುದಾದರೆ ಸಮಾಜ ಗೋಸ್ಕರ ಇನ್ನೊಬ್ಬರಿಗೆ ಸಹಾಯ ಜೀವಕ್ಕೆ ಆಸರೆಯಾಗುತ್ತದೆ ಎನ್ನುವುದು ಗೊತ್ತಾದ ಮೇಲೆ ನಾವು ರಕ್ತದಾನ ಮಾಡದೆ ಇದ್ದರೆ ನಮ್ಮ ಮನಸ್ಸು ಕಟುಕರಿಗೆ ಸಮಾನ ಎನ್ನುವುದು ಸಮಾಜಕ್ಕೆ ಅರ್ಥವಾಗುತ್ತದೆ ಹಾಗಾಗಿ ಸಮಾಜಕ್ಕಾಗಿ ಇನ್ನೊಬ್ಬರಿಗಾಗಿ ಸಹಾಯ ಮಾಡಲು ಉತ್ತಮ ಅವಕಾಶ ಎಂದು ಅಂದುಕೊಂಡು ರಕ್ತದಾನ ಮಾಡಿದರೆ ನಾವು ಭೂಮಿ ಮೇಲೆ ಜನ್ಮ ತಾಳಿದ್ದಕ್ಕೂ ಜೀವನ ಬದುಕು ಸಾರ್ಥಕ ವಾಗುತ್ತದೆ.

ಪ್ರಕೃತಿ ಮಾನವನಿಗೆ ಎಲ್ಲವನ್ನೂ ಕೊಟ್ಟು ಸುಖ–ಶಾಂತಿ ನೆಮ್ಮದಿಯಿಂದ ಬಾಳಲು ಬೇಕಾದ ಎಲ್ಲಾ ನೈಸರ್ಗಿಕ ಸೌಲಭ್ಯ ಒದಗಿಸಿ ನೆಮ್ಮದಿಯಿಂದ ಬಾಳುವಂತೆ ದೇವರು ಕರುಣಿಸಿದ್ದಾನೆ. ತಾಯಿಯ ಗರ್ಭದಿಂದ ಬಂದ ನಂತರ ನಮ್ಮ ಉಸಿರಿರುವರೆಗೂ ಪ್ರಕೃತಿಯ ಆಸರೆಯಲ್ಲಿಯೇ ನಾವು ಬದುಕಿ ಬಾಳಬೇಕು 'ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ ಜೀವನದಲ್ಲಿ ಒಮ್ಮೆಯಾದರೂ ರಕ್ತದಾನ ಮಾಡುವ ಶಪಥ ಮಾಡಿ' ಎಂಬ ಸಂಕಲ್ಪ ಒಂದು ಹಂತದ ವಯಸ್ಸಿನಲ್ಲಿರುವಾಗ ನಮ್ಮೆಲ್ಲರನ್ನು ಕಾಡುತ್ತದೆ.

ಮನುಷ್ಯ ಪ್ರಕೃತಿಯ ಮಡಿಲಲ್ಲಿ ಬದುಕಿ ಬಾಳುವಾಗ ಪ್ರಕೃತಿಗಾಗಿ ಏನಾದ್ರು ಒಂದು ಕೊಡುಗೆ ಕೊಟ್ಟಾಗಲೇ ಮಾನವನ ಜೀವನ ಸಾರ್ಥಕವಾಗುತ್ತದೆ ಎಂಬ ನಂಬಿಕೆ ಹಲವರಲ್ಲಿ ಇದೆ.

ಪ್ರಕೃತಿಯ ಸಹಾಯ ದಿಂದ ಜೀವಿಸುವ ಪ್ರತಿಯೊಬ್ಬ ಮನುಷ್ಯ ನೈಸರ್ಗಿಕ ಆಸರೆಯಲ್ಲಿಯೇ ಬೆಳೆಯುತ್ತಾನೆ ಆದರೆ ನಿಸರ್ಗ–ಕ್ಕೆ ಏನೂ ಕೊಡುಗೆ ಕೊಡದೆ ಹಾಗೆ ತನ್ನ ಜೀವನ ಬದುಕು ಸವಿಸಿಕೊಳ್ಳುತ್ತಾನೆ. ಪ್ರಕೃತಿಗೆ ಏನೂ ಕೊಡಲು ಆಗುವುದಿಲ್ಲ ಎಂದು ಗೊತ್ತಾದಾಗ ಮನುಷ್ಯನಿಗೆ ಇರುವಂತ ಉತ್ತಮ ಅವಕಾಶವೇ ತನ್ನಲ್ಲಿರುವುದನ್ನು ದಾನ ಮಾಡುವುದು ಅನ್ನ, ಕಣ್ಣು, ಅಂಗಾಂಗಗಳು ಹಾಗೂ ರಕ್ತದಾನ ಇವುಗಳಲ್ಲಿ ಯಾವುದರೂ ಒಂದನ್ನು ಮಾಡಿದರು ಮನುಷ್ಯ ಮಾನವನಾಗಿ ಹುಟ್ಟಿ ಜೀವನ ಸಾರ್ಥಕವಾಗುತ್ತದೆ ಎಂಬ ಪರಿಕಲ್ಪನೆ ನಮ್ಮೆಲ್ಲರಲ್ಲಿಯೂ ಇರಬೇಕು.

ಇವತ್ತಿನ ಆಧುನಿಕ ಮುಂದುವರೆದ ಜಗತ್ತಿನಲ್ಲಿ ವೈದ್ಯಕೀಯ ಕ್ಷೇತ್ರ ತುಂಬಾ ಮುಂದುವರೆದಿದ್ದು ಮನುಷ್ಯನಿಗೆ ಬೇಕಾದ ಅಂಗಾಂಗಗಳನ್ನು ಕೃತಕವಾಗಿಯೇ ನಿರ್ಮಿಸುವ ಶಕ್ತಿ ವೈದ್ಯಕೀಯ ಲೋಕಕ್ಕೆ ಇದೆ ಆದರೆ



ರಕ್ತವನ್ನು ಯಾರಿಂದಲೂ ಉತ್ಪತ್ತಿ ಮಾಡಲು ಆಗಲ್ಲ ಎಂದಾಗ ಅದು ಆರೋಗ್ಯವಂತ ಮನುಷ್ಯನಲ್ಲಿ ಬಿಟ್ಟರೆ ಬೇರೆ ಯಾರಿಂದಲೂ ದೊರೆಯಲು ಸಾಧ್ಯವಿಲ್ಲ ಎನ್ನುವುದು ನಮಗೆಲ್ಲರಿಗೂ ಗೊತ್ತಿರುವ ವಿಷಯ, ಅನ್ನ ಕಣ್ಣು ಅಂಗಾಂಗ ದಾನಕ್ಕಿಂತ ಶ್ರೇಷ್ಠವಾದ ದಾನ ರಕ್ತದಾನ ಎಂದು ಕರೆ–ಯುತ್ತಾರೆ. ಹಾಗಾಗಿ ಮನುಷ್ಯನಾಗಿ ಹುಟ್ಟಿದ ಮೇಲೆ ಏನನ್ನು ಉಪಕಾರ ಮಾಡಲು ಆಗದಿದ್ದರೂ ಪರವಾಗಿಲ್ಲ ಆರೋಗ್ಯವಂತ ಮನುಷ್ಯ ರಕ್ತವನ್ನು ದಾನ ಮಾಡಿ ಇನ್ನೊಬ್ಬರಲ್ಲಿ ಕೃತತ್ವ ಭಾವನೆ ಬರುತ್ತದೆ ಎನ್ನುವುದು ಅರ್ಥ ಮಾಡಿಕೊಳ್ಳಬೇಕು.

ರಕ್ತವು ಥೆಲೆಸ್ಮಿಯಾ, ಹಿಮೋಫಿಲಿಯಾ, ಕ್ಯಾನ್ಸರ್, ರೋಗಿಗಳಿಗೆ ಚಿಕ್ಕ ಮಕ್ಕಳಿಗೆ ಗರ್ಭಿಣಿಯರಿಗೆ ಹೃದಯ ಕಾಯಿಲೆಯಿಂದ ಬಳಲುವವರಿಗೆ ತುಂಬಾ ಅವಶ್ಯಕವಾಗಿದ್ದು ಇದನ್ನು ಮಾನವನ ದೇಹದಲ್ಲಿ ಬಿಟ್ಟರೆ ಬೇರೆಲ್ಲೂ ತಯಾರು ಮಾಡಲು ಸಾಧ್ಯವೇ ಇಲ್ಲ ಹಾಗಾಗಿ ರಕ್ತದಾನ ಎನ್ನುವುದು ಎಲ್ಲ ದಾನಕ್ಕಿಂತ ಶ್ರೇಷ್ಠ ದಾನ ಎನಿಸಿಕೊಳ್ಳುತ್ತದೆ.

ರಕ್ತದಾನದಿಂದ ಅನೇಕ ರೋಗಿಗಳಿಗೆ ಸಾವು ಬದುಕಿನ ಮಧ್ಯೆ ಹೋರಾಡುವವರಿಗೆ ಆಸರೆ ಯಾಗುತ್ತದೆ ಎನ್ನುವುದಾದರೆ ಭೂಮಿಯ ಮೇಲೆ ಜನಿಸಿರುವ ಪರಿಕಲ್ಪನೆ ಹೊಂದಿರುವವರು ಸಾಕಷ್ಟು ಜನರಿದ್ದಾರೆ ಆದರೆ ಆರೋಗ್ಯವಂತ ವ್ಯಕ್ತಿಯ ಮನುಷ್ಯನ ದೇಹದಲ್ಲಿ ರಕ್ತ ಉತ್ಪತ್ತಿ ಮಾಡುವಂತಹ ಶಕ್ತಿ ಹೆಚ್ಚಾಗಿದೆ ಬರೀ ಒಂದು ಯೂನಿಟ್ ರಕ್ತವನ್ನು ಒಬ್ಬ ಮನುಷ್ಯ ದಾನ ಮಾಡಿದರೆ ನಮಗೇನು ಆಗುವುದಿಲ್ಲ ಎನ್ನುವ ಜ್ಞಾನ ತಿಳುವಳಿಕೆ ನಾವೆಲ್ಲರೂ ಪ್ರತಿಯೊಬ್ಬ ಜನರಿಗೂ ಮುಟ್ಟಿಸಬೇಕಾದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಈ ರೀತಿ ಮಾಡಿ ಜನರಲ್ಲಿ ರಕ್ತದಾನದ ಬಗ್ಗೆ ಅರಿವು ಮೂಡಿಸಿದಾಗ ರಕ್ತದ ಕೊರತೆಯಿಂದ ಸಾಯುವವರ ಸಂಖ್ಯೆ ಕಡಿಮೆಗೊಳಿಸಬಹುದು ಮತ್ತು ಸಾಯುವ ಜೀವಕ್ಕೆ ಆಸರೆ ಆಗಲು ರಕ್ತದಾನ ಎನ್ನುವುದು ಮನುಷ್ಯನಾದವನಿಗೆ ದೇವರು

ನಾವುಗಳು ಪ್ರತಿಯೊಬ್ಬರೂ ರಕ್ತವನ್ನು ಯಾಕೆ ಕೊಡಬಾರದು ಎನ್ನುವ ಭಾವನೆ ಮನಸ್ಸಿನಲ್ಲಿ ಬೇರೂರಿಸಿಕೊಳ್ಳಬೇಕು.ರಕ್ತದಾನದಿಂದ ಸಾಕಷ್ಟು ಪ್ರಯೋಜನಗಳಿವೆ. ನಮ್ಮಂತೆ ಜೀವಿಸುವವರ ಜೀವನಕ್ಕೆ ಆಸರೆಯಾಗುತ್ತೆ ಎನ್ನುವುದಾದರೆ ನಮಗೆ ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡುವ ಅವಕಾಶವಿದ್ದು ಸಾಧ್ಯವಾದಷ್ಟು ನಾವು ರಕ್ತದಾನ ಮಾಡಿದರೆ ನಮ್ಮ ದೇಹದ ಆರೋಗ್ಯದಲ್ಲಿ ಹೊಸ ಹೊಸ ರಕ್ತ ಕಣಗಳು ಉತ್ಪತ್ತಿಯಾಗಿ ತುಂಬಾ ಸಂತೋಷ ಮತ್ತು ಉತ್ಸಾಹಕತೆಯಿಂದ ಬದುಕಲು ಆಸರೆಯಾಗುತ್ತವೆ ಎನ್ನುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು..

ನಾವೆಲ್ಲರೂ ರಕ್ತದಾನ ಮಾಡಿದರೆ ನಮ್ಮ ದೇಹದಲ್ಲಿ ರಕ್ತ ಕಡಿಮೆಯಾಗುತ್ತದೆ ಎನ್ನುವ



ಜಗದೀಶ.ಎಸ್.
ಗಿರಡ್ಡಿ.
ಲೇಖಕರು. ಗೊರಬಾಳ
9902470856.

ನಿವೃತ್ತ ನ್ಯಾಯಾಧೀಶರಿಂದ ಒಂದು ತನಿಖೆ ನಡೆಸಿ,

## ವರದಿ ತರಿಸಿ ಕ್ರಮ ತೆಗೆದುಕೊಳ್ಳಿ: ಸಿಎಂಗೆ ವೀರಪ್ಪ ಮೊಯ್ಲಿ ಪತ್ರ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣ ಸಂಬಂಧ ವಿವಿಧ ತನಿಖೆ ನಡೆಸುವ ಬದಲು ನಿವೃತ್ತ ನ್ಯಾಯಾಧೀಶರಿಂದ ಒಂದೇ ತನಿಖೆ ನಡೆಸಬೇಕು. ತಕ್ಷಣ ವರದಿ ತರಿಸಿ ಸಾರ್ವಜನಿಕರು ಮತ್ತು ಕ್ರಿಕೆಟ್ ಪ್ರೇಮಿಗಳಲ್ಲಿ ವಿಶ್ವಾಸ ಮೂಡಿಸಲು ಸರಕಾರ ಕ್ರಮ ವಹಿಸಬೇಕು ಎಂದು ಕೋರಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮಾಜಿ ಸಿಎಂ ಡಾ.ಎಂ.ವೀರಪ್ಪ ಮೊಯ್ಲಿ ಪತ್ರ ಬರೆದಿದ್ದಾರೆ.

ಶುಕ್ರವಾರ ಸಿಎಂ ಸಿದ್ದರಾಮಯ್ಯ ಅವರಿಗೆ ಎರಡು ಪುಟಗಳ ಪತ್ರ ಬರೆದಿರುವ ವೀರಪ್ಪ ಮೊಯ್ಲಿ, ಕಾಲ್ತುಳಿತ ಪ್ರಕರಣ ಸಂಬಂಧ ಜಿಲ್ಲಾಧಿಕಾರಿ, ಸಿಐಡಿ ಹಾಗೂ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಮೂರು ತನಿಖೆ ನಡೆಸಲಾಗುವುದು ಎಂದು ಪ್ರಕಟಿಸಿರುವುದು ಸರಿಯಲ್ಲ. ಇದರಿಂದ ಸರಕಾರದ ಆಡಳಿತಕ್ಕೆ ಕೆಟ್ಟ ಹೆಸರು ಬರುವ ಸಾಧ್ಯತೆಗಳಿವೆ. ಹೀಗಾಗಿ ಈ ಬಗ್ಗೆ ಪುನರ್ ಪರಿಶೀಲನೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ.


ಕಾಲ್ತುಳಿತದ ಆಕಸ್ಮಿಕ ಘಟನೆಯಿಂದ ಅನೇಕ ದಶಕಗಳಿಂದ ಗಳಿಸಿದ ಕಾಂಗ್ರೆಸ್ ಪಕ್ಷದ ವರ್ಚಸ್ಸನ್ನು ಅಳಿಸಿಹಾಕಬಾರದು. ಈ ಬಗ್ಗೆ ವಿಶೇಷವಾದ ಎಚ್ಚರಿಕೆಯಿಂದ ಕ್ರಮ ಕೈಗೊಳ್ಳುವ ಅನಿವಾರ್ಯತೆಯಿದೆ. ದುರ್ಘಟನೆ ಹಿನ್ನೆಲೆಯಲ್ಲಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿನ ಕ್ರಿಕೆಟ್ ವ್ಯವಸ್ಥೆಯ ಮೇಲೆಯೇ ಕೆಟ್ಟ ಹೆಸರು ಬಂದಿದೆ. ಆ ಕೆಟ್ಟ ಹೆಸರನ್ನು ಅಳಿಸಿಹಾಕಬೇಕು ಎಂದು ವೀರಪ್ಪ ಮೊಯ್ಲಿ ಸಲಹೆ ನೀಡಿದ್ದಾರೆ.

ಆರ್‌ಸಿಬಿ ವಿಜಯೋತ್ಸವವನ್ನು ಸಂಭ್ರಮಿಸುವ ಬದಲು ಬೆಟ್ಟು ತೋರಿಸುವ ಪ್ರಕ್ರಿಯೆ ನಡೆದಿದೆ, ಇದು ಸಲ್ಲದು. ಕಾಲ್ತುಳಿತದಲ್ಲಿ ಅಸುನೀಗಿದವರ ಕುಟುಂಬದ ಸದಸ್ಯರು ಹಾಗೂ ಗಾಯಾಳುಗಳಲ್ಲಿ ವಿಶ್ವಾಸ ಮೂಡಿಸಬೇಕು. ಅಲ್ಲದೆ, ಕ್ರಿಕೆಟ್ ಪ್ರೇಮಿಗಳಲ್ಲಿಯೂ ಸುರಕ್ಷತೆಯ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಕ್ಷಿಪ್ರ ಗತಿಯಲ್ಲಿ ಪ್ರಕರಣದ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು' ಎಂದು ವೀರಪ್ಪ ಮೊಯ್ಲಿ ಕೋರಿದ್ದಾರೆ.

ಬೆಂಗಳೂರು ಕಾಲ್ತುಳಿತ ಪ್ರಕರಣದ ತನಿಖೆಯಲ್ಲಿ ಪಕ್ಷ ಮೂಗು ತೂರಿಸಲ್ಲ, ಜನಪರ ತನಿಖೆ ನಡೆಯುತ್ತೆ: ಕಾಂಗ್ರೆಸ್ ಹೈಕಮಾಂಡ್ ಪರಿಹಾರ ನೀಡುವುದು ಮಾತ್ರ ಸಾಕಾಗುವುದಿಲ್ಲ, ಸಂತ್ರಸ್ತರ ಮತ್ತು ಗಾಯಗೊಂಡವರ ಕುಟುಂಬಗಳ ಬಗ್ಗೆ ವಿಶೇಷ ಕಾಳಜಿ ವಹಿಸುವಂತೆ ಅವರು ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದರು. ಬೆಂಗಳೂರಿನಿಂದ ಬೇರೆ ಸ್ಥಳಗಳಿಗೆ ಕ್ರಿಕೆಟ್ ಪಂದ್ಯಗಳನ್ನು ಸ್ಥಳಾಂತರಿಸುವ ಬಗ್ಗೆ ಹರಡುತ್ತಿರುವ ಊಹಾಪೋಹಗಳನ್ನು ಅನಾರೋಗ್ಯಕರ ಎಂದು ಬಣ್ಣಿಸಿದ

ಕಾನೂನು ಸುವ್ಯವಸ್ಥೆಗೆ ಧಕ್ಕೆ ಸಾಧ್ಯತೆ: ಅಯೋಧ್ಯೆಯಲ್ಲಿ

## ವಾರ್ಷಿಕ ಉರುಸ್ ಸಮಾರಂಭ ನಿಷೇಧ



ಅಯೋಧ್ಯೆ: ಅಯೋಧ್ಯೆಯಲ್ಲಿ ಶಾಂತಿ ಭಂಗ ಮತ್ತು ಕಾನೂನು ಸುವ್ಯವಸ್ಥೆ ಹದಗೆಡುವ ಸಾಧ್ಯತೆ ಬಗ್ಗೆ ಮಾಹಿತಿ ಪಡೆದ ನಂತರ ಸ್ಥಳೀಯ ಆಡಳಿತವು ವಾರ್ಷಿಕ ಉರುಸ್ ಸಮಾರಂಭವನ್ನು ನಿಷೇಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಎರಡು ದಶಕಗಳಿಂದ ಅಯೋಧ್ಯೆಯಲ್ಲಿ ನಡೆಯುತ್ತಿರುವ ಉರುಸ್ ಸಮಾರಂಭವನ್ನು ಶನಿವಾರ ಮತ್ತು ಭಾನುವಾರ ನಿಗದಿಪಡಿಸಲಾಗಿತ್ತು. ಆದರೆ ವಿಶ್ವ ಹಿಂದೂ ಪರಿಷತ್(ವಿಎಚ್‌ಪಿ) ದೂರಿನ ನಂತರ, ಅಯೋಧ್ಯಾ ಆಡಳಿತವು, ಖಾನ್‌ಪುರ ಮಸೋಧಾ ಪ್ರದೇಶದ ದಾದಾ ಮಿಯಾ ಬಜಾರ್‌ನಲ್ಲಿ ಪ್ರತಿ ವರ್ಷ ನಡೆಯುವ 'ದಾದಾ ಮಿಯಾ ಉರುಸ್'ಗೆ ಅನುಮತಿ ನಿರಾಕರಿಸಲಾಗಿದೆ.ಉತ್ತರ ಪ್ರದೇಶ ಪೊಲೀಸರ ಸಾಂದರ್ಭಿಕ ಚಿತ್ರ

ಅಯೋಧ್ಯೆ: ರಾಮ ಮಂದಿರಕ್ಕೆ ಎಲೋನ್ ಮಸ್ಕ್ ತಂದೆ ಭೇಟಿ, ಹೇಳಿದ್ದೇನು? ಮೂಲಗಳ ಪ್ರಕಾರ, ಸ್ಥಳೀಯ ವಿಎಚ್‌ಪಿ ಸದಸ್ಯರಾದ ಲಾಲ್ಜಿ ಶರ್ಮಾ ಮತ್ತು ಸೂರ್ಯಕಾಂತ್ ಪಾಂಡೆ ಅವರು ಖಾನ್‌ಪುರ ಮಸೋಧಾದಲ್ಲಿ "ಘಾಜಿ ಬಾಬಾ" ಹೆಸರಿನಲ್ಲಿ ಸಭೆ ಆಯೋಜಿಸಲಾಗುತ್ತಿದೆ ಎಂದು ಆರೋಪಿಸಿ ಪೊಲೀಸರಿಗೆ ದೂರು ನೀಡಿದ್ದಾರೆ. "ಉರುಸ್ ದಾದಾ ಮಿಯಾ" ಹೆಸರಿನಲ್ಲಿ ಉರುಸ್ ಆಯೋಜಿಸಲು ಆಯೋಜ–ಕರು ಸ್ಥಳೀಯ ಆಡಳಿತದಿಂದ ಅನುಮತಿ ಪಡೆದಿದ್ದಾರೆ. ಆದರೆ ಅವರು "ಘಾಜಿ ಬಾಬಾ ಉರುಸ್" ಹೆಸರಿನಲ್ಲಿ ರಶೀದಿಗಳನ್ನು ಮುದ್ರಿಸುವ ಮೂಲಕ ದೇಣಿಗೆ ಸಂಗ್ರಹಿಸುತ್ತಿರುವುದು ಪೊಲೀಸ್ ತನಿಖೆಯಲ್ಲಿ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಅನುಮತಿಯನ್ನು ರದ್ದುಪಡಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉರುಸ್ ಸಮಯದಲ್ಲಿ, ಆಯೋಜ–ಕರು "ಮಾಟಮಂತ್ರ" ಮಾಡುವ ಮತ್ತು ಜನರನ್ನು "ದಾರಿ ತಪ್ಪಿಸುವ" ಕೆಲವು ಧರ್ಮಗುರುಗಳನ್ನು ಆಹ್ವಾನಿಸುತ್ತಾರೆ ಎಂದು ದೂರುದಾರರು ಆರೋಪಿಸಿದ್ದಾರೆ.

## ಇನ್ನು ಮುಂದೆ ರಾಜ್ಯ ಸರ್ಕಾರದಿಂದಲೇ 108 ಆಂಬ್ಯುಲೆನ್ಸ್ ನಿರ್ವಹಣೆ




ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತುರ್ತು ಆರೋಗ್ಯ ಸೇವೆಗಳನ್ನು ಬಲಪಡಿಸುವ ಗುರಿಯನ್ನು ಹೊಂದಿರುವ 108 ಆಂಬ್ಯುಲೆನ್ಸ್ ಸೇವೆಯನ್ನು ಆರೋಗ್ಯ ಇಲಾಖೆಯ ನೇರ ನಿರ್ವಹಣೆಯಡಿ ತರುವ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಶುಕ್ರವಾರ ಹೇಳಿದ್ದಾರೆ. ಈ ಉಪಕ್ರಮವು 108 ಆಂಬ್ಯುಲೆನ್ಸ್ ಸೇವೆಯನ್ನು ಖಾಸಗಿ ನಿಯಂತ್ರಣದಿಂದ ಮುಕ್ತಗೊಳಿಸಿ ಆರೋಗ್ಯ ಇಲಾಖೆಯಡಿ ತರಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಈ ಕ್ರಮದಿಂದಾಗಿ 108 ಆರೋಗ್ಯ ಕವಚ ಸೇವೆಯಲ್ಲಿ ಸಾಕಷ್ಟು ಸುಧಾರಣೆಯಾಗುವ ಭರವಸೆ ಮೂಡಿದ್ದು, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸುಮಾರು 250 ಕೋಟಿ ರೂ. ಉಳಿಸುತ್ತದೆ ಎಂದು ಆರೋಗ್ಯ ಸಚಿವರು ಹೇಳಿದ್ದಾರೆ.

**ಆಂಬ್ಯುಲೆನ್ಸ್ ಸೇವೆ :** ಸರ್ಕಾರದಿಂದಲೇ ಇನ್ನು ಮುಂದೆ 108 ಆಂಬ್ಯುಲೆನ್ಸ್ ಸೇವೆ: ಸಚಿವ ದಿನೇಶ್ ಗುಂಡೂರಾವ್

715 ಆಂಬ್ಯುಲೆನ್ಸ್‌ಗಳ ಸಮೂಹವನ್ನು ನಿರ್ವಹಿಸಲು ರಾಜ್ಯ ಮಟ್ಟದಲ್ಲಿ ಕೇಂದ್ರೀಯ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರವನ್ನು ಸ್ಥಾಪಿಸಲಾಗುವುದು ಮತ್ತು ಇದಕ್ಕಾಗಿ '112 ಓಉ–ಇಖಖಖ' ಸಾಫ್ಟ್‌ವೇರ್ ಬಳಸಿಕೊಳ್ಳಲು ಯೋಜನೆ ರೂಪಿಸಲಾಗಿದೆ. ಪ್ರತಿ ಜಿಲ್ಲೆಗಳಲ್ಲಿಯೂ 108 ಕಂಟ್ರೋಲ್ ಸೆಂಟರ್‌ಗಳು ಕಾರ್ಯನಿರ್ವಹಿಸಲಿದ್ದು, ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ನಿರ್ವಹಣೆಯ ಜವಾಬ್ದಾರಿ ವಹಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಆಂಬ್ಯುಲೆನ್ಸ್ ಗಳಿಗೆ ಚಾಲಕರು ಮತ್ತು ನರ್ಸಿಂಗ್ ಸಿಬ್ಬಂದಿಯನ್ನು ಜಿಲ್ಲಾ ಮಟ್ಟದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು.ಆರಂಭದಲ್ಲಿ ಚಾಮರಾಜ ನಗರ ಜಿಲ್ಲೆಯಲ್ಲಿ ನಿರ್ವಹಣೆ ಪ್ರಾರಂಭಿಸಲಾಗುತ್ತಿದೆ. ನಂತರದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ನಿರ್ವಹಣೆ ಕಾರ್ಯ ಆರಂಭವಾಗಲಿದೆ. ಅಲ್ಲದೇ 108 ಹೊರತಾಗಿ ರಾಜ್ಯದಲ್ಲಿರುವ 1000 ಕ್ಕೂ ಹೆಚ್ಚು ಸ್ಟೇಟ್ ಅಂಬ್ಯುಲೆನ್ಸ್ ಗಳನ್ನು ಕೂಡಾ 108 ಕಮಾಂಡ್ ಸೆಂಟರ್ ಅಧೀನಕ್ಕೆ ತರಲು ಯೋಜನೆ ರೂಪಿಸಲಾಗಿದೆ ಎಂದು ಆರೋಗ್ಯ ಸಚಿವರು ಹೇಳಿದ್ದಾರೆ.

## ಕಜಾಪ ಬೀಳಗಿ ತಾಲೂಕು ಘಟಕಕ್ಕೆ ಬಸವರಾಜ, ಹುಲಿಗೆಮ್ಮ ಅಧ್ಯಕ್ಷರಾಗಿ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜೂ.14–ಕನ್ನಡ ಜಾನಪದ ಪರಿಷತ್ತಿನ ಬೀಳಗಿ ತಾಲೂಕಾ ಘಟಕದ ನೂತನ ಅಧ್ಯಕ್ಷರಾಗಿ ಬಸವರಾಜ ನಾಯ್ಕ ಹಾಗೂ ಮಹಿಳಾ ಘಟಕದ ಅಧ್ಯಕ್ಷರಾಗಿ ಹುಲಿಗೆಮ್ಮ ಮಾಳಗೊಂಡ ನೇಮಕಗೊಂಡಿದ್ದಾರೆ. ಕಜಾಪ ರಾಜ್ಯಾಧ್ಯಕ್ಷ ಬಾಲಾಜಿ ಅವರ ಅದೇಶದ ಮೇರೆಗೆ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಈ ನೇಮಕಾತಿ ಮಾಡಿದ್ದು, ಇಬ್ಬರೂ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿ ಜಾನಪದ



ಕಲೆಯನ್ನು ಉಳಿಸಿ ಬೆಳೆಸುವ ಹಾಗೂ ಕಲಾವಿದರ ನೋವು–ನಲಿವುಗಳಿಗೆ ಸ್ಪಂದಿಸುವ



ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವಂತೆ ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

## ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಸೂಕ್ತ ಮಹಿಳಾ ಮೀಸಲಾತಿ ಜಾರಿಗೆಗೊಳಿಸಲು ವಿಶ್ವನಾಥ್ ಗೌನಳ್ಳಿ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಕಲಬುರ್ಗಿ : ಕೇಂದ್ರ ಸರ್ಕಾರವು ಸ್ಥಳೀಯ ಸಂಸ್ಥೆಗಳಲ್ಲಿ 50 /ಇದರಂತೆ ಲೋಕಸಭಾ ವಿಧಾನಸಭಾ ಗಳಲ್ಲಿ ಮಹಿಳೆಯರಿಗೆ 33 / ಮೀಸಲಾತಿ ಜಾರಿಗೊಳಿಸಲು ಸಜ್ಜುಗೊಳಿಸುವ ಸ್ವತಂತ್ರ ಭಾರತದ ಶತಮಾನದ ಅಂಚಿನಲ್ಲಿಯಾದರೂ ಮಹಿಳೆಯರಿಗೆ ಮೀಸಲಾತಿ ಜಾರಿಗೊಳಿಸಲು ಮುಂದಾಗಿರುವುದು ಒಂದು ಕಡೆ ಸಂತೋಷದ ಸಂಗತಿ ಯಾದ–ರೆ ಇನ್ನೊಂದು ಕಡೆ ಮಹಿಳಾ ರಾಜಕೀಯ ಮುಖಂಡರಿಗೆ ಆತಂಕದ ಛಾಯೆ ಆವರಿಸಿದೆ ಎಕೆಂದರೆ ಭಾರತ ದೇಶದ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 50 / ಮೀಸಲಾತಿ ನೀಡಿದಂತೆ ಲೋಕಸಭಾ ಮತ್ತು ವಿಧಾನಸಭಾ ಸ್ಥಾನಗಳಲ್ಲಿ ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳ ಸಂಖ್ಯೆಗೂ ಕಡಿಮೆ ಸಂಖ್ಯೆಯ ಒಟ್ಟು ಸ್ಥಾನಗಳಲ್ಲಿ ಪ್ರತಿಶತ 33 / ಪ್ರಸೆಂಟ್ ರಷ್ಟು ಸ್ಥಾನ ಮಹಿಳೆಯರಿಗೆ ಮೀಸಲಾತಿ



ಜಾರಿಗೊಳಿಸಲು ಮುಂದಾಗಿರುವ ಕೇಂದ್ರ ಸರ್ಕಾರ ಈಗಿರುವ ಜನಪ್ರತಿನಿಧಿಗಳ ಕುಟುಂಬದವರಿಗೆ ಸದರಿ ಮೀಸಲಾತಿಯಲ್ಲಿ ಅವಕಾಶ ನೀಡದೆ ಸ್ವತಂತ್ರವಾಗಿ ರಾಜಕೀಯ ಮತ್ತು ಸಾಮಾಜಿಕ ಶೈಕ್ಷಣಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಈ ಹಿಂದೆ ಕುಟುಂಬದಲ್ಲಿ ಜನಪ್ರತಿನಿಧಿ ಸ್ಥಾನಮಾನ ಹೊಂದಿರದ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಮಹಿಳೆಯರಿಗೆ ಕೇಂದ್ರ ಸರ್ಕಾರ ನೀಡಲು ಮುಂದಾಗಿರುವ ಮಹಿಳಾ ಮೀಸಲಾತಿಯಲ್ಲಿ ಪ್ರಬಲ ಕಾನೂನೂ ನಿಯಮ ಅಳವಡಿಸಿದಾಗ ಮಾತ್ರ ಪ್ರಸ್ತುತ ಜಾರಿಗೆ ತರುತ್ತಿರುವ ಮಹಿಳಾ ಮೀಸಲಾತಿ ನಿಜವಾದ ಸಾಮರ್ಥ್ಯ ಹೊಂದಿರುವ ಮಹಿಳೆಯರಿಗೆ ಅವಕಾಶ ಸಿಗುವಂತಾಗಬೇಕು ಅಂದಾಗ ಮಾತ್ರ ಗಂಡು ಹೆಣ್ಣು ಬೇಧ ಮತ್ತು ಸಮಾನತೆ ಸಾಮಾಜಿಕ ನ್ಯಾಯ ಸಿಗಲು ಸಾಧ್ಯ ಇದನ್ನು ಕೇಂದ್ರ ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಸೂಕ್ತ ಮಹಿಳಾ ಮೀಸಲಾತಿ ಜಾರಿಗೊಳಿಸಲು ಉಭಯ ಸರ್ಕಾರಕ್ಕೆ ಸಾಮಾಜಿಕ ಹೋರಾಟಗಾರ ವಿಶ್ವನಾಥ ಪಾಟೀಲ್ ಗವನಳ್ಳಿ ಅವರು ಆಗ್ರಹ ಪಡಿಸಿದ್ದಾರೆ.

# ಜನನಾಯಕ, ಬಡವರ ಸೇವಕ ಬಂಡೆಪ್ಪ ಖಾಶೆಂಪುರ್ ರವರ ಜನ್ಮದಿನವಿಂದು

ಮಾಜಿ ಸಚಿವರು, ಜೆಡಿಎಸ್ ಪಕ್ಷದ ಹಿರಿಯ ನಾಯಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರು ಬಡವರ, ರೈತರ, ಶ್ರಮಿಕರ, ಕಷ್ಟದಲ್ಲಿರುವ ಪ್ರತಿಯೊಬ್ಬರ ಬಗ್ಗೆ ಕಾಳಜಿ ವಹಿಸುವ ಸರಳ ಸಜ್ಜನಿಕೆಯ ನಾಯಕರಾಗಿದ್ದಾರೆ. ಅವರು ತಮಗೆ ಇರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಜನತೆಯ ಒಳಿತಿಗಾಗಿ ದುಡಿಯುತ್ತಿರುವ ಜನಸೇವಕರಾಗಿದ್ದಾರೆ.

ಬೀದರ್ ಉತ್ಸವ ಆರಂಭಿಸುವ ಮೂಲಕ ರಾಜ್ಯಕ್ಕೆ ಬೀದರ್ ಜಿಲ್ಲೆಯ ವಿಶೇಷತೆಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಹೋರಾಡಿ ಬೀದರ್ ಜಿಲ್ಲೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರ ತಂದು ಕೊಡುವಲ್ಲಿ ಯಶಸ್ವಿಕಂಡಿದ್ದಾರೆ.

ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಬೀದರ್ ನಗರದ ರಸ್ತೆಗಳ ಅಗಲೀಕರಣ ಆಸ್ಪತ್ರೆ, ರಸ್ತೆ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರಿನ ಯೋಜನೆಗಳು ಸೇರಿದಂತೆ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ ಕೀರ್ತಿ ಅವರದ್ದಾಗಿದೆ. ಬಂಡೆಪ್ಪ ಖಾಶೆಂಪುರ್ ರವರು, ಸಚಿವರಾಗಿದ್ದಾಗಲೆಲ್ಲಾ ಜಿಲ್ಲೆಗೆ ಹೆಚ್ಚಿನ ಅನುದಾನ ಒದಗಿಸಿಕೊಟ್ಟಿದ್ದಾರೆ. ಆ ಮೂಲಕ ತವರು ಜಿಲ್ಲೆಯ ಮೇಲಿನ ಕಾಳಜಿ ಏನೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಧಾನ – ಧರ್ಮ ಮಾಡುವ ಕುಟುಂಬದ ಮಾಣಿಕಪ್ಪ – ಹಣುಮಂತಮ್ಮ ಖಾಶೆಂಪುರ್ ದಂಪತಿಗಳ ಪುತ್ರರಾದ ಬಂಡೆಪ್ಪ ಖಾಶೆಂಪುರ್ ರವರು ತಂದೆಯವರ ಗುಣಗಳನ್ನು ಮೈಗೂಡಿಸಿಕೊಂಡು ಸಾಗುತ್ತಿದ್ದಾರೆ. ಕಷ್ಟ ಹೇಳಿಕೊಂಡು ತಮ್ಮ ಮನೆಗೆ ಬಂದವರನ್ನು ಯಾವತ್ತಿಗೂ ಬರಿಗೈಯಿಂದ ಕಳಿಸದ ಅವರು, ಜನರ ಕಷ್ಟಗಳಿಗೆ ಸ್ಪಂದಿಸುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಸಾಗುತ್ತಿದ್ದಾರೆ.ಇನ್ನೊಬ್ಬರ ನೋವುಗಳಿಗೆ ಸ್ಪಂಧಿಸುವ, ನೆರವು ನೀಡುವ ಸ್ವಚ್ಛವಾದ ಮನಸ್ಸನ್ನು ಹೊಂದಿರುವ ಬಂಡೆಪ್ಪ ಖಾಶೆಂಪುರ್ ರವರು ಅನೇಕ ಜನರ ಪಾಲಿಗೆ ಆಶ್ರಯದಾತರಾಗಿದ್ದಾರೆ. ಮಕ್ಕಳ ಶಿಕ್ಷಣ, ಆಸ್ಪತ್ರೆಯ ಖರ್ಚು, ಮದುವೆ, ಶುಭ ಕಾರ್ಯಗಳ ಖರ್ಚು ಕೊಡಿ ಎಂದು ತಮ್ಮ ಮನೆಯವರೆಗೂ ಬರುವ ಜನರಿಗೆ ಅವರು ಸಾಧ್ಯವಾದಷ್ಟು ಸಹಾಯ ಸಹಕಾರ ಮಾಡುತ್ತಾ ಸಾಗಿದ್ದಾರೆ. ಅನೇಕರ ಪಾಲಿಗೆ ಅವರು ಆಶ್ರಯದಾತರಾಗಿದ್ದಾರೆ.

ಯಾರ ಮನಸ್ಸು ನೋಯಿಸದೆ ಸದಾಕಾಲವೂ ಹಸನ್ಮುಖಿಯಾಗಿರುವ ಮಾಜಿ ಸಚಿವರು, ಜೆಡಿಎಸ್ ಪಕ್ಷದ ಹಿರಿಯ ನಾಯಕರು, ಬೀದರ್ ದಕ್ಷಿಣ ಕ್ಷೇತ್ರದ ಜನಪ್ರಿಯ ಮಾಜಿ ಶಾಸಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರ 60ನೇ ವರ್ಷದ ಜನ್ಮ ದಿನವಿಂದು. ಜನ್ಮ ದಿನದ ಶುಭ ಸಂದರ್ಭದಲ್ಲಿ ನಾವು ಕೂಡ ಅವರಿಗ ಶುಭ ಕೋರೋಣ. ಭಗವಂತ ಅವರಿಗೆ ಉತ್ತಮ ಆರೋಗ್ಯ ಕೊಟ್ಟು ಸದಾಕಾಲವೂ ಕಾಪಾಡಲಿ, ಅವರಿಗೆ ರಾಜಕೀಯವಾಗಿ ಇನ್ನೂ ಉನ್ನತಮಟ್ಟದ ಸ್ಥಾನಮಾನಗಳು ದೊರೆಯಲಿ, ಸಮಾಜದಲ್ಲಿ ಇನ್ನೂ ದೊಡ್ಡಮಟ್ಟದ ವ್ಯಕ್ತಿಯಾಗಿ ಬೆಳೆಯಲಿ ಎಂದು ಸಮಸ್ತ ಅಭಿಮಾನಿಗಳ ಪರವಾಗಿ ಶುಭ ಕೋರೋಣ.

**ಬೀದರ್ ಜಿಲ್ಲೆಯ ಅಭಿವೃದ್ಧಿಯ ಹರಿಕಾರ:**

ಮಾಜಿ ಸಚಿವರು, ಮಾಜಿ ಶಾಸಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರು ಕ್ಷೇತ್ರ ಪುನರ್ ವಿಂಗಡನೆಗೂ ಮೊದಲು ಬೀದರ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು. ಹಾಗ ಬೀದರ್ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ನೀಡಿದ್ದರು. ಕ್ಷೇತ್ರದ ಜನತೆಯ ಮೆಚ್ಚುಗೆ ಪಡೆದುಕೊಂಡು ಜನಪ್ರಿಯ ಶಾಸಕರಾಗಿ ಹೊರಹೊಮ್ಮಿದ್ದರು. ಬಳಿಕ ಕ್ಷೇತ್ರ ವಿಂಗಡನೆಯಿಂದಾಗಿ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದರು.

**ಬೀದರ್ ಜಿಲ್ಲೆಗೆ ಮೆಡಿಕಲ್ ಕಾಲೇಜ್ ತರುವಲ್ಲಿ ಯಶಸ್ವಿ:**

ರಾಜ್ಯದ ಗಡಿಜಿಲ್ಲೆ ಮತ್ತು ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟೆ ಹೊಂದಿರುವ ಬೀದರ್ ಜಿಲ್ಲೆಯನ್ನು ಅಭಿವೃದ್ಧಿ ಪಡಿಸಬೇಕೆಂಬ ಮತ್ತು ಜಿಲ್ಲೆಗೆ ಮೆಡಿಕಲ್ ಕಾಲೇಜು ತರಬೇಕು ಎಂಬ ಛಲದೊಂದಿಗೆ ಸಾಗಿದ ಬಂಡೆಪ್ಪ ಖಾಶೆಂಪುರ್ ರವರು ನಿರಂತರ ಹೋರಾಟದ ಮೂಲಕ ಮೆಡಿಕಲ್ ಕಾಲೇಜು ಸ್ಥಾಪಿಸುವ ಕೆಲಸದಲ್ಲಿ ಜಯಕಂಡಿದ್ದಾರೆ. ಮೆಡಿಕಲ್ ಕಾಲೇಜು ಸ್ಥಾಪನೆಯಿಂದ ಜಿಲ್ಲೆಯ ಜನತೆಗೆ ತುಂಬಾ ಅನುಕೂಲವಾಗಿದೆ.

**ಬೀದರ್ ನಗರದ ರಸ್ತೆಗಳ ಅಗಲೀಕರಣ:**

ಬೀದರ್ ನಗರದಲ್ಲಿರುವ ಮತ್ತು ಬೀದರ್ ಜಿಲ್ಲೆಯಲ್ಲಿನ ಕಿರಿದಾದ ರಸ್ತೆಗಳಿಂದ ಅನೇಕ ಸಮಸ್ಯೆಗಳನ್ನು ಜನ ಎದುರಿಸುತ್ತಿರುವ ಮತ್ತು ಅದರಿಂದ ಅಭಿವೃದ್ಧಿ ಕುಂಟಿತವಾಗುತ್ತಿರುವುದನ್ನು ಗಮನಿಸಿದ ಬಂಡೆಪ್ಪ ಖಾಶೆಂಪುರ್ ರವರು ಹೇಗಾದರು ಮಾಡಿ ರಸ್ತೆಗಳ ಅಗಲೀಕರಣ ಮಾಡಬೇಕೆಂಬ ದೃಢನಿರ್ಧಾರ ಕೈಗೊಂಡು ಬೀದರ್ ನಗರದ ಮತ್ತು ಜಿಲ್ಲೆಯಲ್ಲಿನ ಪ್ರಮುಖ ರಸ್ತೆಗಳ ಅಗಲೀಕರಣ ಕಾಮಗಾರಿಗೆ ಚಾಲನೆ ನೀಡಿದ್ದರು.



**ರಿಂಗ್ ರೋಡ್ ಗಳ ಸ್ಥಾಪನೆ:**

ಬೀದರ್ ಜಿಲ್ಲೆಯಲ್ಲಿನ ರಸ್ತೆ ಸಮಸ್ಯೆಗಳನ್ನು ಮನಗಂಡ ಮಾಜಿ ಶಾಸಕ ಬಂಡೆಪ್ಪ ಖಾಶೆಂಪುರ್ ರವರು, ರಿಂಗ್ ರೋಡ್ ಗಳ ಮೂಲಕ ಸುಗಮ ಸಂಚಾರ ವ್ಯವಸ್ಥೆ ಸಾಧ್ಯವೆಂದು ಅರಿತು ಜಿಲ್ಲೆಯಲ್ಲಿ ರಿಂಗ್ ರೋಡ್ ಸ್ಥಾಪನೆಗೆ ವಿವಿಧ ಯೋಜನೆಗಳ ಮೂಲಕ ಅನುದಾನ ತಂದು, ರಿಂಗ್ ರೋಡ್ ಗಳ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು.

**ಮೀನುಗಾರಿಕೆ ಮತ್ತು ಪಶುವಿಶ್ವವಿದ್ಯಾಲಯ ಸ್ಥಾಪನೆ:**

ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಲ್ಲಿಯೂ ಇರದ ಮೀನುಗಾರಿಕೆ ಮತ್ತು ಪಶುವಿಶ್ವವಿದ್ಯಾಲಯ ಮತ್ತು ಅಧ್ಯಯನ ಕೇಂದ್ರವನ್ನು ಗಡಿ ಜಿಲ್ಲೆ ಬೀದರ್ ಗೆ ತರುವಲ್ಲಿ ಬಂಡೆಪ್ಪ ಖಾಶೆಂಪುರ್ ರವರ ಶ್ರಮ ಬಹಳಷ್ಟಿದೆ. ಅವರ ನಿರಂತರ ಹೋರಾಟದಿಂದಾಗಿ ಜಿಲ್ಲೆಯಲ್ಲಿ ಮೀನುಗಾರಿಕೆ ಮತ್ತು ಪಶುವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದರಿಂದ ಜಿಲ್ಲೆಯ ಮತ್ತು ಈ ಭಾಗದ ಬಹುತೇಕರಿಗೆ ಬಹಳಷ್ಟು ಅನುಕೂಲವಾಗಿದೆ.

**ಬೀದರ್ ಉತ್ಸವ ಆರಂಭಿಸಿದ ಕೀರ್ತಿ ಬಂಡೆಪ್ಪರದ್ದು:**

ಬೀದರ್ ಎಂದರೇ ರಾಜ್ಯದ ಮತ್ತು ನೆರೆ ರಾಜ್ಯದ ಜನ ಕೀಳಾಗಿ ಕಾಣುವ ಪರಿಸ್ಥಿತಿ ಇದ್ದಂತ ಸಂದರ್ಭದಲ್ಲಿ ಅಧಿಕಾರಕ್ಕೆ ಬಂದ ಬಂಡೆಪ್ಪ ಖಾಶೆಂಪುರ್ ರವರು, ತಮ್ಮ ಸರ್ಕಾರದ ಅವಧಿಯಲ್ಲಿ ಬೀದರ್ ಉತ್ಸವ ಆರಂಭಿಸಿದರು. ಆ ಮೂಲಕ ಬೀದರ್ ಜಿಲ್ಲೆಯ ಮಹತ್ವವನ್ನು ರಾಜ್ಯದ ಜನತೆಗೆ ಮತ್ತು ಕೀಳಾಗಿ ಕಾಣುತ್ತಿದ್ದವರಿಗೆ ತೋರಿಸಿಕೊಡುವ ಮಹತ್ವದ ಕೆಲಸವನ್ನು ಅವರು ಮಾಡಿದರು. ಜಿಲ್ಲೆಯ ಕೀರ್ತಿ ಹೆಚ್ಚಿಸುವ ಕೆಲಸ ಅವರ ಸರ್ಕಾರ ಮಾಡಿತ್ತು.

**ಕೆರೆ ತುಂಬಿಸುವ ಯೋಜನೆ:**

ಬಂಡೆಪ್ಪ ಖಾಶೆಂಪುರ್ ರವರು ಸಮ್ಮಿಶ್ರ ಸರ್ಕಾರದ ಅವಧಿಗಳಲ್ಲಿ ಸಚಿವರಾಗಿದ್ದ ಎರಡು ಬಾರಿಯೂ ಕೂಡ ಜಿಲ್ಲೆಯ ಅಭಿವೃದ್ಧಿಗೆ ಆದ್ಯತೆ ನೀಡಿದ್ದರು. ಉಸ್ತುವಾರಿ ಸಚಿವರು ಆಗಿದ್ದ ಅವರು, ಜಿಲ್ಲೆಯಲ್ಲಿನ ಕೆರೆಗಳನ್ನು ತುಂಬಿಸುವ ಮತ್ತು ಕೆರೆ ಹುಳೆತ್ತುವ ಯೋಜನೆಗಳಿಗಾಗಿ ಬಜೆಟ್ ನಲ್ಲಿ ಸಾಕಷ್ಟು ಅನುದಾನ ಮೀಸಲಿಟ್ಟಿದ್ದರು. ಅನೇಕ ಯೋಜನೆಗಳಿಗೆ ಚಾಲನೆ ನೀಡಿದ್ದರು. ಅಷ್ಟೆ ಅಲ್ಲದೇ ಲಿಫ್ಟ್ ಎರಿಗೇಷನ್ ಕಾಮಗಾರಿಗಳಿಗೂ ಅನುದಾನ ಮೀಸಲಿಡಲಾಗಿತ್ತು.

**ಕೃಷಿ ಸಚಿವರಾಗಿ ಬಂಡೆಪ್ಪ ಖಾಶೆಂಪುರ್:**

ಬಂಡೆಪ್ಪ ಖಾಶೆಂಪುರ್ ರವರು ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದ ವೇಳೆಯಲ್ಲಿ ಕೃಷಿ ಸಚಿವರಾಗಿ ಅನೇಕ ಮಹತ್ವದ ಕಾರ್ಯಕ್ರಮಗಳನ್ನು ಅಂದಿನ ಮುಖ್ಯಮಂತ್ರಿಗಳಾಗಿದ್ದ ಹೆಚ್.ಡಿ ಕುಮಾರಸ್ವಾಮಿರವರ ಮೂಲಕ ಜಾರಿಗೊಳಿಸುವ ಕೆಲಸ ಮಾಡಿದ್ದರು. ಜನಪ್ರಿಯ ಕೃಷಿ ಸಚಿವರಾಗಿದ್ದ ಅವರು, ವಿದೇಶಗಳು, ಬೇರೆ ಬೇರೆ ರಾಜ್ಯಗಳಿಗೆ ಭೇಟಿ ನೀಡಿ ಅಲ್ಲಿನ ಕೃಷಿ ವ್ಯವಸ್ಥೆಗಳ ಬಗ್ಗೆ ಅಧ್ಯಯನ ಮಾಡಿದ್ದರು. ಅಲ್ಲಿನ ಕೃಷಿ ಪದ್ಧತಿಗಳನ್ನು ರಾಜ್ಯದಲ್ಲಿ ಜಾರಿಗೆ ತರುವ ನಿಟ್ಟಿನಲ್ಲಿ ಅವರು ಅನೇಕ ಯೋಜನೆಗಳನ್ನು ರೂಪಿಸಿದ್ದರು. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ರೈತರ, ಕೃಷಿಕಾರ್ಮಿಕರ ಒಳಿತಿಗಾಗಿ ಅನೇಕ ಯೋಜನೆಗಳನ್ನು ಅವರು ಜಾರಿಗೊಳಿಸಿದ್ದರು. ಆ ಮೂಲಕ ಕೃಷಿ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳಿಗೆ ಪ್ರಯತ್ನಿಸಿದ್ದರು.

**ಸಹಕಾರ ಸಚಿವರಾಗಿ ಬಂಡೆಪ್ಪ ಖಾಶೆಂಪುರ್:**

ಬಂಡೆಪ್ಪ ಖಾಶೆಂಪುರ್ ರವರು ಜೆಡಿಎಸ್ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಸಹಕಾರ ಸಚಿವರಾಗಿ ಕರ್ತವ್ಯನಿರ್ವಹಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಮಹತ್ವದ ಸುಧಾರಣೆಗಳು ಅವರ ಕಾಲದಲ್ಲಿ ಆಗಿವೆ. ರೈತರ ಸಾಲಮನ್ನಾದಂತ ಅನೇಕ ಯೋಜನೆಗಳನ್ನು ಬಂಡೆಪ್ಪ ಖಾಶೆಂಪುರ್ ರವರು ಸಚಿವರಾಗಿದ್ದ ವೇಳೆಯಲ್ಲಿ ಜಾರಿಗೊಳಿಸಲಾಗಿದೆ. ಬಂಡೆಪ್ಪ ಖಾಶೆಂಪುರ್ ರವರು ತಮಗೆ ನೀಡಿದ ಸಚಿವ ಸ್ಥಾನಗಳ ಮೂಲಕ ರಾಜ್ಯದ ಜನತೆಯ ಒಳಿತಿಗಾಗಿ ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ.

**ಸದನದಲ್ಲಿ ಧ್ವನಿ ಎತ್ತಿದ ಖಾಶೆಂಪುರ್:**

ಬಂಡೆಪ್ಪ ಖಾಶೆಂಪುರ್ ರವರು ಒಂದು ಬಾರಿ ಪಕ್ಷೇತರ ಶಾಸಕರಾಗಿ ಎರಡು ಬಾರಿ ಜೆಡಿಎಸ್ ಪಕ್ಷದ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅವರು ಪ್ರತಿ ಅಧಿವೇಶನದ ವೇಳೆಯಲ್ಲೂ ಕೂಡ ಸದನದಲ್ಲಿ ಅನೇಕ ಮಹತ್ವದ ಪ್ರಶ್ನೆಗಳನ್ನು ಎತ್ತುವ ಕೆಲಸ ಮಾಡಿದ್ದಾರೆ. ರಾಜ್ಯದ ನೆಲ, ಜಲ, ಭಾಷೆಗಳ ವಿಷಯದಲ್ಲಿ ಹಾಗೂ ರಾಜ್ಯದಲ್ಲಿನ ಗಂಭೀರ ವಿಷಯಗಳ ಬಗ್ಗೆ ಅವರು ಕಲಾಪಗಳಲ್ಲಿ ಮಾತನಾಡಿದ್ದಾರೆ.ರಾಜ್ಯದಲ್ಲಿ ಉಂಟಾಗಿರುವ ಮಹತ್ವದ ಸಮಸ್ಯೆಗಳ ಬಗ್ಗೆ, ಧಾರ್ಮಿಕ ತಾರತಮ್ಯಗಳ ಬಗ್ಗೆ, ಭಾಷೆ ವಿಷಯದಲ್ಲಿನ ಸಮಸ್ಯೆಗಳ ಬಗ್ಗೆ ಹೆಚ್ಚಾಗಿ ರಾಜ್ಯದ ರೈತರ, ಬಡವರ ಪರವಾಗಿ ಬಂಡೆಪ್ಪ ಖಾಶೆಂಪುರ್ ರವರು ಅದಿವೇಶನಗಳಲ್ಲಿ ಧ್ವನಿ ಎತ್ತಿದ್ದಾರೆ. ಚುಕ್ಕೆ ಗುರುತಿನ ಪ್ರಶ್ನೆ, ಗಮನ ಸೆಳೆಯುವ ಸೂಚನೆ, ಶೂನ್ಯ ವೇಳೆ ಸೇರಿದಂತೆ ಅನೇಕ ಸಂದರ್ಭದಲ್ಲಿ ಸದನದಲ್ಲಿ ಶಾಸಕರಾಗಿದ್ದ ಬಂಡೆಪ್ಪ ಖಾಶೆಂಪುರ್ ರವರು ಮಾತನಾಡಿದ್ದಾರೆ.

**ರೈತರ ಪರ ಸದನದಲ್ಲಿ ಧ್ವನಿ:**

ಮೂಲತ ಕೃಷಿ ಕುಟುಂಬದಿಂದ ಬಂದು ತಾವು ಕೂಡ ಕೃಷಿ ಕಾಯಕವನ್ನು ಮುಂದುವರೆಸಿಕೊಂಡು ಸಾಗುತ್ತಿರುವ ಬಂಡೆಪ್ಪ ಖಾಶೆಂಪುರ್ ರವರು, ಪ್ರತಿಯೊಂದು ಅಧಿವೇಶನದ ವೇಳೆಯಲ್ಲಿ ಕೂಡ ರೈತರ ಪರವಾಗಿ ಸದನದಲ್ಲಿ ಧ್ವನಿ ಎತ್ತುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಶಾಸಕರಾಗಿದ್ದಾಗ ಬಂಡೆಪ್ಪ ಖಾಶೆಂಪುರ್ ರವರು ಕೇಳುವ ಪ್ರಶ್ನೆಗಳಿಗೆ ಸರ್ಕಾರಗಳೇ ಉತ್ತರ ನೀಡದ ಘಟನೆಗಳು ಅನೇಕ ಬಾರಿ ನಡೆದಿವೆ.

**ಕಬ್ಬು ಬೆಳೆಗಾರರ ಪರವಾಗಿ ಸದನದಲ್ಲಿ ಧ್ವನಿ:**

ಶಾಸಕರಾಗಿದ್ದ ಬಂಡೆಪ್ಪ ಖಾಶೆಂಪುರ್ ರವರು ಬೀದರ್ ಜಿಲ್ಲೆಯ ಮತ್ತು ರಾಜ್ಯದ ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಅನೇಕ ಅಧಿವೇಶನಗಳಲ್ಲಿ ಧ್ವನಿ ಎತ್ತಿದ್ದಾರೆ. ಕಬ್ಬು ಬೆಳೆಗಾರ ರೈತರ ಸಮಸ್ಯೆಗಳನ್ನು ಪರಿಹರಿಸುವಂತೆ ಸರ್ಕಾರಗಳನ್ನು ಒತ್ತಾಯಿಸಿದ್ದಾರೆ. ರೈತರ ಬಾಕಿ ಹಣ ಪಾವತಿ ಸೇರಿದಂತೆ ಅನೇಕ ಸಮಸ್ಯೆಗಳಿಗೆ ಪರಿಹಾರ ಕೊಡಿಸುವ ಕೆಲಸವನ್ನು ಶಾಸಕರಾಗಿದ್ದಾಗ ಬಂಡೆಪ್ಪ ಖಾಶೆಂಪುರ್ ರವರು ಮಾಡಿದ್ದಾರೆ.

**ಕಾರಂಜಾ ಸಂತ್ರಸ್ತ ರೈತರ ಪರ ಧ್ವನಿ:**

ಶಾಸಕರಾಗಿದ್ದಾಗ ಬಂಡೆಪ್ಪ ಖಾಶೆಂಪುರ್ ರವರು ಕಾರಂಜಾ ಸಂತ್ರಸ್ತ ರೈತರ ಸಮಸ್ಯೆಗಳ ಬಗ್ಗೆ ಪ್ರತಿಬಾರಿಯ ಅಧಿವೇಶನದಲ್ಲಿ ಧ್ವನಿ ಎತ್ತಿದ್ದಾರೆ. ಆ ರೈತರ ನೋವುಗಳಿಗೆ ಸ್ಪಂಧಿಸುವ ಪ್ರಾಮಾಣಿಕ ಪ್ರಯತ್ನವನ್ನು ಅವರು ಮಾಡಿಕೊಂಡು ಸಾಗಿದ್ದಾರೆ. ರೈತರಿಗೆ ಪರಿಹಾರ ಒದಗಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದ ಮಟ್ಟದಲ್ಲಿ ಒತ್ತಡ ತರುವ ಕೆಲಸವನ್ನು ಶಾಸಕರಾಗಿ ಬಂಡೆಪ್ಪ ಖಾಶೆಂಪುರ್ ರವರು ಮಾಡಿದ್ದಾರೆ.

**ಸರ್ವ ಸಮಾಜಗಳೊಂದಿಗೆ ಉತ್ತಮ ಬಾಂಧವ್ಯ:**

ಬಂಡೆಪ್ಪ ಖಾಶೆಂಪುರ್ ರವರು ಸರ್ವ ಸಮಾಜದ ಜನರು ಇಷ್ಟಪಡುವ ಜನನಾಯಕರಾಗಿದ್ದಾರೆ. ಅವರು ಎಲ್ಲಾ ಜಾತಿ, ಧರ್ಮಗಳನ್ನು ಸಮಾನಾಗಿ ಕಾಣುವ ದೊಡ್ಡಗುಣವನ್ನು ಹೊಂದಿದ್ದಾರೆ. ಪ್ರತಿಯೊಂದು ಜಾತಿ, ಧರ್ಮದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವರು ಎಲ್ಲಾ ಜಾತಿ, ಜನಾಂಗದವರು ಇಷ್ಟ ಪಡುವ ಸರಳತೆಯ ಸಾಹುಕಾರರಾಗಿದ್ದಾರೆ.

**ಕಳಂಕರಹಿತ ರಾಜಕಾರಣಿ:**

ಬಂಡೆಪ್ಪ ಖಾಶೆಂಪುರ್ ರವರು, ಕಳಂಕರಹಿತ ರಾಜಕಾರಣಿಯಾಗಿದ್ದಾರೆ. ಎಲ್ಲರನ್ನೂ ಪ್ರೀತಿಯಿಂದ ಕಾಣುವ ಅವರನ್ನು ಪ್ರತಿಯೊಬ್ಬರು ಇಷ್ಟಪಡುತ್ತಾರೆ. ಅದರಿಂದ ಅವರು ಜನತೆಯ ಪ್ರೀತಿಯ ನಾಯಕರಾಗಿದ್ದಾರೆ.

**ಕೊಡುಗೈ ಧಾನಿ ಬಂಡೆಪ್ಪ ಖಾಶೆಂಪುರ್:**

ಬಂಡೆಪ್ಪ ಖಾಶೆಂಪುರ್ ರವರು ಕೊಡುಗೈ ಧಾನಿಗಳ ಕುಟುಂಬದಿಂದ ಬಂದವರಾಗಿದ್ದಾರೆ. ಅವರು ರಾಜಕೀಯಕ್ಕೆ ಕಾಲಿಡುವ ಮೊದಲೇ ಧಾನ ಧರ್ಮ ಮಾಡುವುದನ್ನು ಮೈಗೂಡಿಸಿಕೊಂಡು ಬಂದಿದ್ದಾರೆ. ಅವರ ತಂದೆಯ ಕಾಲದಿಂದಲೂ ಧಾನ ಧರ್ಮ ಮಾಡುತ್ತಿದ್ದ ಕುಟುಂಬ ಈಗಲೂ ಧಾನ ಧರ್ಮ ಮಾಡುತ್ತಾ ಸಾಗಿದೆ. ಕಷ್ಟ ಇದೆ ಅಂತ ತಮ್ಮ ಬಳಿ ಬಂದವರಿಗೆ ಬಂಡೆಪ್ಪ ಖಾಶೆಂಪುರ್ ರವರು ಆಸರೆಯಾಗುತ್ತಾರೆ.

ರಾಜ್ಯಾದ್ಯಂತ ಅಭಿಮಾನಿಗಳನ್ನು ಹೊಂದಿರುವ ನಾಯಕ:

ಮುದ್ದಿನ ಮನಸ್ಸು ಹೊಂದಿರುವ ಬಂಡೆಪ್ಪ ಖಾಶೆಂಪುರ್ ರವರನ್ನು ಇಷ್ಟ ಪಡುವ ಅಭಿಮಾನಿಗಳು ರಾಜ್ಯದ ಮೂಲೇಮೂಲೆಗಳಲ್ಲಿದ್ದಾರೆ. ಬಂಡೆಪ್ಪ ಖಾಶೆಂಪುರ್ ರವರನ್ನು ಕಂಡರೇ ಸಾಕು ಕುಣಿದು ಕುಪ್ಪಳಿಸುವ ಅಭಿಮಾನಿಗಳು ಪ್ರತಿಯೊಂದು ಜಿಲ್ಲೆಯಲ್ಲಿದ್ದಾರೆ. ಅಭಿಮಾನಿಗಳು ಬಂಡೆಪ್ಪ ಖಾಶೆಂಪುರ್ ರವರ ಮಾತಿನ ಶೈಲಿ, ಗುರುತಿಸಿ ಮಾತನಾಡಿಸುವ ಗುಣವನ್ನು ಇಷ್ಟ ಪಟ್ಟಿದ್ದಾರೆ.

**24X7 ಜನ ಸೇವೆಯಲ್ಲಿ ಬಂಡೆಪ್ಪ ಖಾಶೆಂಪುರ್:**

ಬಂಡೆಪ್ಪ ಖಾಶೆಂಪುರ್ ರವರು 24ಫ7 ಜನಸೇವೆಯಲ್ಲಿರುತ್ತಾರೆ ಎಂದರೇ ಅತಿಶಯೋಕ್ತಿಯಾಗದು. ಬಂಡೆಪ್ಪ ಖಾಶೆಂಪುರ್ ರವರು ತಮ್ಮಕುಟುಂಬದ ಸದಸ್ಯರಿಂದ ಕ್ಷೇತ್ರದ ಜನತೆಯವರೆಗೂ ಒಂದೇ ಮೊಬೈಲ್ ನಂಬರ್ ಬಳಸುತ್ತಿದ್ದಾರೆ. ತಮಗೆ ಬರುವ ಪ್ರತಿಯೊಂದು ಕರೆಗಳಿಗೂ ಸ್ಪಂದಿಸುವ ಅವರು, ಪ್ರತಿಯೊಬ್ಬರ ಸಂಪರ್ಕಕ್ಕೂ ಸಿಗುವ ಸರಳ ರಾಜಕಾರಣಿಯಾಗಿದ್ದಾರೆ.

ಅಷ್ಟೇ ಅಲ್ಲದೇ ಅವರು ಇರುವಲ್ಲಿಗೆ ದಿನದ ಯಾವ ಸಮಯದಲ್ಲೂ ಕೂಡ ಜನತೆ ಬರಬಹುದಾಗಿದೆ. ಅವಶ್ಯಕತುರ್ತು ಸಂದರ್ಭಗಳಲ್ಲಿ ಮಧ್ಯರಾತ್ರಿಯಲ್ಲೂ ಬಂದರು ಕೂಡ ಜನರು ಅವರನ್ನು ಭೇಟಿಯಾಗಬಹುದಾಗಿದೆ. ಬೆಳಗ್ಗೆ ವಾಕಿಂಗ್ ಮಾಡುವ ವೇಳೆಯಿಂದ ರಾತ್ರಿ ಮಲಗುವ ಸಮಯದವರೆಗೂ ಅವರು ಜನರ ಸಂಪರ್ಕದಲ್ಲಿರುವ ದೊಡ್ಡತನವನ್ನು ಹೊಂದಿದ್ದಾರೆ. ಅದರಿಂದಲೇ ಅವರನ್ನು ಜನತೆ ಇಷ್ಟಪಡುತ್ತಿದ್ದಾರೆ.ಒಟ್ಟಾರೆಯಾಗಿ 61ನೇ ವರ್ಷದ ಹುಟ್ಟು ಹಬ್ಬದ ಶುಭ ಸಂದರ್ಭದಲ್ಲಿರುವ ಬಂಡೆಪ್ಪ ಖಾಶೆಂಪುರ್ ರವರಿಗೆ ಭಗವಂತ ಉತ್ತಮ ಆರೋಗ್ಯ ಭಾಗ್ಯ ಕೊಟ್ಟು ಕಾಪಾಡಲಿ. ರಾಜಕೀಯ ಜೀವನದಲ್ಲಿ ಇನ್ನೂ ಉನ್ನತ ಸ್ಥಾನಮಾನಗಳು ಅವರಿಗೆ ಸಿಗಲಿ. ರಾಜ್ಯ, ರಾಷ್ಟ್ರ, ಅಂತರಾಷ್ಟ ಮಟ್ಟದಲ್ಲಿ ಒಳ್ಳೆಯ ಹೆಸರು ಅವರಿಗೆ ದೊರೆಯಲಿ. ಅವರಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ಸದಕಾಲವೂ ಒಳಿತಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ. ಮತ್ತೊಮ್ಮೆ ಬಂಡೆಪ್ಪ ಖಾಶೆಂಪುರ್ ರವರಿಗೆ ಜನ್ಮ ದಿನದ ಶುಭಾಶಯಗಳನ್ನು ತಿಳಿಸೋಣ.

ವಿಶೇಷ ಲೇಖನ: ರಾಜಕುಮಾರ್ ಆರ್. ಹಡಪದ ವರದಿಗಾರರು
ಮಲ್ಲಮ್ಮ ನುಡಿ ಪತ್ರಿಕೆ ಚಿಟಗುಪ್ಪ

# ಬರಡು ಭೂಮಿಯಲ್ಲಿ ನೀರು ಉಕ್ಕಿಸಿದ ರೈತ ಶಾಮರಾವ್ ಬಿರಾದಾರ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜೂ. 14 : ಔರಾದ್ ತಾಲ್ಲೂಕಿನ ಬೋರಾಳ ಗ್ರಾಮದ ರೈತರೊಬ್ಬರು ಬರಡು ಭೂಮಿಯಲ್ಲಿ ಬಾವಿ ತೋಡಿ ನೀರು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.





ಉತ್ಸಾಹಿ ರೈತ ಶಾಮರಾವ್ ಬಿರಾದಾರ (55) ಬೇಸಿಗೆಯಲ್ಲಿ ಮೂರು ತಿಂಗಳು ಬೆವರು ಸುರಿಸಿ 24 ಅಡಿ ಆಳದ ಬಾವಿ ತೋಡಿದ್ದು, ಅದರಲ್ಲಿ ಭರಪೂರ ನೀರು ಬಂದಿದೆ.

ಶಾಮರಾವ್ ಅವರು ನಾಲ್ಕು ಎಕರೆ ಜಮೀನು ಹೊಂದಿದ್ದಾರೆ. ಅದು ಗುಡ್ಡ, ಕಲ್ಲು, ಮುಳ್ಳಿನ ಪೊದೆಗಳಿಂದ ಕೂಡಿತ್ತು. ಅದನ್ನೆಲ್ಲ ತೆಗೆದು ಭೂಮಿಯನ್ನು ಹದ ಮಾಡಿದ್ದಾರೆ. ನರೇಗಾದಡಿ ?1.50 ಲಕ್ಷ ನೆರವು ಪಡೆದು 24 ಅಡಿ ಆಳ ಹಾಗೂ 36 ಅಡಿ ಸುತ್ತಳತೆಯ ಬಾವಿ ಕೊರೆದಿದ್ದಾರೆ. ಬಾವಿಯಲ್ಲಿ 12 ಅಡಿಯಷ್ಟು ನೀರಿದ್ದು, ರೈತನ ಸಾಧನೆಗೆ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ನಾಲ್ಕು ಎಕರೆ ಒಣ ಭೂಮಿಯಲ್ಲಿ ಎಷ್ಟೇ ಕಷ್ಟಪಟ್ಟರೂ ವರ್ಷಕ್ಕೆ ಸಿಗುವುದು ?50 ಸಾವಿರದಿಂದ ?60 ಸಾವಿರ ಮಾತ್ರ. ಹೀಗಾಗಿ ಕೃಷಿಯ ಜೊತೆಗೆ ಜಾನುವಾರು ಖರೀದಿ–ಮಾರಾಟ ವ್ಯಾಪಾರ ಮಾಡಿಕೊಂಡಿದ್ದೇನೆ. ಕೃಷಿ ಕ್ಷೇತ್ರದಲ್ಲಿ ಬೆಳೆಯಬೇಕು ಎಂಬ ಉದ್ದೇಶದಿಂದ ನರೇಗಾ ಯೋಜನೆಯಡಿ ಕಾರ್ಮಿಕರ ಸಹಾಯದಿಂದ ಬಾವಿ ತೋಡಿದ್ದೇನೆ. ಬಾವಿಯ ಮೇಲ್ಭಾಗದ ಸುತ್ತಲೂ ಎರಡು ಅಡಿಯಷ್ಟು ಗೋಡೆ ಕಟ್ಟಿದ್ದೇನೆ. ನನ್ನ ಕೈಯಿಂದಲೂ ?2 ಲಕ್ಷ ಖರ್ಚು ಮಾಡಿದ್ದೇನೆ' ಎಂದು ಶಾಮರಾವ್ ವಿವರಿಸುತ್ತಾರೆ.

'ಬಾವಿಗೆ ವಿದ್ಯುತ್ ಸಂಪರ್ಕ ಹಾಗೂ ಮೋಟರ್ ವ್ಯವಸ್ಥೆಯಾದರೆ ಈರುಳ್ಳಿ, ತರಕಾರಿ ಬೆಳೆದು ವರ್ಷಕ್ಕೆ ?4 ಲಕ್ಷದಿಂದ ?5 ಲಕ್ಷದವರೆಗೂ ಲಾಭ ಪಡೆಯಬಹುದು. ಸದ್ಯ ವಿದ್ಯುತ್ ವ್ಯವಸ್ಥೆ ಇಲ್ಲ. ಇದಕ್ಕಾಗಿ ಜೆಸ್ಕಾಂಗೆ ?40 ಸಾವಿರ ಠೇವಣಿ ಕಟ್ಟಬೇಕು. ಒಂದು ವಿದ್ಯುತ್ ಕಂಬಕ್ಕೆ ?12 ಸಾವಿರ ಲೆಕ್ಕದಲ್ಲಿ ಒಟ್ಟು 12 ಕಂಬಕ್ಕೆ ?1.44 ಲಕ್ಷ ಕಟ್ಟಿದರೆ ವಿದ್ಯುತ್ ವ್ಯವಸ್ಥೆ ಆಗುತ್ತದೆ. ಆದರೆ, ಅಷ್ಟು ಹಣ ನನ್ನ ಬಳಿ ಇಲ್ಲ. ಅಕ್ಕಪಕ್ಕದ ರೈತರು ಒಪ್ಪಿದರೆ ಎಲ್ಲರೂ ಸೇರಿ ಈ ಕೆಲಸ ಮಾಡುತ್ತೇವೆ. ಇಲ್ಲವಾದಲ್ಲಿ ಸದ್ಯ ಡೀಸೆಲ್ ಮೋಟರ್ ವ್ಯವಸ್ಥೆ ಮಾಡಿಕೊಳ್ಳಲು ಯೋಚಿಸಿದ್ದೇನೆ' ಎಂದು ಅವರು ಹೇಳುತ್ತಾರೆ. 'ನಾನು ಹಾಗೂ ಅಕ್ಕಪಕ್ಕದ ನಾಲ್ಕೈದು ರೈತರು ಕಷ್ಟಪಟ್ಟು ಬಾವಿ ತೋಡಿದ್ದೇವೆ. ಸರ್ಕಾರ 12 ಕಂಬ ಹಾಕಿ ವಿದ್ಯುತ್ ವ್ಯವಸ್ಥೆ ಮಾಡಿಕೊಟ್ಟರೆ ತುಂಬಾ ಉಪಕಾರ ಆಗಲಿದೆ' ಎಂದು ರೈತ ಶಾಮರಾವ್ ಮನವಿ ಮಾಡಿದ್ದಾರೆ.

ಶಿವಕುಮಾರ ಘಾಟೆ, ಸಹಾಯಕ ನಿರ್ದೇಶಕ, ತಾ.ಪಂ. ಔರಾದ್ರೈತ ಶಾಮರಾವ್ ನರೇಗಾ ಯೋಜನೆಯಲ್ಲಿ ತೋಡಿದ ಬಾವಿ ಬಹಳ ಅದ್ಭುತವಾಗಿದೆ. ಬೇಸಿಗೆಯಲ್ಲೂ 12 ಅಡಿಯಷ್ಟು ನೀರು ಬಂದಿದೆ. ಇದು ಇತರ ರೈತರಿಗೂ ಪ್ರೇರಣೆಯಾಗಲಿದೆ.

# ಬಾಗಲಕೋಟೆಯಲ್ಲಿ ಶಿಶು ಅಪಹರಣದ ಘಟನೆ
# ಮರಳಿ ತಾಯಿ ಮಡಿಲು ಸೇರಿದ ಶಿಶು!

ಮಲ್ಲಮ್ಮನುಡಿವಾರ್ತೆಬಾಗಲಕೋಟೆ,ಜೂ.14–ನವನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಿಗ್ಗೆ ಕಳುವಾಗಿದ್ದ ಶಿಶು ಕೆಲವೇ ಗಂಟೆಗಳಲ್ಲಿ ಮರಳಿ ತಾಯಿ ಮಡಿಲು ಸೇರುವ ಮೂಲಕ ಶಿಶು ನಾಪತ್ತೆ ಪ್ರಕರಣ ಸುಖ್ಯಾಂತ ಕಂಡಿತು. ಜಿಲ್ಲೆಯ ಬಾದಾಮಿ ಮೂಲದ ಮಹಬೂಬಿ ನದಾಫ ಎಂಬ ಮಹಿಳೆ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಮಗು ಆರೋಗ್ಯವಾಗಿದ್ದರೂ ನರ್ಸ ಎಂದು ಹೇಳಿ ಬಂದ ಮಹಿಳೆಯೊಬ್ಬಳು ಶಿಶುವಿಗೆ ಉಸಿರಾಟದ ತೊಂದರೆಯಿದೆ ಐಸಿಯು ನಲ್ಲಿ ಇಡಬೇಕು ಎಂದು ಹೇಳಿ ಎತ್ತಿಕೊಂಡು ಹೋಗಿದ್ದಾಳೆ.



ನಂತರ ಈ ಬಗ್ಗೆ ವಿಚಾರಿಸಲಾಗಿ ಶಿಶು ಕಳುವಾಗಿರುವುದು ಬೆಳಕಿಗೆ ಬಂದಿದೆ. ವಿಷಯ ಪೋಲಿಸರಿಗೆ ತಿಳಿದು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಅಧಿಕಾರಿ ಮಹಾಂತೇಶ ಜಿದ್ದಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಹೋಗಿದ್ದಾರೆ. ನಂತರ ಆಸ್ಪತ್ರೆಯ ಚಿಕ್ಕಮಕ್ಕಳ ವೈದ್ಯೆ ರೋಗಿಗಳ ತಪಾಸಣೆಗೆ ವಾರ್ಡಗಳಿಗೆ ಭೇಟಿ ನೀಡಿದಾಗ, ಕಳುವಾದ ಶಿಶುವಿನ ತಾಯಿ ದಾಖಲಾಗಿದ್ದ ಪಕ್ಕದ ವಾರ್ಡಿನಲ್ಲಿ ಮಹಿಳೆಯೊಬ್ಬಳ ಬಳಿಯಿದ್ದ ಮಗುವಿನ ಬಗ್ಗೆ ಸಂಶಯ ಮೂಡಿದೆ. ತಕ್ಷಣ ಮಹಿಳಾ ಪೋಲಿಸರನ್ನು ಕರೆಯಿಸಿ ವಿಚಾರಣೆ ನಡೆಸಿದಾಗ ಶಿಶು ಕದ್ದ ಮಹಿಳೆ ಮಗು ತನ್ನದೆಂದು ವಾದಿಸಿದ್ದಾಳೆ. ಕೊನೆಗೆ ಶಿಶುವಿನ ತಾಯಿ ಮಹಬೂಬಿಯನ್ನು ಮಗುವನ್ನು ನೋಡಲು ಹೇಳಿದಾಗ ಆಕೆ ಮಗು ನನ್ನದು ಎಂದು ಹೇಳಿದ್ದಾಳೆ. ಆಗ ಪೋಲಿಸರು ಶಿಶು ಕದ್ದ ಸಾಕ್ಷಿ ಎಂಬಾಕೆಯನ್ನು ವಿಚಾರಿಸಲಾಗಿ ಕದ್ದಿರುವುದನ್ನು ಒಪ್ಪಿಕೊಂಡಿದ್ದಾಳೆ.

ಪೋಲಿಸರು ಶಿಶು ಕಳ್ಳಿಯನ್ನು ಬಂಧಿಸಿದ್ದು, ತನಿಖೆ ಕೈಗೊಂಡಿದ್ದಾರೆ. ಶುಕ್ರವಾರ ಬೆಳಿಗ್ಗೆಯಿಂದ ಚರ್ಚೆಗೆ ಗ್ರಾಸ ಒದಗಿಸಿದ್ದ ಹಾಗೂ ಭಯ ಹುಟ್ಟಿಸಿದ್ದ ಶಿಶು ಅಪಹರಣ ಪ್ರಕರಣ ಕಳುವಾಗಿದ್ದ ಮಗು ತಾಯಿಯ ಮಡಿಲು ಸೇರುವ ಮೂಲಕ ಸುಖಾಂತ್ಯ ಕಂಡಿತು.

## ಬೈಕ್ ಅಪಘಾತ: ಯುವಕ ಸಾವು

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜೂ.14–ದ್ವಿಚಕ್ರ ವಾಹನ ಅಪಘಾತಕ್ಕೀಡಾಗಿ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿದ ಘಟನೆ ನವನಗರದ ನಗರಸಭೆ ಬಳಿ ಶುಕ್ರವಾರ ರಾತ್ರಿ ಸಂಭವಿಸಿದೆ.

ನವನಗರದ ಸೆಕ್ಟರ್ ನಂ.12 ರ ನಿವಾಸಿಯಾಗಿರುವ ಯುವಕ ಶಿವಲಿಂಗಯ್ಯ ಷಡಕ್ಷರಯ್ಯ ಹಿರೇಮಠ (28) ಬೈಕ್ ಚಲಾಯಿಸಿಕೊಂಡು ಹೋಗುವಾಗ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಸಾವನ್ನಪ್ಪಿದ್ದಾನೆ. ನವನಗರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

# ಬೆಂಗಳೂರು-ಮೈಸೂರಿನಂತೆ ಕಲ್ಯಾಣದ ಅಭಿವೃದ್ಧಿಗೂ ಒತ್ತು ಕೊಡಿ:ಡಾ.ಖರ್ಗೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ,ಜೂ.14:ಬೆಂಗಳೂರು ಸಿಂಗಾಪೂರ ಮಾಡುವತ್ತ ನಮ್ಮ ಸರ್ಕಾರ ಹೆಜ್ಜೆ ಇಟ್ಟಿರುವುದು ಸಂತೋಷದ ವಿಚಾರ. ಆದರೆ ಕಲ್ಯಾಣ ಕರ್ನಾಟಕ ಭಾಗವನ್ನು ಬೆಂಗಳೂರು–ಮೈಸೂರು ಮಾದರಿಯಲ್ಲಿ ಅಭಿವೃದ್ಧಿಯಾದರೆ ಇಲ್ಲಿನ ಜನ ರಾಜ್ಯ ಸರ್ಕಾರಕ್ಕೆ ಚಿರರುಣಿಯಾಗುತ್ತದೆ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಡಾ.ಮಲ್ಲಿಕಾರ್ಜುನ ಖರ್ಗೆ ಹೇಳಿದರು.



ಯಾದಗಿರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಶನಿವಾರ ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ "ಆರೋಗ್ಯ ಅವಿಷ್ಕಾರ" ಕಾರ್ಯಕ್ರಮದಡಿ ಭಾಗವಹಿಸಿ ಮಾತನಾಡಿದ ಅವರು, ಸಿ.ಎಂ. ಸಿದ್ದರಾಮಯ್ಯ ನವರ ಮೈಸೂರು ಮತ್ತು ಡಿ.ಕೆ.ಶಿವಕುಮಾರ ಅವರ ಬೆಂಗಳೂರಿನಂತೆ ಈ ಪ್ರದೇಶದ ಅಭಿವೃದ್ಧಿ ಮಾಡಿದರೆ ಜನ ನಿಮ್ಮನ್ನು ಮರೆಯಲ್ಲ ಎಂದು ವೇದಿಕೆ ಮೇಲಿದ್ದ ಸಿ.ಎಂ.ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಸಲಹೆ ನೀಡಿದರು.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸಕ್ತ 2025–26ನೇ ಸಾಲಿಗೆ 5,000 ಕೋಟಿ ರೂ. ಅನುದಾನ ನೀಡಿದ್ದು, ಅಷ್ಟು ಹಣ ಇದೇ ವರ್ಷದಲ್ಲಿ ಖರ್ಚು ಮಾಡುವ ಮೂಲಕ ಪ್ರದೇಶದ ಜನರ ಅಭ್ಯುದಯಕ್ಕೆ ಶ್ರಮಿಸಬೇಕು. ಇಂದಿಲ್ಲಿ ಚಾಲನೆ ನೀಡಿದ ಎಲ್ಲಾ ಕೆಲಸಗಳು ಇದೇ ವರ್ಷದಲ್ಲಿ ಪೂರ್ಣಗೊಳಿಸಿ ಮುಂದಿನ ವರ್ಷ ಮತ್ತೆ ಹೊಸ ಯೋಜನೆಗಳತ್ತ ಮುಂದಾಗಬೇಕು ಎಂದರು.

ಪ್ರದೇಶದಲ್ಲಿ ಶಿಕ್ಷಕರ ಕೊರತೆ ಕಾರಣ ಇಲ್ಲಿನ ಶಿಕ್ಷಣ ವ್ಯವಸ್ಥೆ, ಗುಣಮಟ್ಟ ಕುಂಠಿತವಾಗಿದೆ. ಗಣಿತ, ವಿಜ್ಞಾನ, ಆಂಗ್ಲ ಶಿಕ್ಷಕರ ಕೊರತೆ ಹೆಚ್ಚಿದೆ. ಬೇರೆ ಪ್ರದೇಶದಿಂದ ನೇಮಕವಾದ ಶಿಕ್ಷಕರು ಒಂದೇ ವರ್ಷದಲ್ಲಿ ವರ್ಗಾವಣೆ ಮಾಡಿಕೊಂಡು ಹೋಗುವ ದುಸ್ಥಿತಿ ಇಲ್ಲಿದೆ. ಪರಿಣಾಮ ಎಸ್.ಎಸ್.ಎಲ್.ಸಿ, ಪಿ.ಯು.ಸಿಯಲ್ಲಿ ಪ್ರದೇಶದ ಜಿಲ್ಲೆಗಳನ್ನು ರ್‍ಯಾಂಕ್ ಪಟ್ಟಿಯಲ್ಲಿ ಕೆಳಗಿನಿಂದ ನೋಡಬೇಕಾದ ಅನಿವಾರ್ಯತೆವಿದೆ. ಪ್ರದೇಶದಲ್ಲಿ ಉದ್ಯೋಗ ನೇಮಕಾತಿಗೆ 371ಜೆ ಕಾಯ್ದೆಯಲ್ಲಿ ಹಣಕಾಸು ಇಲಾಖೆ ಅನುಮೋದನೆ ಪಡೆಯುವ ಅವಶ್ಯಕತೆ ಇಲ್ಲ. ಹೀಗಾಗಿ ಸರ್ಕಾರ ಹೆಚ್ಚಿನ ಮುತುವರ್ಜಿ ವಹಿಸಿ ಸ್ಥಳೀಯವರಿಗೆ ಉದ್ಯೋಗ ನೀಡುವತ್ತ ಗಮನಹರಿಸಬೇಕು ಎಂದರು.

ಕಲ್ಯಾಣದ ಅಭಿವೃದ್ಧಿ ರಥ–ಕ್ಕೆ ಚಾಲನೆ: ರಾಜ್ಯದ ಉಪ ಮುಖ್ಯಮಂತ್ರಿ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ ಅವರು ಮಾತನಾಡಿ, ಇಂದಿಲ್ಲಿ ಪ್ರದೇಶದ ಆರೋಗ್ಯ ಸುಧಾರಣೆಗೆ 411.88 ಕೋಟಿ ರೂ. ಕಾಮಗಾರಿಗೆ ಚಾಲನೆ ನೀಡಿರುವುದು ಪ್ರದೇಶದ ಆರೋಗ್ಯ ಕ್ರಾಂತಿಗೆ ಮುನ್ನುಡಿ ಬರೆದಿದೆ. ಇಂದಿಲ್ಲಿ ಪ್ರದೇಶದ ಅಭಿವೃದ್ಧಿ ರಥಕ್ಕೆ ನಾವು ಚಾಲನೆ ನೀಡಿದ್ದೇವೆ ಎಂದರು.

ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಜಾರಿಗೆ ತಂದಿದ್ದು, ಜನರ ಬದುಕು ಗಟ್ಟಿಗೊಳಿಸಿವೆ. ವಿರೋಧ ಪಕ್ಷಗಳು ಏನೇ ಹೇಳಿದರು ಬಡವರ ಹೊಟ್ಟೆ ತುಂಬಿಸುವ ಯೋಜನೆ ಮುಂದುವರೆಯಲಿವೆ ಎಂದ ಅವರು ಗ್ಯಾರಂಟಿ ಜೊತೆಗೆ ಆರೋಗ್ಯ, ಶಿಕ್ಷಣ, ರಸ್ತೆ, ಗ್ರಾಮೀಣಾಭಿವೃದ್ಧಿ, ಉದ್ಯೋಗಕ್ಕೆ ಹೆಚ್ಚಿನ ಒತ್ತು ನೀಡುವ ಕೆಲಸ ನಮ್ಮ ಸರ್ಕಾರ ಮಾಡುತ್ತಿದೆ. ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ 371ಜೆ ಜಾರಿಗೆ ತಂದ ಡಾ.ಮಲ್ಲಿಕಾರ್ಜುನ ಖರ್ಗೆ ಅವರ ಕಾರ್ಯ ಶತ–ಶತಮಾನದ ವರೆಗೂ ಜನ ಮರೆಯಲು ಸಾಧ್ಯವಿಲ್ಲ ಎಂದರು.

ಪಕ್ಷಭೇದ ಮರೆತು ಅಭಿವೃದ್ಧಿ ಕಾರ್ಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ್ ಮಾತನಾಡಿ, ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆ.ಕೆ.ಆರ್.ಡಿ.ಬಿ ಮಂಡಳಿ ಸಹಯೋಗದೊಂದಿಗೆ 857 ಕೋಟಿ ರೂ. ವೆಚ್ಚದ ಆರೋಗ್ಯ ಇಲಾಖೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಅದರಲ್ಲಿ ಮೊದಲನೇ ಹಂತವಾಗಿ 411 ಕೋಟಿ ರೂ. ವೆಚ್ಚದ ಕೆಲಸಕ್ಕೆ ಇಂದಿಲ್ಲಿ ಚಾಲನೆ ನೀಡಿದ್ದು, ನಾಳೆಯಿಂದಲೇ ಕೆಲಸ ಶುರುವಾಗಲಿದೆ. ಮುಂದಿನ 2–3 ತಿಂಗಳಲ್ಲಿ ಉಳಿದ 453 ಕೋಟಿ ರೂ. ಕೆಲಸಕ್ಕೂ ಚಾಲನೆ ನೀಡಲಾಗುವುದು. ನಾವು ಪಕ್ಷ ಬೇಧ ಮರೆತು ಪ್ರದೇಶದ ಎಲ್ಲಾ ಕ್ಷೇತ್ರದಲ್ಲಿ ಆರೋಗ್ಯ ಸಂಸ್ಥೆಗಳ ಸುಧಾರಣೆಗೆ ಮುಂದಾಗಿದ್ದೇವೆ ಎಂದರು.

ಆರೋಗ್ಯ ಶಿಕ್ಷಣ ಅಭಿವೃದ್ಧಿಯಾಗದ ಹೊರತು ಸರ್ವಾಂಗೀಣ ಅಭಿವೃದ್ಧಿ ಅಸಾಧ್ಯ. ಪ್ರದೇಶದಲ್ಲಿ ಮಾನವ ಅಭಿವೃದ್ಧಿ ಉತ್ತಮಗೊಳಿಸಲು ಇಂದಿಲ್ಲಿ ಸುಮಾರು 41 ಕಾಮಗಾರಿಗಳಿಗೆ ಚಾಲನೆ ದೊರೆತಿದೆ. ಮುಂದಿನ ದಿನದಲ್ಲಿ ಶಹಾಪೂರ, ದೇವದುರ್ಗದಲ್ಲಿ ತಲಾ 19 ಕೋಟಿ ರೂ. ವೆಚ್ಚದಲ್ಲಿ ತಾಯಿ–ಮಕ್ಕಳ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.